ಬೀದರ ▪ ಕಲಬುರಗಿ ▪ ಯಾದಗಿರಿ ▪ ರಾಯಚೂರ ▪ ಕೊಪ್ಪಳ ▪ ಬಳ್ಳಾರಿ ▪ ಬಾಗಲಕೋಟೆ ▪ ವಿಜಯಪೂರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಸಾರ
Postal Registration No :BDR/ 054/2024-2026 ▪ Email:mallammanudi@gmail.com

# ಮಲ್ಲಮ್ಮ ನುಡಿ

ಸತ್ಯಮೇವ ಜಯತೆ

Mallamma Nudi Regional Newspaper

ಸಂಪಾದಕರು: ರಮೇಶ ರೆಡ್ಡಿ ಮೊ: 9448604450 ಪ್ರಾದೇಶಿಕ ಕನ್ನಡ ದಿನಪತ್ರಿಕೆ

VOLUME-ಸಂಪುಟ:12 | ISSUE- ಸಂಚಿಕೆ: 323 | PAGE-ಪುಟ 8 | ಸೋಮವಾರ – 23-12-2024, ಬೀದರ | RNINO:KARKAN/2011/48371 | RS.ಬೆಲೆ 2/–

## ಸಮಗ್ರ ಕರ್ನಾಟಕ ಅಭಿವೃದ್ಧಿಗೆ ಬದ್ಧ ಸಿದ್ಧರಾಮಯ್ಯ

### ಜಯದೇವ ಹೃದ್ರೋಗ ಆಸ್ಪತ್ರೆ ಲೋಕಾರ್ಪಣೆ:

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಡಿ.22–ಕಲ್ಯಾಣ ಕರ್ನಾಟಕ,ಮುಂಬೈ ಕರ್ನಾಟಕ, ಕರಾವಳಿ, ಮೈಸೂರು ಭಾಗ ಎನ್ನದೆ ಯಾವುದೇ ಪ್ರದೇಶಕ್ಕೆ ತಾರತಮ್ಯ ಮಾಡದೇ ಪ್ರಾದೇಶಿಕ ಅಸಮಾನತೆ ನಿವಾರಿಸುವ ಗುರಿ ಹೊಂದಲಾಗಿದೆ.ಸಮಗ್ರ ಕರ್ನಾಟಕ ಅಭಿವೃದ್ಧಿಪಡಿಸಲು ನಮ್ಮ ಸರ್ಕಾರ ಬದ್ಧವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ರವಿವಾರ ಕಲಬುರಗಿ ನಗರದ ಡಾ. ಎಸ್.ಎಂ. ಪಂಡಿತ ರಂಗಮಂದಿರದ ಎದುರುಗಡೆ ಸುಮಾರು 327.17 ಕೋಟಿ ರೂ. ವೆಚ್ಚದಲ್ಲಿ ನೂತನವಾಗಿ ನಿರ್ಮಿಸಿರುವ 371 ಹಾಸಿಗೆ ಸಾಮರ್ಥ್ಯದ ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಆಸ್ಪತ್ರೆಯ ಕಲಬುರಗಿ ಶಾಖಾ ಆಸ್ಪತ್ರೆಯನ್ನು ಲೋಕಾರ್ಪಣೆಗೊಳಿಸಿ



ಮಾತನಾಡಿದರು.

ಡಾ.ಡಿ.ಎಂ.ನಂಜುಂಡಪ್ಪ ಅವರು 2002ರಲ್ಲಿ ನೀಡಿದ ವರದಿಯಲ್ಲಿ ಅಂದಿನ 175 ತಾಲೂಕುಗಳ ಪೈಕಿ ಅತ್ಯಂತ ಹಿಂದುಳಿದ ತಾಲೂಕುಗಳಲ್ಲಿ ಕಲಬುರಗಿ ಮತ್ತು ಬೆಳಗಾವಿ ವಿಭಾಗದ 39 ತಾಲೂಕುಗಳು ಸೇರಿವೆ. ನಂಜುಂಡಪ್ಪ ಅವರ ವರದಿಯಂತೆ ಹಿಂದುಳಿವಿಕೆ ಹೋಗಲಾಡಿಸಲು ಇದೂವರೆಗೆ 35,000 ಕೋಟಿ ರೂ. ಅನುದಾನ ನೀಡಿದ್ದರು ನಿರೀಕ್ಷಿತ ಮಟ್ಟದಲ್ಲಿ ಹಿಂದುಳಿತ ತಾಲೂಕಿನಲ್ಲಿ ಪ್ರಗತಿ ಕಂಡಿಲ್ಲ. ಹೀಗಾಗಿ ಆರ್ಥಿಕ ತಜ್ಞ ಪ್ರೊ.ಗೋವಿಂದರಾಜು ಅವರ ಅಧ್ಯಕ್ಷತೆಯಲ್ಲಿ ನಮ್ಮ ಸರ್ಕಾರ ಉನ್ನತ ಸಮಿತಿ ರಚಿಸಿದ್ದು, ಅದರ ವರದಿಯನ್ನಾಧರಿಸಿ ಹಿಂದುಳಿದ ತಾಲೂಕುಗಳ ಅಭಿವೃದ್ಧಿಗೆ ಹೊಸ ಯೋಜನೆ, ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುವುದು ಎಂದರು.

ಕಲ್ಯಾಣ ಕರ್ನಾಟಕ ಭಾಗದಲ್ಲಿ ಶಿಕ್ಷಣ ಮತ್ತು ಆರೋಗ್ಯಕ್ಕೆ ಹೆಚ್ಚಿನ ಒತ್ತು ನೀಡುವಂತೆ ಕೆ.ಕೆ.ಆರ್.ಡಿ.ಬಿ. ಅಧ್ಯಕ್ಷ ಡಾ.ಅಜಯ್ ಸಿಂಗ್ ಅವರಿಗೆ ನಿರ್ದೇಶನ ನೀಡಿದ್ದೇನೆ. ಆರೋಗ್ಯ ಮತು ಶಿಕ್ಷಣ ಸಂಸ್ಥೆಗಳು ಹೆಚ್ಚಾಗಿ ಬೆಳೆದಲ್ಲಿ ಪ್ರದೇಶದಲ್ಲಿ ಅಭಿವೃದ್ಧಿ ಕಾಣಿಸಲು ಸಾಧ್ಯ ಎಂದು ಪುನರುಚ್ಚಿಸಿದ್ದ ಸಿ.ಎಂ., ಗುಲಬರ್ಗಾ ವಿ.ವಿ. ಸಮಗ್ರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಉಪನ್ಯಾಸಕರ ಭರ್ತಿಗೆ ಕ್ರಮ ವಹಿಸಲಾಗುವುದು ಎಂದರು.

ಖಾಲಿ ಹುದ್ದೆ ಭರ್ತಿಗೆ ಕ್ರಮ:371ಜೆ ಕಾಯ್ದೆ ಅನ್ವಯ ಈ ಭಾಗದಲ್ಲಿ ಖಾಲಿ ಉಳಿದ ಹುದ್ದೆಗಳನ್ನು ಭರ್ತಿ ಮಾಡಲಾಗುವುದು. ಡಾ.ಮಲ್ಲಿಕಾರ್ಜುನ ಖರ್ಗೆ ಅವರ ವಿಶೇಷ ಪ್ರಯತ್ನದಿಂದ ಜಾರಿಗೆ ಬಂದ 371ಜೆ ಕಾಯ್ದೆ ಅನುಷ್ಠಾನಕ್ಕೆ ತರಲು 2013ರಲ್ಲಿ ತಮ್ಮ ನೇತೃತ್ವದ ಸರ್ಕಾರದ ಅವಧಿಯಲ್ಲಿ ಹೆಚ್.ಕೆ.ಪಾಟೀಲ ನೇತೃತ್ವದಲ್ಲಿ ಸಚಿವ ಸಂಪುಟ ಉಪ ಸಮಿತಿ ರಚಿಸಿ ನೀತಿ (2ನೇ ಪುಟ ನೋಡಿ)

## ಬಿ. ಎಲ್ ಸಂತೋಷ್ ಬಿಜೆಪಿ ಜಿಲ್ಲಾ ಕಛೇರಿಗೆ ಭೇಟಿ



ಮಲ್ಲಮ್ಮ ನುಡಿ ವಾರ್ತೆ

ಮಂಗಳೂರು: ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಬಿ. ಎಲ್. ಸಂತೋಷ್ ಅವರು ನವೀಕರಣಗೊಂಡ ಬಿಜೆಪಿ ಕಛೇರಿಗೆ ಭೇಟಿ ನೀಡಿದರು. ಕಾರ್ಯಕರ್ತರೊಂದಿಗೆ ಉಭಯ ಕುಶಲೋಪರಿ ವಿಚಾರಿಸಿದರು. ಹಾಗೂ ಕಾರ್ಯಾಲಯ ಮತ್ತು ವ್ಯವಸ್ಥೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಈ ಸಂಧರ್ಭದಲ್ಲಿ ಜಿಲ್ಲಾಧ್ಯಕ್ಷರಾದ ಸತೀಶ್ ಕುಂಪಲ, ಸಂಸದರಾದ ಕ್ಯಾ.ಬ್ರಿಜೇಶ್ ಚೌಟ ,ಶಾಸಕರಾದ ಡಿ. ವೇದವ್ಯಾಸ್ ಕಾಮತ್, ಡಾ. ಭರತ್ ಶೆಟ್ಟಿ, ಭಾಗೀರಥಿ ಮುರುಳ್ಯ, ವಿಧಾನ ಪರಿಷತ್ ಸದಸ್ಯರಾಗ ಕಿಶೋರ್ ಕುಮಾರ್ ಪುತ್ತೂರು, ಮೇಯರ್ ಮನೋಜ್ ಕುಮಾರ್, ಪ್ರಮುಖರಾದ ಉದಯ ಕುಮಾರ್ ಶೆಟ್ಟಿ, ರಾಜೇಶ್ ಕಾವೇರಿ , ಪ್ರೇಮಾನಂದ ಶೆಟ್ಟಿ, ಯತೀಶ್ ಆರ್ವರ್ ,ಬಿಜೆಪಿ ಮುಖಂಡರು ಕಾರ್ಯಕರ್ತರು ಉಪಸ್ಥಿತರಿದ್ದರು.

## 'ಸಿದ್ಧಸಿರಿ' ಪರ ಕೋರ್ಟ್ ಆದೇಶ– ಖಂಡ್ರೆಗೆ ಮುಖಭಂಗ: ಖೂಬಾ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಡಿ. 22 :– ಚಿಂಚೋಳಿ ತಾಲ್ಲೂಕಿನ ಕಬ್ಬು ಬೆಳೆಗಾರರ ಜೀವನಾಡಿ ಸಿದ್ದಸಿರಿ ಸಕ್ಕರೆ ಕಾರ್ಖಾನೆ ಆರಂಭಿಸಲು ಸುಪ್ರೀಂ ಕೋರ್ಟ್ ಆದೇಶ ನೀಡಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಅವರಿಗೆ ಮುಖಭಂಗ ಆಗಿದೆ ಎಂದು ಮಾಜಿ ಕೇಂದ್ರ ಸಚಿವ ಭಗವಂತ ಖೂಬಾ (2ನೇ ಪುಟ ನೋಡಿ)

## ಬಳ್ಳಾರಿ: ಹಗರಿ ಕೃಷಿ ವಿಜ್ಞಾನ ಕೇಂದ್ರಕ್ಕೆ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಎಸ್.ಈ.ಸುಧೀಂದ್ರ ಭೇಟಿ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಡಿ.22–ತಾಲ್ಲೂಕಿನ ಹಗರಿ ಕೃಷಿ ವಿಜ್ಞಾನ ಕೇಂದ್ರಕ್ಕೆ ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಎಸ್.ಈ.ಸುಧೀಂದ್ರ ಅವರು, ಭಾನುವಾರ ಭೇಟಿ ನೀಡಿ ಕೇಂದ್ರದ ಅಧಿಕಾರಿಗಳೊಂದಿಗೆ ಚರ್ಚಿಸಿ ಸಮಗ್ರ ಮಾಹಿತಿ ಪಡೆದುಕೊಂಡರು. ಹಗರಿ ಕೃಷಿ ವಿಜ್ಞಾನ ಕೇಂದ್ರವು ಇಡೀ



ಜಿಲ್ಲೆಯಲ್ಲಿ ಜೈವಿಕ ಇಂಧನ ಕಾರ್ಯ ಯೋಜನೆಗಳ ಕುರಿತು ರೈತರಿಗೆ, ಸಾರ್ವಜನಿಕರಿಗೆ, ವಿದ್ಯಾರ್ಥಿಗಳಿಗೆ ಹಾಗೂ ಉದ್ಯಮಿದಾರರಿಗೆ ಪರಿಚಯಿಸುವಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಪ್ರಶಂಶಿಸಿದರು.

ಬಯೋಡೇಸಲ್ ಉತ್ಪಾದನಾ ಘಟಕಕ್ಕೆ ಭೇಟಿ (2ನೇ ಪುಟ ನೋಡಿ)

## ಸಿಸಿ ರಸ್ತೆ, ಚರಂಡಿ ನಿರ್ಮಾಣಕ್ಕೆ ಸಂಸದ ಸಾಗರ್ ಖಂಡ್ರೆ ಚಾಲನೆ

ಮಲ್ಲಮ್ಮ ನುಡಿ ವಾರ್ತೆ

ಬೀದರ. ಡಿ. 22 :– ಭಾಲ್ಕಿ ತಾಲ್ಲೂಕಿನ ಗಣೇಶಪುರ್ ವಾಡಿಯಲ್ಲಿ ಸಿಸಿ ರಸ್ತೆ ಹಾಗೂ ಚರಂಡಿ ನಿರ್ಮಿಸಲು ಸಂಸದ ಸಾಗರ್ ಖಂಡ್ರೆ ಅವರು ಅಡಿಗಲ್ಲು ಹಾಕಿದರು.

ಗ್ರಾಮದ ಶಂಕರರಾವ್ ಭೂಸುಂಡೆ ಅವರ ಮನೆಯಿಂದ ಲೋಕೇಶ್ ಭೂರೆ ಅವರಮನೆಯವರೆಗೆ (2ನೇ ಪುಟ ನೋಡಿ)



## 25ನೇ ಪುಣ್ಯಸ್ಮರಣೆ



### ಸ್ವ. ಶ್ರೀ ನಿಲಕಂಟಪ್ಪಾ ನುರಂದಪ್ಪಾ ಮುಚಳಂಬೆ

ತಾವು ನಮ್ಮನ್ನಗಲಿ ಇಂದಿಗೆ (23.12.2024 ಕ್ಕೆ) 25 ವರ್ಷ ಗತಿಸಿದವು. ತಾವು ಹಾಕಿಕೊಟ್ಟ ಸನ್ಮಾರ್ಗದಲ್ಲಿ ನಾವು ಸದಾ ನಡೆಯುತ್ತಿದ್ದೆವೆ, ಅಗಲಿದ ನಿಮ್ಮ ದಿವ್ಯಾತ್ಮಕ್ಕೆ ಭಗವಂತನು ಚಿರಶಾಂತಿ ನೀಡಲೆಂದು ದೇವರಲ್ಲಿ ಪ್ರರ್ಥಿಸುತ್ತ.


ಸದಾ ನಿಮ್ಮಸ್ಮರಣೆಯಲ್ಲಿರುವ

ಮಕ್ಕಳು, ಕುಟುಂಬದ ಎಲ್ಲಾ ಸದಸ್ಯರು ಮುಚಳಂಬೆ ಬಂಧುಗಳು ಹಾಗೂ ಆಪ್ತಮಿತ್ರರು

## ಸೈಲೆಂಟಾಗಿ ಹಿಂದೂ ಧಾರ್ಮಿಕ ಬದ್ಧತೆ ಪ್ರತಿಪಾದಿಸಿದ ಸಚಿವ ರಾಮಲಿಂಗಾರೆಡ್ಡಿ

ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು:ಬುಟಾಟಿಕೆ ಮತ್ತು ಪೊಳ್ಳು ಹಿಂದುತ್ವವಾದ ಪ್ರತಿಪಾದಕರಾದ ಬಿಜೆಪಿಯವರು ಧರ್ಮ ಧರ್ಮಗಳ ನಡುವೆ ದ್ವೇಷದ ಬೆಂಕಿ ಹಚ್ಚಿ, ಹಿಂದೂ ಧರ್ಮದ ಉಳಿವಿಗಾಗಿ ಯಾವುದೇ ಕಾರ್ಯ ಮಾಡದಿದ್ದರೂ, ಬರೀ ಬಾಯಿ ಮಾತಿನಲ್ಲಿ ಹಿಂದೂ ಧರ್ಮ, ದೇವಾಲಯಗಳ ಬಗ್ಗೆ ಪುಂಖಾನುಪುಂಖವಾಗಿ ಬೊಗಳೆ ಭಾಷಣ ಮಾಡುವವರ ಮುಂದೆ ಯಾವುದೇ ಸದ್ದುಗದ್ದಲವಿಲ್ಲದೆ ತಮ್ಮ ಕಾರ್ಯಕ್ರಮಗಳು ಹಾಗೂ ಯೋಜನೆಗಳ ಮೂಲಕ ಹಿಂದೂ ಧರ್ಮ ಮತ್ತು ದೇವಾಲಯಗಳ ರಕ್ಷಣೆಗೆ ಪಣ ತೊಟ್ಟಿರುವ



ರಾಮಲಿಂಗಾರೆಡ್ಡಿಯುವರ ಕಾರ್ಯ ಆಸ್ತಿಕ ಸಮುದಾಯದಲ್ಲಿ ಸಂತೋಷದ ಹೊನಲನ್ನು ಹರಿಸಿದೆ ಎಂದು ಅರ್ಚಕ ಸಮುದಾಯ ತಿಳಿಸಿದೆ.

ರಾಜ್ಯದ ಮುಜರಾಯಿ ದೇವಸ್ಥಾನದ ವ್ಯಾಪ್ತಿಯಲ್ಲಿ ಬರುವ ಸಾವಿರಾರು ಎಕರೆ ಜಮೀನು ಅನ್ಯರ ಪಾಲಾಗಿತ್ತು. ಕೆಲ ಸಂಸ್ಥೆಗಳು, ಟ್ರಸ್ಟ್‌ಗಳು ಹಾಗೂ ಖಾಸಗಿ ವ್ಯಕ್ತಿಗಳು ಜಮೀನನ್ನು ಒತ್ತುವರಿ ಮಾಡಿಕೊಂಡಿದ್ದರು. ಇದನ್ನು ಹಿಂದಿನ ಬಿಜೆಪಿ ಸರಕಾರ ತೆರವು ಮಾಡುವ ಕಡೆ ಯಾವುದೇ ಒಲವು ತೋರಲಿಲ್ಲ. ಹೀಗಾಗಿ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ನಂತರ ಮುಜರಾಯಿ ಇಲಾಖೆ ಖಾತೆಯನ್ನು ವಹಿಸಿಕೊಂಡ ರಾಮಲಿಂಗಾ ರೆಡ್ಡಿ ಅವರ ಬದ್ಧತೆಯಿಂದ ಈವರೆಗೆ ರಾಜ್ಯದ ವಿವಿಧ ದೇವಸ್ಥಾನಗಳ 10,700 ಎಕರೆ ಜಮೀನನ್ನು ರಕ್ಷಣೆ ಮಾಡಲಾಗಿದೆ. ಒಟ್ಟು 5022 ಆಸ್ತಿಗಳಿಗೆ ಕಂದಾಯ ಇಲಾಖೆಯಿಂದ ಸೂಕ್ತ ದಾಖಲೆಗಳನ್ನು ಸೃಷ್ಟಿಸಿ, ದೇವಸ್ಥಾನಗಳ ಅಧೀನಕ್ಕೆ ನೀಡಲಾಗಿದೆ.

ಮುಜರಾಯಿ ಇಲಾಖೆ ವ್ಯಾಪ್ತಿಗೆ ಸೇರಿದ 34,564 ದೇವಸ್ಥಾನಗಳ ಪೈಕಿ ಬಹುತೇಕ ದೇವಸ್ಥಾನಗಳಿಗೆ ಸರ್ಕಾರ ಮತ್ತು ದಾನಿಗಳು ನೀಡಿದ ಆಸ್ತಿಯಿದೆ. ಆದರೆ, ಬಹುತೇಕ ದೇವಸ್ಥಾನಗಳ ಆಸ್ತಿ ಖಾಸಗಿ ಪಾಲಾಗಿತ್ತು. ಇದೀಗ ಸರ್ವೆ ನಡೆಸಿ, ಕಳೆದ ಒಂದೂವರೆ ವರ್ಷದ ಅವಧಿಯಲ್ಲಿ ಸುಮಾರು 10 ಸಾವಿರಕ್ಕೂ ಹೆಚ್ಚು ಆಸ್ತಿಗಳನ್ನು ಮರು ವಶಪಡಿಸಿಕೊಳ್ಳಲಾಗಿದೆ.

ರಾಜ್ಯದಲ್ಲಿ 34,166 ಸಿ ದರ್ಜೆಯ ದೇವಸ್ಥಾನಗಳು, 193 ಬಿ ದರ್ಜೆಯ ದೇವಸ್ಥಾನ ಹಾಗೂ 205 ಎ ದರ್ಜೆಯ ದೇವಸ್ಥಾನಗಳಿವೆ. ಈ ದೇವಸ್ಥಾನಗಳಿಗೆ ಸರ್ಕಾರದಿಂದ ಹಾಗೂ ದಾನಿಗಳಿಂದ ದಾನದ

## ಬ್ರಿಮ್ಸ್ ಆಸ್ಪತ್ರೆಯಲ್ಲಿ ಶೌಚಾಲಯ, ಕುಡಿಯುವ ನೀರಿಗಾಗಿ ರೋಗಿಗಳ ಪರದಾಟ

ಮಲ್ಲಮ್ಮ ನುಡಿ ವಾರ್ತೆ

ಬೀದರ. ಡಿ. 22 :– ಜಿಲ್ಲಾ ಸರಕಾರಿ ಆಸ್ಪತ್ರೆಯಲ್ಲಿನ ಬಹುತೇಕ ಎಲ್ಲ ಶೌಚಾಲಯಗಳಿಗೆ ಬೀಗ ಜಡಿಯಲಾಗಿದೆ. ಆರು ಅಂತಸ್ತಿನ ಆಸ್ಪತ್ರೆಯಲ್ಲಿ ಒಂದೂ ಮಹಡಿಯಲ್ಲಿಯು ಕುಡಿಯುವ ನೀರಿನ ವ್ಯವಸ್ಥೆ ಇಲ್ಲದಿರುವ ಶೋಚನಿಯ ಸ್ಥಿತಿ ಬ್ರಿಮ್ಸ್ ಆಸ್ಪತ್ರೆಯದ್ದಾಗಿದೆ.

ಆಸ್ಪತ್ರೆಯ ಹೆರಿಗೆ ವಿಭಾಗ, ಮೂಳೆ ಮತ್ತು ಎಲುಬಿನ ವಿಭಾಗ, ಶಿಶು ಮಕ್ಕಳ ವಿಭಾಗ ಸೇರಿದಂತೆ ಆಸ್ಪತ್ರೆಯ ಎಲ್ಲ ವಿಭಾಗಗಳಲ್ಲಿ ಶೌಚಾಲಯ ಇದ್ದರೂ ಸಹ ಇಲ್ಲದಂತಾಗಿದೆ. ಶೌಚಾಲಯಗಳು ಸಂಪೂರ್ಣವಾಗಿ ಭರ್ತಿಯಾಗಿದ್ದು, ಗಬ್ಬೆಂದು ದುರ್ವಾಸನೆ ಬರುತ್ತಿವೆ. ಒಂದೊಂದು ವಾರ್ಡಿನಲ್ಲಿ ಶೌಚಾಲಯದ ಬಾಗಿಲುಗಳು ತೆರೆದಿದ್ದರೂ ಸಹ ರೋಗಿಗಳು ಮೂಗು ಮುಚ್ಚಿಕೊಂಡು ಹೋಗುವ ಪರಿಸ್ಥಿತಿ ನಿರ್ಮಾಣವಾಗಿ, ಅಸ್ವಚ್ಛತೆ ತಾಂಡವವಾಡುತ್ತಿದೆ. ರೋಗ ನಿರ್ಮೂಲನೆ ಮಾಡುವ ಸ್ಥಳದಲ್ಲಿಯೇ



> **ಶಿವಕುಮಾರ್ ಶೇಟಕರ್, ನಿರ್ದೇಶಕರು, ಬ್ರಿಮ್ಸ್ ಆಸ್ಪತ್ರೆ ಬೀದರ್.**
>
> ಆಸ್ಪತ್ರೆಯ ಶೌಚಾಲಯಗಳು ಗಬ್ಬೆಂದು ನಾರುತ್ತಿವೆ. ಇದರಿಂದಾಗಿ ರೋಗಿಗಳಿಗೆ ತೊಂದರೆಯಾಗುತ್ತಿದೆ. ಅಲ್ಲಿನ ಯಾವುದೇ ಮಹಡಿಯಲ್ಲಿ ನೀರಿನ ವ್ಯವಸ್ಥೆ ಇಲ್ಲ. ಹಾಗಾಗಿ ಮೇಲಿನ ಮಹಡಿಯಲ್ಲಿ ಚಿಕಿತ್ಸೆಪಡೆಯುತ್ತಿರುವವರಿಗೆ ನೀರಿನ ಸಮಸ್ಯೆಯಾಗುತ್ತಿದೆ. ಆಸ್ಪತ್ರೆ ಕಟ್ಟಡದ ಕೆಳಭಾಗದಲ್ಲಿ ನೀರಿನ ಬುಗ್ಗಗಳು ಏಳುತಿದ್ದು, ಇದರಿಂದ ಆಸ್ಪತ್ರೆ ಕಟ್ಟಡಕ್ಕೆ ಧಕ್ಕೆಯಾಗುವ ಸಂಭವವಿದೆ. ಇದಕ್ಕೆ ಸಂಬಂಧಿಸಿದ ಅಧಿಕಾರಿಗಳು ಇದರ ಬಗ್ಗೆ ಗಮನಹರಿಸಿ ಸೂಕ್ತ ಕ್ರಮಕೈಗೊಳ್ಳಬೇಕು.
>
> **– ಬಾಬುರಾವ್ ಪಾಸ್ವಾನ್**

ರೋಗಕ್ಕೆ ತುತ್ತಾಗುವ ಭಯ ನಿರ್ಮಾಣವಾಗಿದೆ. ನಡೆದಾಡುವ ರೋಗಿಗಳು ಮತ್ತು ರೋಗಿಗಳ ಜೊತೆಗೆ ಬರುವ ಸಾರ್ವಜನಿಕರು ಅನಿವಾರ್ಯವಾಗಿ ಹೊರಗಡೆ ದೂರದ ಖಾಸಗಿ ಶೌಚಾಲಯಕ್ಕೆ ಹೋಗುತ್ತಿದ್ದಾರೆ. ಆದರೆ ನಡೆಯಕ್ಕಾಗದ ಒಳರೋಗಿಗಳಿಗೆ ತುಂಬಾ ತೊಂದರೆಯಾಗುತ್ತಿದೆ.

ಆರು ಅಂತಸ್ತಿನ ಆಸ್ಪತ್ರೆಯಾಗಿದ್ದರೂ ಸಹ ಯಾವುದೇ ಅಂತಸ್ತಿನ ಮೇಲೆ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ. 3ನೇ ಅಂತಸ್ತಿನಲ್ಲಿ ಒಂದು ನೀರಿನ ವಾಟರ್ ಫಿಲ್ಟರ್ ಕೆಟ್ಟು ದಿನಗಳು ಕಳೆದರೂ ದುರಸ್ತಿಯ ಸಮಯ ಕೂಡಿ ಬಂದಿಲ್ಲ. ಒಂದು ವಾಟರ್ ಫೀಲ್ಟರ್ ಬೀಗ ಹಾಕಿ ಮೂಲೆಯಲ್ಲಿ ಇಡಲಾಗಿದೆ. ನೆಲಮಹಡಿಯ ಒಂದು ಬದಿಯಲ್ಲಿ ರೋಟರಿ ಕ್ಲಬ್ ವತಿಯಿಂದ ನೀರಿನ ವ್ಯವಸ್ಥೆ ಮಾಡಲಾಗಿದೆ. ಎಲ್ಲ ಮಹಡಿಯ ರೋಗಿಗಳು ಇದನ್ನೇ ಅವಲಂಬಿಸಿದ್ದಾರೆ. ರೋಗಿಗಳ ಜೊತೆಗೆ ಯಾರು ಸಂಬಂಧಿಕರು ಇಲ್ಲದಿದ್ದರೆ ಆ ರೋಗಿಗಳು ನೀರಿಗಾಗಿ ಸಾಯುವ ಪರಿಸ್ಥಿತಿ ಇಲ್ಲಿದೆ ಎಂದರೆ ತಪ್ಪಾಗಲಾರದು.

ದೂರದ ತೆಲಂಗಾಣ, ಮಹಾರಾಷ್ಟ್ರ ಹಾಗೂ ಜಿಲ್ಲೆಯ ಮೂಲೆ (2ನೇ ಪುಟ ನೋಡಿ)

# ಒಂದನೆ ಪುಟದಿಂದ...

## ಸಮಗ್ರ ಕರ್ನಾಟಕ ಅಭಿವೃದ್ಧಿಗೆ ಬದ್ಧ ಸಿದ್ದರಾಮಯ್ಯ

ನಿಯಮಗಳನ್ನು ಜಾರಿಗೆ ತಂದು ಈ ಭಾಗದವರಿಗೆ ಉದ್ಯೋಗ ಮತ್ತು ಶಿಕ್ಷಣದಲ್ಲಿ ವಿಶೇಷ ಮೀಸಲಾತಿ ಕಲ್ಪಿಸಿದೆ. ಪರಿಣಾಮ ಇದೂವರೆಗೆ 80 ಸಾವಿರ ಜನರಿಗೆ ನೌಕರಿ ದೊರೆತಿದೆ. ಸಾವಿರಾರು ಮಕ್ಕಳು ಉನ್ನತ ಶಿಕ್ಷಣ ಪಡೆಯುತ್ತಿದ್ದಾರೆ. ಸಾವಿರಾರು ಕೋಟಿ ಹಣ ಪ್ರದೇಶಕ್ಕೆ ಹರಿದು ಬರುತ್ತಿದೆ ಎಂದರು.

ಕಲಬುರಗಿಯಲ್ಲಿ ನಿಮ್ಹಾನ್ಸ್ ಶಾಖೆ ಸ್ಥಾಪನೆ: ಕಲಬುರಗಿಯಲ್ಲಿ ಜಯದೇವ ಆಸ್ಪತ್ರೆಯ ಸುಂದರ ಕಟ್ಟಡ ತಲೆ ಎತ್ತಿ ನಿಂತಿರುವುದು ಸಂತಸ ತಂದಿದೆ. ಚಿಕಿತ್ಸೆ ಪಡೆಯುವದಕ್ಕಿಂತ ಕಾಯಿಲೆ ಬಾರದಂತೆ ಎಚ್ಚರಿಕೆ ವಹಿಸುವುದು ಅವಶ್ಯಕ. ಹೀಗಾಗಿ ಈ ನೂತನ ಆಸ್ಪತ್ರೆಯಲ್ಲಿ ಸ್ವಚ್ಛತೆ ಮತ್ತು ನೈರ್ಮಲ್ಯಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ಸ್ವಚ್ಛತೆ ಇದ್ದಲ್ಲಿ ಬೇರೆ ಕಾಯಿಲೆಗಳು ಬರಲ್ಲ ಎಂದ ವೈದ್ಯರಿಗೆ ನಿರ್ದೇಶನ ನೀಡಿದ ಸಿ.ಎಂ. ಅವರು, ಡಾ.ಮಲ್ಲಿಕಾರ್ಜುನ ಖರ್ಗೆ ಅವರ ಒತ್ತಾಸೆಯಂತೆ ಕಲಬುರಗಿಯಲ್ಲಿ ನಿಮ್ಹಾನ್ಸ್ ಆಸ್ಪತ್ರೆಯ ಶಾಖೆ ಮತ್ತು ಇನ್ಸ್‌ಟಿಟ್ಯೂಟ್ ಆಫ್ ಡಯಬಟಾಲೋಜಿ ಘಟಕವನ್ನು ತೆರೆಯಲಾಗುವುದು ಎಂದು ಘೋಷಿಸಿದರು.

ತೊಗರಿಗೆ ಹಾನಿ, ಪರಿಹಾರದ ಭರವಸೆ: ಕಲಬುರಗಿ ಸೇರಿ ಕೆಲವಡೆ ವಿಚಿತ್ರ ರೋಗದಿಂದ ತೊಗರಿ ಬೆಳೆ ಹಾನಿಯಾಗಿದ್ದು ತಮ್ಮ ಗಮನಕ್ಕೆ ಬಂದಿದೆ. ಈಗಾಗಲೆ ಅಧ್ಯಯನಕ್ಕೆ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇನೆ. ವರದಿ ಆಧರಿಸಿ ರೈತರಿಗೆ ಆಗಿರುವ ಅನ್ಯಾಯ ಸರಿಪಡಿಸಿ ಪರಿಹಾರ ಕಲ್ಪಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಗುಲಬರ್ಗಾ ವಿ.ವಿ.ಗೆ ಕಾಯಕಲ್ಪ ನೀಡಿ: ಇದಕ್ಕೂ ಮುನ್ನ ರಾಜ್ಯಸಭೆಯ ವಿರೋಧ ಪಕ್ಷದ ನಾಯಕರು ಹಾಗೂ ರಾಜ್ಯಸಭಾ ಸದಸ್ಯ ಡಾ. ಮಲ್ಲಿಕಾರ್ಜುನ ಖರ್ಗೆ ಮಾತನಾಡಿ, ಹಿಂದುಳಿದ ಕಲ್ಯಾಣ ಕರ್ನಾಟಕ ಅಭಿವೃದ್ಧಿ ಹೊಂದಬೇಕಾದರೆ ಆರೋಗ್ಯ ಮತ್ತು ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡಬೇಕೆಂದ ಅವರು, ಕೆಲವರು ಬಡ ಜನರನ್ನು ಶಿಕ್ಷಣ ಮತ್ತು ಆರೋಗ್ಯ ಸವಲತ್ತಿನಿಂದ ದೂರ ಇಡಲು ಬಯಸುತ್ತಿರುವುದು ಬೇಸರ ತಂದಿದೆ ಎಂದರು.

ಗುಲಬರ್ಗಾ ವಿ.ವಿ. ತುಂಬಾ ಹಳೇಯದಾಗಿದ್ದು, ಸುಣ್ಣ-ಬಣ್ಣ ಕಂಡಿಲ್ಲ. ಹುದ್ದೆ ಭರ್ತಿಯಾಗಿಲ್ಲ. ಹೊಸ ಕೋರ್ಸ್ ಇಲ್ಲ. ಈ ಬಗ್ಗೆ ಗಮನಹರಿಸಿ ಮೂಲಸೌಕರ್ಯ ಅಭಿವೃದ್ಧಿಗೆ ಸರ್ಕಾರ ವಿಶೇಷ ಅನುದಾನ ನೀಡುವುದರ ಜೊತೆಗೆ ಉಪನ್ಯಾಸಕರ ಭರ್ತಿಗೆ ವಿಶೇಷ ಆಸಕ್ತಿ ತೋರಬೇಕು ಎಂದರು.

ಕಲಬುರಗಿಯಲ್ಲಿ 371ಕಾಯ್ದೆ ದಶಮಾನೋತ್ಸವ ಸವಿನೆನಪಿನಲ್ಲಿ ಇಂದಿಲ್ಲಿ 371 ಹಾಸಿಗೆ ಸಾಮರ್ಥ್ಯದ ಜಯದೇವ ಆಸ್ಪತ್ರೆ ಲೋಕಾರ್ಪಣೆ ಮಾಡಿದ್ದು ಅತೀವ ಸಂತಸ ತಂದಿದೆ. ಕಟ್ಟಡ ಆಯ್ತು, ಕ್ಯಾತಲ್ಯಾಬ್ ಬಂದೈತು. ವೈದ್ಯರು ಬಂದರು. ಇದೀಗ ಇದರ ನಿರ್ವಹಣೆ ಬಹಳ ಮುಖ್ಯವಾಗಿದೆ. ಉತ್ತಮ ಆರೋಗ್ಯ ಸೇವೆ ನೀಡಬೇಕಾದರೆ ಸ್ವಚ್ಛತೆ ಇಲ್ಲಿ ಎದ್ದು ಕಾಣುವಂತಾಗಬೇಕು ಎಂದು ವೈದ್ಯರಿಗೆ ಸೂಚಿಸಿದ ಅವರು, ನಿಮ್ಹಾನ್ಸ್ ಆಸ್ಪತ್ರೆಯ ಶಾಖೆ ಮತ್ತು ಇನ್ಸಟಿಟ್ಯೂಟ್ ಆಫ್ ಡಯಬಟಾಲೋಜಿ ಘಟಕವನ್ನು ಇಲ್ಲಿ ತೆರೆಯುವ ಮೂಲಕ ಪ್ರದೇಶದ ಜನರಿಗೆ ಅನುಕೂಲ ಮಾಡಿಕೊಡಬೇಕೆಂದು ಸಿ.ಎಂ. ಅವರಲ್ಲಿ ಕೇಳಿಕೊಂಡರು.

ಇದಕ್ಕು ಮುನ್ನ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ರಾಜ್ಯಸಭೆ ವಿಪಕ್ಷ ನಾಯಕ ಡಾ.ಮಲ್ಲಿಕಾರ್ಜುನ ಖರ್ಗೆ ಅವರು ಆಸ್ಪತ್ರೆ ಉದ್ಘಾಟಿಸಿ ಕ್ಯಾತಲ್ಯಾಬ್, ಓ.ಟಿ. ಥಿಯೇಟರ್ ಸೇರಿದಂತೆ ಇಡೀ ಆಸ್ಪತ್ರೆ ವೀಕ್ಷಿಸಿದರು.

ಕಲಬುರಗಿ ದಕ್ಷಿಣ ಶಾಸಕ ಅಲ್ಲಮಪ್ರಭು ಪಾಟೀಲ ಅವರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಖಾತೆ ಸಚಿವ ಡಾ. ಶರಣಪ್ರಕಾಶ ಆರ್. ಪಾಟೀಲ, ಯೋಜನೆ, ಕಾರ್ಯಕ್ರಮ ಸಂಯೋಜನೆ ಹಾಗೂ ಸಾಂಖ್ಯಿಕ ಸಚಿವ ಡಿ. ಸುಧಾಕರ್, ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವ ಶರಣಬಸಪ್ಪ ದರ್ಶನಾಪೂರ, ಅರಣ್ಯ, ಜೀವಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ, ಪೌರಾಡಳಿತ ಮತ್ತು ಹಜ್ ಸಚಿವ ರಹೀಂ ಖಾನ್, ಜೇವರ್ಗಿ ಶಾಸಕ ಮತ್ತು ಕೆ.ಕೆ.ಆರ್.ಡಿ.ಬಿ. ಅಧ್ಯಕ್ಷ ಡಾ. ಅಜಯಸಿಂಗ್, ಅಫಜಲಪುರ ಶಾಸಕ ಮತ್ತು ಕೆ.ಕೆ.ಆರ್.ಟಿ.ಸಿ ಅಧ್ಯಕ್ಷ ಎಂ.ವೈ. ಪಾಟೀಲ, ಮುಖ್ಯಮಂತ್ರಿಯವರ ನೀತಿ ಮತ್ತು ಕಾರ್ಯಕ್ರಮ ಸಲಹೆಗಾರ ಬಿ.ಆರ್. ಪಾಟೀಲ, ಕರ್ನಾಟಕ ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಾಬುರಾವ್ ಚಿಂಚನಸೂರ್, ಕಲಬುರಗಿ ಸಂಸದ ರಾಧಾಕೃಷ್ಣ ದೊಡ್ಡಮನಿ, ಶಾಸಕರುಗಳಾದ ಬಸವರಾಜ ಮತ್ತಿಮಡು, ಚೆನ್ನಾರೆಡ್ಡಿ ಪಾಟೀಲ, ವಿಧಾನ ಪರಿಷತ್ ಶಾಸಕರುಗಳಾದ ಡಾ. ಬಿ.ಜಿ.ಪಾಟೀಲ, ಶಶೀಲ ಜಿ. ನಮೋಶಿ, ಡಾ. ಚಂದ್ರಶೇಖರ ಪಾಟೀಲ ಹುಮನಾಬಾದ, ತಿಮ್ಮಣ್ಣಪ್ಪ ಕಮಕನೂರ, ಜಗದೇವ ಗುತ್ತೇದಾರ್, ಅರವಿಂದ ಅರಳಿ, ಮಹಾನಗರ ಪಾಲಿಕೆ ಮಹಾಪೌರ ಯಲ್ಲಪ್ಪ ನಾಯ್ಕೋಡಿ, ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಜಹರ್ ಆಲಂ ಖಾನ್, ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ಅಧ್ಯಕ್ಷ ದೇವಿಂದ್ರಪ್ಪ ಮರತೂರ, ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಡಾ. ಅಬ್ದುಲ್ ರಶೀದ ಅವರು ಭಾಗವಹಿಸಿದ್ದರು.

ವೈದ್ಯಕೀಯ ಶಿಕ್ಷಣ ಇಲಾಖೆಯ ಸರ್ಕಾರದ ಕಾರ್ಯದರ್ಶಿ ಮೊಹಮ್ಮದ್ ಮೊಹ್ಸಿನ್, ಐ.ಜಿ.ಪಿ ಅಜಯ್ ಹಿಲೋರಿ, ಕೆ.ಕೆ.ಅರ್.ಡಿ.ಬಿ. ಕಾರ್ಯದರ್ಶಿ ಎಂ. ಸುಂದರೇಶ ಬಾಬು, ಡಿ.ಸಿ. ಬಿ. ಫೌಜಿಯಾ ತರನ್ನುಮ್, ವೈದ್ಯಕೀಯ ಶಿಕ್ಷಣ ಇಲಾಖೆಯ ನಿರ್ದೇಶಕಿ ಸುಜಾತಾ ರಾಠೋಡ್, ಕಲಬುರಗಿ ನಗರ ಪೊಲೀಸ್ ಆಯುಕ್ತ ಡಾ. ಶರಣಪ್ಪ ಎಸ್.ಡಿ., ಕಲಬುರಗಿ ವಿಭಾಗದ ಶಾಲಾ ಶಿಕ್ಷಣ ಇಲಾಖೆಯ ಅಪರ ಆಯುಕ್ತ ಡಾ. ಆಕಾಶ ಎಸ್., ಮಹಾನಗರ ಪಾಲಿಕೆ ಆಯುಕ್ತ ಪ್ರಭಾರಿ ಆಯುಕ್ತ ಅವಿನಾಶ ಶಿಂಧೆ, ಜಿಲ್ಲಾ ಪಂಚಾಯತ್ ಸಿ.ಇ.ಓ ಭಂವರ್ ಸಿಂಗ್ ಮೀನಾ ಉಪಸ್ಥಿತರಿದ್ದರು. ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ.ಕೆ.ಎಸ್. ರವಿಂದ್ರನಾಥ ಪ್ರಸ್ತಾವಿಕವಾಗಿ ಮಾತನಾಡಿದರು.

## ಬ್ರಿಮ್ಸ್ ಆಸ್ಪತ್ರೆಯಲ್ಲಿ ಶೌಚಾಲಯ, ಕುಡಿಯುವ ನೀರಿಗಾಗಿ ರೋಗಿಗಳ ಪರದಾಟ

ಮೂಲೆಗಳಿಂದ ಸಾವಿರಾರು ಜನ ಈ ಆಸ್ಪತ್ರೆಗೆ ಚಿಕಿತ್ಸೆ ಪಡೆಯಲು ಬರುತ್ತಿರುತ್ತಾರೆ. ಆದರೆ ಆಸ್ಪತ್ರೆಯಲ್ಲಿ ಮೂಲ ಸೌಕರ್ಯಗಳಾದ ನೀರು ಮತ್ತು ಶೌಚಾಲಯವಿಲ್ಲದೆ ಪರದಾಡುವ ಸ್ಥಿತಿ ಇದೆ ಎಂದು ಸ್ಥಳೀಯ ರೋಗಿಗಳ ವಾರ್ತಾ ಭಾರತಿ ಜೊತೆ ಮಾತನಾಡಿ ತಮ್ಮ ಅಳಲನ್ನು ತೊಡಿಕೊಂಡಿದ್ದಾರೆ.

ಜಿಲ್ಲಾಡಳಿತ, ಸಂಬಂಧಪಟ್ಟ ಅಧಿಕಾರಿಗಳು, ಜಿಲ್ಲಾ ಉಸ್ತುವಾರಿ ಸಚಿವರು ಇತ್ತ ಗಮನ ಹರಿಸಿ ಆಸ್ಪತ್ರೆಯಲ್ಲಿ ಮೂಲಸೌಕರ್ಯ ಒದಗಿಸಿ ರೋಗಿಗಳಿಗೆ ಒಂದೊಳ್ಳೆ ವಾತಾವರಣ ನಿರ್ಮಾಣ ಮಾಡಿಕೊಡಬೇಕೆಂದು ಸ್ಥಳೀಯರು ಒತ್ತಾಯಿಸಿದ್ದಾರೆ.

ಬ್ರಿಮ್ಸ್ ಆಸ್ಪತ್ರೆಯಲ್ಲಿ ರೋಗಿಗಳಿಗೆ ಸರಿಯಾಗಿ ಚಿಕಿತ್ಸೆ ಸಿಗುತ್ತಿಲ್ಲ. ಬೃಹತ್ ಪ್ರಮಾಣದಲ್ಲಿ ನಿರ್ಮಿಸಲಾಗಿರುವ ಆಸ್ಪತ್ರೆಯಲ್ಲಿ ಇನ್ ವೈಟರ್ ಸೇರಿದಂತೆ ಇನ್ನು ಇತರೆ ಸಲಕರಣೆಗಳು, ಮೂಲಭೂತ ಸೌಕರ್ಯ ಇಲ್ಲವೆಂದು ಆರೋಪಿಸಿ ಈ ಹಿಂದೆ ಯೂಟ್ಯೂಬರ್ ಒಬ್ಬರು ವಿಡಿಯೋ ಮಾಡಿ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಮಾಡಿದ್ದು, ಇದೀಗ ಮತ್ತೆ ಚರ್ಚೆಗೆ ಕಾರಣವಾಗಿದೆ.

6 ತಿಂಗಳಿನ ಹಳೆ ವಿಡಿಯೋ ಇತ್ತೀಚಿಗೆ ಮತ್ತೊಮ್ಮೆ ಸಮಾಜಿಕ ಜಾಲಾತಾಣದಲ್ಲಿ ಎಡಿಟ್ ಮಾಡಿ ವೈರಲ್ ಮಾಡಲಾಗಿದೆ. ರೋಗಿಗೆ ಹಣಕೊಟ್ಟು ಈ ರೀತಿ ವಿಡಿಯೋ ಮಾಡಿ ಹರಿಬಿಟ್ಟಿದ್ದಾರೆ. ಆಸ್ಪತ್ರೆಯಲ್ಲಿ ಯಾವುದೇ ಸಮಸ್ಯೆ ಇಲ್ಲ.

### ಬಳ್ಳಾರಿ: ಹಗರಿ ಕೃಷಿ ವಿಜ್ಞಾನ ಕೇಂದ್ರಕ್ಕೆ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಎಸ್.ಈ.ಸುಧೀಂದ್ರ ಭೇಟಿ

ಅಧ್ಯಕ್ಷರು, ಯಂತ್ರೋಪಕರಣಗಳು ದುರಸ್ತಿಯಲ್ಲಿರುವುದನ್ನು ಕಂಡು ಕೂಡಲೇ ತಂತ್ರಜ್ಞರುಗಳನ್ನು ಕಳುಹಿಸಿ ರಿಪೇರಿ ಮಾಡಿಸಿ ಕೊಡುವುದಾಗಿ ಭರವಸೆ ನೀಡಿದರು.

ಕೇಂದ್ರದ ಜೈವಿಕ ಇಂಧನ ನೆಡುತೋಪಿಗೆ ಭೇಟಿ ನೀಡಿದ ಅವರು ಮಳೆ ಕೊಯ್ಲು ಉದ್ದೇಶಕ್ಕಾಗಿ ನಿರ್ಮಿಸಿರುವ ಕೊಂಡಗಳನ್ನು ವೀಕ್ಷಿಸಿದರು. ಮಂಡಳಿಯು ಜೈವಿಕ ಇಂಧನ ಕ್ಷೇತ್ರದ ಉನ್ನತೀಕರಣ ಹಾಗೂ ವಾಣಿಜ್ಯೀಕರಣಕ್ಕಾಗಿ ಕೈಗೊಳ್ಳಲಾಗುತ್ತಿರುವ ಕಾರ್ಯಯೋಜನೆಗಳು, ರಚನಾತ್ಮಕ ಕಾರ್ಯಯೋಜನೆಗಳ ಕುರಿತು ಅಧ್ಯಕ್ಷರು ವಿವರಿಸಿದರು.

ಮಂಡಳಿಯ ನೂತನ ಕರ್ನಾಟಕ ರಾಜ್ಯ ಜೈವಿಕ ಇಂಧನ ನೀತಿ 2025 ಹಾಗೂ ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯನ್ನು ಕರ್ನಾಟಕ ಜೈವಿಕ ಇಂಧನ ಅಭಿವೃದ್ಧಿ ಮತ್ತು ನಿರ್ವಹಣಾ ಪ್ರಾಧಿಕಾರವನ್ನಾಗಿ ಪರಿವರ್ತಿಸುವ ಕುರಿತು ಈಗಾಗಲೇ ಪೂರ್ವ ಸಿದ್ಧತಾ ಕಾರ್ಯಗಳ ಕುರಿತು ವಿಚಾರ ವಿನಿಮಯ ಮಾಡಿಕೊಂಡರು.

ಮುಂದಿನ ದಿನಗಳಲ್ಲಿ ಜೈವಿಕ ಇಂಧನ ಕ್ಷೇತ್ರದಲ್ಲಿ ಬಯೋಡಿಸಲ್, 2ಉ ಎಥನಾಲ್ ಜೊತೆಗೆ ಬಯೋ ಗ್ಯಾಸ್ ಸಿಬಿಜಿ ಪ್ರಮುಖ ಪಾತ್ರ ವಹಿಸಲಿದೆ ಎಂದು ಅಭಿಪ್ರಾಯಪಟ್ಟ ಅವರು, ಬಯೋಗ್ಯಾಸ್ ಉತ್ಪಾದನಾ ಕ್ಷೇತ್ರದಲ್ಲಿ ಬಂಡವಾಳ ಹೂಡಿಕೆದಾರರನ್ನು ಆಕರ್ಷಿಸಲು ಮಂಡಳಿಯು ಪೂರಕ ವಾತಾವರಣ ನಿರ್ಮಾಣ ಮಾಡಲು ಯೋಜನೆಗಳನ್ನು ಕಾರ್ಯಗತಗೊಳಿಸಲಾಗುವುದು ಎಂದು ತಿಳಿಸಿದರು.

ಬಳಿಕ ಯುವ ವಿದ್ಯಾರ್ಥಿಗಳೊಂದಿಗೆ ಜೈವಿಕ ಇಂಧನ ಕುರಿತು ಸಂವಾದ ನಡೆಸಿದರು.

ಈ ಸಂದರ್ಭದಲ್ಲಿ ಕೃಷಿ ವಿಜ್ಞಾನ ಕೇಂದ್ರದ ಸಂಯೋಜಕರಾದ ಡಾ.ಗಿರೀಶ್ ಮತ್ತು ರವಿಕುಮಾರ್, ಕೃಷಿ ವಿದ್ಯಾರ್ಥಿಗಳು, ಬೋಧಕ ಸಿಬ್ಬಂದಿ ಹಾಗೂ ಬೋಧಕೇತರ ಸಿಬ್ಬಂದಿಗಳು ಹಾಜರಿದ್ದರು.

# ಒಂದನೆ ಪುಟದಿಂದ...

## 'ಸಿದ್ಧಸಿರಿ' ಪರ ಕೋರ್ಟ್ ಆದೇಶ– ಖಂಡ್ರೆಗೆ ಮುಖಭಂಗ: ಖೂಬಾ

ಹೇಳಿದ್ದಾರೆ.

ಕಾರ್ಖಾನೆಯನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಯಶಸ್ವಿಯಾದ ಕಾರ್ಖಾನೆಯ ಸಂಸ್ಥಾಪಕರು ಹಾಗೂ ಶಾಸಕ ಬಸನಗೌಡ ಪಾಟೀಲ ಅವರ ಹೋರಾಟಕ್ಕೆ ಮೆಚ್ಚುಗೆಯಿದೆ. ಕಾರ್ಖಾನೆ ಮುಚ್ಚಲು ಆಡಳಿತ ಯಂತ್ರ ಬಳಸಿಕೊಂಡು ಎಲ್ಲ ಪ್ರಯತ್ನ ನಡೆಸಿದ ಮುಖ್ಯಮಂತ್ರಿ ಹಾಗೂ ಖಂಡ್ರೆ ಅವರಿಗೆ ತಕ್ಕ ಪಾಠ ಕಲಿಸಿದಂತಾಗಿದೆ. ಪ್ರಸಕ್ತ ಸಾಲಿನಲ್ಲಿ ರಾಜ್ಯದಲ್ಲಿ ಅತಿವೃಷ್ಟಿಯಾಗಿದೆ. ರೈತರ ಉತ್ಪನ್ನ ಖರೀದಿಗೆ ಸಮರ್ಪಕ ಖರೀದಿ ಕೇಂದ್ರಗಳು ಆರಂಭಿಸಿಲ್ಲ. ಪರಿಹಾರಧನ ಸರಿಯಾಗಿ ತಲುಪಿಸಿಲ್ಲ. ಫಸಲ್ ಬಿಮಾ ಯೋಜನೆಗೆ ಸಹಕರಿಸುತ್ತಿಲ್ಲ. ಇಂತಹ ರೈತ ವಿರೋಧಿ ನೀತಿಗಳು ಅನುಸರಿಸಿಕೊಂಡು ಬರುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಚಿವ ಈಶ್ವರ ಖಂಡ್ರೆ ನಾವು ರೈತಪರ, ರೈತರ ಮಕ್ಕಳು ಎಂದು ಹೇಳಿಕೊಂಡು ತಿರುಗಾಡುತ್ತಿದ್ದಾರೆ' ಎಂದು ದೂರಿದರು.

ಸಚಿವ ಸಚಿವ ಈಶ್ವರ ಖಂಡ್ರೆ ಹಾಗೂ ಅವರ ಪರಿವಾರದಿಂದ ಬಿಎಸ್‌ಎಸ್‌ಕೆ ಮೇಲೆ ಕಣ್ಣು ಬಿದ್ದಿದೆ. ಡಿಸಿಸಿ ಬ್ಯಾಂಕ್ ಮೂಲಕ ಯಾರಿಗೂ ತಿಳಿಸದೆ ತರಾತುರಿಯಲ್ಲಿ ಬಿಎಸ್‌ಎಸ್‌ಕೆ ಕಾರ್ಖಾನೆ ಮಾರಾಟಕ್ಕೆ ಹುನ್ನಾರ ನಡೆಸಿದ್ದರು. ಆದರೆ ದೇವರ ದಯೆ ರೈತರು ಹಾಗೂ ಕಾರ್ಮಿಕರ ಮೇಲಿರುವುದರಿಂದ ಬಿಎಸ್‌ಎಸ್‌ಕೆ ಮತ್ತು ಸಿದ್ದಸಿರಿ ಸಕ್ಕರೆ ಕಾರ್ಖಾನೆಯ ವಿಷಯದಲ್ಲಿ ಒಂದು ಹಂತದಲ್ಲಿ ರೈತರಿಗೆ ಹಾಗೂ ಕಾರ್ಮಿಕರಿಗೆ ಜಯ ಸಿಕ್ಕಿದೆ' ಎಂದು ಹೇಳಿದರು.

## ಸಿಸಿ ರಸ್ತೆ, ಚರಂಡಿ ನಿರ್ಮಾಣಕ್ಕೆ ಸಂಸದ ಸಾಗರ್ ಖಂಡ್ರೆ ಚಾಲನೆ

ಜಿಲ್ಲಾ ಉಸ್ತುವಾರಿ ಸಚಿವರ ಅನುದಾನದ ಅಡಿಯಲ್ಲಿ 20 ಲಕ್ಷ ರೂ.ಮೌಲ್ಯದ ರಸ್ತೆ ಹಾಗೂ ಚರಂಡಿ ನಿರ್ಮಾಣಕ್ಕೆ ಚಾಲನೆ ನೀಡಲಾಯಿತು.

ಈ ಸಂದರ್ಭದಲ್ಲಿ ಮಾಜಿ ಪುರಸಭೆ ಉಪಾಧ್ಯಕ್ಷ ಅಶೋಕ್ ಗಾವಕವಾಡ್, ಪ್ರಶಾಂತ್ ಕೋಟಗೇರಾ, ಯಾದವರಾವ್ ಒಳಸಂಗ್, ಶ್ರೀನಿವಾಸ್ ಮೇತ್ರೆ ಹಾಗೂ ಭೀಮಣ್ಣ ವರವಟ್ಟಿಕರ್ ಸೇರಿದಂತೆ ಗ್ರಾಮದ ಅನೇಕರು ಭಾಗವಹಿಸಿದ್ದರು.

## ಔರಾದ(ಬಿ) ಶಾಸಕರ ಕಛೇರಿಯಲ್ಲಿ ಡಾ.ಚನ್ನಬಸವ ಪಟ್ಟದ್ದೇವರ ಜಯಂತಿ ಆಚರಣೆ



ಮಲ್ಲಮ್ಮ ನುಡಿ ವಾರ್ತೆ

ಔರಾದ(ಬಿ) ಶಾಸಕರ ಕಛೇರಿಯಲ್ಲಿ ಡಿ.22ರಂದು ಪರಮ ಪೂಜ್ಯ ಲಿಂ. ಡಾ.ಚನ್ನಬಸವ ಪಟ್ಟದ್ದೇವರ 135ನೇ ಜಯಂತಿಯನ್ನು ಆಚರಿಸಲಾಯಿತು. ಶಾಸಕರಾದ ಪ್ರಭು ಬಿ.ಚವ್ಹಾಣ ಅವರು ಪೂಜ್ಯರ ಭಾವಚಿತ್ರಕ್ಕೆ ಪೂಜೆ ನೆರವೇರಿಸಿ, ಪುಷ್ಪನಮನ ಸಲ್ಲಿಸಿ ಗೌರವ ಸಮರ್ಪಿಸಿದರು.

ಈ ವೇಳೆ ಮಾತನಾಡಿ, ನಿಜಾಮರ ಆಳ್ವಿಕೆಯ ಸಂದರ್ಭದಲ್ಲಿ ನಮ್ಮ ಭಾಗದಲ್ಲಿ ಉರ್ದು ಭಾಷೆಯ ಪ್ರಭಾವ ಹೆಚ್ಚಾಗಿ ಕನ್ನಡ ಅಳಿವಿನಂಚಿನಲ್ಲಿತ್ತು. ಸಾಕಷ್ಟು ದಬ್ಬಾಳಿಕೆ-ವಿರೋಧದ ನಡುವೆಯೂ ಹೊರಗಡೆ ಉರ್ದು ನಾಮಫಲಕ ಹಾಕಿ ಒಳಗಡೆ ಕನ್ನಡ ಕಲಿಸುವ ಮೂಲಕ ನಾಡಿನಲ್ಲಿ ಕನ್ನಡದ ಉಳಿವಿಗೆ ಶ್ರಮಿಸಿದ್ದರು. ಈಗಲೂ ಭಾಲ್ಕಿ ಮಠ ಕನ್ನಡ ಮಠ ಎಂದೇ ಖ್ಯಾತಿಯಾಗಿದೆ ಎಂದು ಸ್ಮರಿಸಿದರು.

ಸಮಾಜದಲ್ಲಿ ಬೇರೂರಿದ್ದ ಅಸಮಾನತೆ, ಜಾತಿ, ಲಿಂಗ ತಾರತಮ್ಯದಂತಹ ಸಮಸ್ಯೆಗಳನ್ನು ತೊಡೆದು ಹಾಕಿ ಕಲ್ಯಾಣ ರಾಜ್ಯವಾಗಿಸಲು 12ನೇ ಶತಮಾನದಲ್ಲಿ ಬಸವಾದಿ ಶರಣರು ಹೋರಾಡಿದ್ದರು. ಅವರಂತೆ ಪೂಜ್ಯ ಡಾ.ಚನ್ನಬಸವ ಪಟ್ಟದ್ದೇವರು ಕೂಡ 20ನೇ ಶತಮಾನದಲ್ಲಿ ಶರಣ-ರ ಆಶಯಗಳಿಗಾಗಿಯೇ ಹೋರಾಡಿದ್ದಾರೆ ಎಂದರು.

ಧಾರ್ಮಿಕ ಕೆಲಸಗಳ ಜೊತೆಗೆ ಶಿಕ್ಷಣದ ಬೆಳವಣಿಗೆಗೆ ಶ್ರಮಿಸಿದ್ದರು. ಶಿಕ್ಷಣದ ಕೊರತೆ ಕಾಣಿಸಿದ ಸಂದರ್ಭದಲ್ಲಿ ಉತ್ತಮ ಶಿಕ್ಷಣ ಸಂಸ್ಥೆಯನ್ನು ತೆರೆದು ಮಾದರಿಯಾದವರು. ಜನ ಜೀವನಕ್ಕೆ ಮಾರಕವಾಗಿ ಪರಿಣಮಿಸುವ ಮದ್ಯಪಾನ, ಧೂಮಪಾನದಂತಹ ದುಶ್ಚಟಗಳ ಬಗ್ಗೆ ಜಾಗೃತಿ ಮೂಡಿಸುವ ಕೆಲಸ ಮಾಡಿದ್ದರು. ಪೂಜ್ಯ ಡಾ.ಬಸವಲಿಂಗ ಪಟ್ಟದ್ದೇವರು ಕೂಡ ಪರಮ ಪೂಜ್ಯ ಡಾ.ಚನ್ನಬಸವ ಪಟ್ಟದ್ದೇವರು ಹಾಕಿಕೊಟ್ಟ ಮಾರ್ಗದಲ್ಲಿಯೇ ಸಾಗುತ್ತಿದ್ದಾರೆ. ಸಮಾಜಕ್ಕೆ ಬೇಡವಾದ ಅನಾಥ ಮಕ್ಕಳಿಗೆ ಆಶ್ರಯ ನೀಡುವುದಲ್ಲದೇ ಉತ್ತಮ ಶಿಕ್ಷಣ ಮತ್ತು ಸಂಸ್ಕೃತಿಯನ್ನು ಕಲಿಸುತ್ತಿದ್ದಾರೆ ಎಂದು ಹೇಳಿದರು.

ಪೂಜ್ಯರ ಆಶಯದಂತೆಯೇ ಬಸವಕಲ್ಯಾಣದಲ್ಲಿ ವಿನೂತನ ಮತ್ತು ಭವ್ಯವಾದ ಅನುಭವ ಮಂಟಪ 600 ಕೋಟಿ ವೆಚ್ಚದಲ್ಲಿ ನಿರ್ಮಾಣಗೊಳ್ಳುತ್ತಿದೆ. ಹಿಂದೆ ನಾನು ಸಚಿವನಾಗಿದ್ದಾಗ ಭೂಮಿ ಪೂಜೆ ನೆರವೇರಿಸಿದ ಹೆಮ್ಮೆಯಿದೆ. ಮುಂದಿನ ದಿನಗಳಲ್ಲಿ ಅನುಭವ ಮಂಟಪ ಬೃಹತ್ ಪ್ರವಾಸಿ ತಾಣವಾಗಿ ಹೊರಹೊಮ್ಮಲಿದೆ ಎಂದು ಹೇಳಿದರು.

ಡಾ.ಚನ್ನಬಸವ ಪಟ್ಟದ್ದೇವರು ನಾಡು ಕಂಡ ಅಪರೂಪದ ಸಂತರಾಗಿದ್ದರು. ಅವರ ಹೆಸರು ಸದಾಸ್ಮರಣೀಯವಾಗಿಸಬೇಕೆಂಬ ಉದ್ದೇಶದಿಂದ ಹಿಂದೆ ಸಚಿವನಾಗಿದ್ದಾಗ ಬೀದರ ಜಿಲ್ಲಾ ರಂಗಮಂದಿರಕ್ಕೆ ಡಾ.ಚನ್ನಬಸವ ಪಟ್ಟದ್ದೇವರು ರಂಗಮಂದಿರವೆಂದು ಮರುನಾಮಕರಣ ಮಾಡಿಸಿದ್ದೇನೆ. ಇದು ನನ್ನ ಜೀವನದ ಅವಿಸ್ಮರಣೀಯ ಘಳಿಗೆಯಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಮುಖಂಡರಾದ ರಾಮಶೆಟ್ಟಿ ಪನ್ನಾಳೆ, ಶಿವರಾಜ ಅಲ್ಮಾಜೆ, ದಯಾನಂದ ಘೂಳೆ, ಸಂದೀಪ ಪಾಟೀಲ, ರಮೇಶ ಗೌಡ, ಜಗದೀಶ ಪಾಟೀಲ, ಎಂ.ಡಿ ಸಲಾವುದ್ದಿನ್, ಮಹೇಶ ಭಾಲ್ಕೆ, ಸಿದ್ರಾಮಪ್ಪ ನಿಡೋದೆ, ಕಿರಣ ಶೆಂಬೆಳ್ಳಿ, ಬಾಬು ಎಕಲಾರ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಬಿ.ಕಾಂ, ಬಿ.ಬಿ.ಎ ಅರ್ಥಶಾಸ್ತ್ರ ವಿಷಯ ಬೋಧನೆಗೆ ಅರ್ಥಶಾಸ್ತ್ರದ್ ಪದವಿಧರರಿಗೆ ಅವಕಾಶ ಕಲ್ಪಿಸುವಂತೆ ಒತ್ತಾಯಿಸಿ ಧರಣಿ




ಮಲ್ಲಮ್ಮ ನುಡಿ ವಾರ್ತೆ

ಬೀದರ. ಡಿ. 22 :– ಬೀದರ ವಿಶ್ವ ವಿದ್ಯಾಲಯ ಬೀದರನ ಅಡಿಯಲ್ಲಿ ಬರುವ ಪದವಿ ಕಾಲೇಜುಗಳಲ್ಲಿ ವಾಣಿಜ್ಯ ಕೋರ್ಸ್ಗಳಲ್ಲಿ ಅರ್ಥ ಶಾಸ್ತ್ರ ವಿಷಯವಿದ್ದು, ಕಾರ್ಪೊರೇಟ್ ಬಿಸ್‌ನೇಸ್, ಬಿಹ್ಯಾವ್‌ವಿವರ್, ಎಂಬ ಪತ್ರಿಕೆ ಇದ್ದು, ಈ ಪತ್ರಿಕೆ ಸಂಪೂರ್ಣವಾಗಿ ಅರ್ಥಶಾಸ್ತ್ರದ ಪಠ್ಯಕ್ರಮವಾಗಿರುತ್ತದೆ. ಈ ವಿಷಯವನ್ನು ಅರ್ಥಶಾಸ್ತ್ರದ ಅಧ್ಯಾಪಕರಿಂದ ಬೊಧೀಸಿ ಅರ್ಥಶಾಸ್ತ್ರದ ಅಧ್ಯಾಪಕರಿಗೆ ನ್ಯಾಯ ಕೊಡಿಸಬೇಕೆಂದು ಒತ್ತಾಯಿಸಿ ಗುರುವಾರ ಅರ್ಥಶಾಸ್ತ್ರ ಅಧ್ಯಾಪಕರ ಸಂಘದ ವತಿಯಿಂದ ಬೀದರ ವಿಶ್ವವಿದ್ಯಾಲಯದ ಎದುರುಗಡೆ ಅರ್ಥಶಾಸ್ತ್ರದ್ ಅಧ್ಯಾಪಕರ ಸಂಘದ ಅಧ್ಯಕ್ಷ ಡಾ. ಜೈಕುಮಾರ ಸಿಂಧೆ, ಪ್ರಧಾನ ಕಾರ್ಯದರ್ಶಿ ಡಾ. ಸುಚಿತ್ರಾನಂದ ಮಲ್ಕಾಪೂರೆ ನೇತ್ರತ್ವದಲ್ಲಿ ಒಂದು ದಿನದ ಸಾಂಕೇತಿಕ ಧರಣಿ ಕೈಗೊಳ್ಳಲಾಯಿತು.

ಧರಣಿ ಉದ್ದೇಶಿಸಿ ಮಾತನಾಡಿದ ಸಂಘದ ಅಧ್ಯಕ್ಷರಾದ ಡಾ. ಜೈಕುಮಾರ ಸಿಂಧೆ, ರಾಜ್ಯದಲ್ಲಿ ರಾಜ್ಯ ಶಿಕ್ಷಣ ನೀತಿ 2024–25ರಿಂದ ರಾಜ್ಯ ಸರ್ಕಾರ ಜಾರಿಗೆ ತಂದಿದೆ. ಬೀದರ ವಿಶ್ವ ವಿದ್ಯಾಲಯ ವ್ಯಾಪ್ತಿಯ ಪದವಿ ಕಾಲೇಜುಗಳಲ್ಲಿ ಬಿ.ಕಾಂ., ಮತ್ತು ಬಿ.ಬಿ.ಎ. ಪದವಿ ಕೋರ್ಸುಗಳಲ್ಲಿ ಅರ್ಥಶಾಸ್ತ್ರದ ವಿಷಯವನ್ನು ಕಡ್ಡಾಯವಾಗಿಟ್ಟು, ಆ ವಿಷಯವನ್ನು ಅರ್ಥಶಾಸ್ತ್ರದಲ್ಲಿಯೇ ಪದವಿ ಸ್ನಾತಕೋತ್ತರ ಪದವಿ ಹೊಂದಿರುವ ಹಾಗೂ ಆ ವಿಷಯದಲ್ಲಿ ಅನುಭವ ಪರಿಣಿತಿ ಪಾಂಡಿತ್ಯ ಹೊಂದಿರುವ ಅರ್ಥಶಾಸ್ತ್ರ ಅಧ್ಯಾಪಕರಿಂದ ಬೊಧೀಸುವುದು ಸೂಕ್ತ ಹಾಗೂ ಈ ವಿಷಯ ಯಾರು ಬೊಧೀಸಬೇಕೆಂಬ ಬಗ್ಗೆ ರಾಜ್ಯ ಉನ್ನತ ಶಿಕ್ಷಣ ಕೌನ್ಸಿಲ್ ಮಾರ್ಗದರ್ಶನವು ಇದೆ.

ಆದ್ದರಿಂದ ಬೀದರ ವಿಶ್ವವಿದ್ಯಾಲಯ ವಾಣಿಜ್ಯ ಕೋರ್ಸಗಳಲ್ಲಿ ಅರ್ಥಶಾಸ್ರದ ಅಧ್ಯಾಪಕರಿಗೆ ಬೊಧನೆಗೆ ಅವಕಾಶ ಕೊಡದೆ ಇರುವುದರಿಂದ ಹಲವಾರು ಅಧ್ಯಾಪಕರು ಕಾರ್ಯಭಾರವಿಲ್ಲದೆ ಕೆಲಸ ಕಳೆದುಕೊಳ್ಳುವ ಸ್ಥಿತಿಯಲ್ಲಿದ್ದಾರೆ. ಹೀಗಾಗಿ ಬೀದರ ವಿಶ್ವ ವಿದ್ಯಾಲಯದ ಕುಲಪತಿಗಳು ರಾಜ್ಯ ಉನ್ನತ ಶಿಕ್ಷಣ ನೀತಿಯ ಪ್ರಕಾರ ವಾಣಿಜ್ಯ ಕೊರ್ಸ್ಗಳಲ್ಲಿ ಅರ್ಥಶಾಸ್ತ್ರದ ಅಧ್ಯಾಪಕರುಗಳಿಗೆ ಬೊಧನೆಗೆ ಅವಕಾಶ ಕೊಡಬೇಕೆಂದು ತಿಳಿಸಿದರು.

ಈ ಹಿಂದೆ ಸಾಕಷ್ಟು ಬಾರಿ ಮನವಿ ಸಲ್ಲಿಸಿದರು ಯಾವುದೇ ಅಂತಿಮ ನಿರ್ಣಯಕ್ಕೆ ವಿಶ್ವ ವಿದ್ಯಾಲಯವು ಬರಲಿಲ್ಲ ನಂತರ ಅಧ್ಯಾಪರಕ ಸಂಘ ಪುನಃ ಮನವಿ ಸಲ್ಲಿಸುವುದರಿಂದ ವಿಶ್ವವಿದ್ಯಾಲಯ ಒಂದು ನಿರ್ಣಯಕ್ಕೆ ಬಂದು ಅರ್ಥಶಾಸ್ತ್ರ ವಿಷಯವನ್ನು ಅರ್ಥಶಾಸ್ತ್ರದ ಅಧ್ಯಾಪಕರಿಂದಲೆ ಬೊಧೀಸಲು ಕುಲಸಚಿವರು ಹಾಗೂ ಕುಲಪತಿಗಳು ಹಲವಾರು ಬಾರಿ ವಾಣಿಜ್ಯ ಹಾಗೂ ಅರ್ಥಶಾಸ್ತ್ರದ ಅಧ್ಯಾಪಕರ ಬಿ.ಓ.ಎಸ್. ಸಭೆ ಕರೆದು ಹಾಗೂ ಡಿನರ್ ವಿವಿದ ವಿಷಯಗಳ ಸಭೆ ಕರೆದು ದಿನಾಂಕ: 28–08–2024 ರಂದು ವಿಶ್ವ ವಿದ್ಯಾಲಯ ಮಟ್ಟದಲ್ಲಿ ಈ ಸಮಸ್ಯೆಗೆ ಪರಿಹರಿಸಲು ಪ್ರಯತ್ನಿಸಲಾಯಿತು. ಆದರೆ ಇದರ ವರದಿ ವಿಶ್ವವಿದ್ಯಾಲಯದ ಕುಲ ಸಚಿವರು, ಹಾಗೂ ಕುಲಪತಿಗಳು ಇನ್ನು ಬಹಿರಂಗ ಪಡಿಸಿಲ್ಲ. ಈ ಹಿನ್ನೇಲೆಯಲ್ಲಿ ಇಂದು ಒಂದು ದಿನದ ಸಾಂಕೇತಿಕ ಧರಣಿ ಕೈಗೊಂಡಿದ್ದು ನಮ್ಮ ಸಮಸ್ಯೆಯನ್ನು ಆಲಿಸಿ ಪರಿಹರಿಸಬೇಕೆಂದು ಒತ್ತಾಯಿಸಿದರು.

ಧರಣಿ ಸ್ಥಳಕ್ಕೆ ಬೀದರ ವಿಶ್ವವಿದ್ಯಾಲಯದ ಕುಲಪತಿಗಳು, ಕುಲಸಚಿವರು ಹಾಗೂ ಆಡಳಿತ ಅಧಿಕಾರಿಗಳು, ಆಗಮಿಸಿ ಧರಣಿ ನಿರತರೊಂದಿಗೆ ಮಾನತಾಡಿ, ಅರ್ಥಶಾಸ್ತ್ರ ವಿಷಯವನ್ನು ಅರ್ಥಶಾಸ್ತ್ರದ ಅಧ್ಯಾಪಕರೆ ಬೊಧಿಸುವುದು ಸೂಕ್ತ ಆದರೆ ಬಿ.ಓ.ಎಸ್.. ವಾಣಿಜ್ಯ ಶಾಸ್ತ್ರದ ಚೇರಮೆನರ ಹಾಗೂ ಅರ್ಥಶಾಸ್ತ್ರದ ಬಿ.ಓ.ಎಸ್.. ಚೇರಮೆನರ ಸಭೆ ಕರೆದು ಡಿಸೆಂಬರ್ ಸಮಸ್ಯೆಗೆ ವಿಶ್ವ ವಿದ್ಯಾಲಯ ಮಟ್ಟದಲ್ಲಿ ಪರಿಹರಿಸಲು ಪ್ರಯತ್ನಿಸುವುದಾಗಿ ತಿಳಿಸಿದ್ದರಿಂದ ಧರಣಿ ಹಿಂತೆಗೆದುಕೊಂಡರು. ಈ ಸಂಧರ್ಭದಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಡಾ. ಸುಚಿತ್ರಾನಂದ ಮಲ್ಕಾಪೂರೆ ಮಾತನಾಡಿ ನಾವು ವಿಶ್ವ ವಿದ್ಯಾಲಯದ ಕುಲಪತಿಗಳು ಹಾಗೂ ಕುಲಸಚಿವರ ಮಾತುಗಳಿಗೆ ಬೆಲೆ ಕೊಟ್ಟು ನಮ್ಮ ಧರಣಿ ಹಿಂತೆಗೆದುಕೊಳ್ಳುತ್ತಿದ್ದೇವೆ. ಮುಂದಿನ ದಿನಗಳಲ್ಲಿ ವಾಣಿಜ್ಯ ಕೊರ್ಸ್ಗಳಲ್ಲಿ ಅರ್ಥಶಾಸ್ತ್ರದ ಅಧ್ಯಾಪಕರಿಗೆ ಅರ್ಥಶಾಸ್ತ್ರ ವಿಷಯ ಬೊಧಿಸಲು ಅವಕಾಶ ಕೊಡದೆ ಹೊದರೆ ಮುಂದಿನ ದಿನಗಳಲ್ಲಿ ಅರ್ಥಶಾಸ್ತ್ರದ ಅಧ್ಯಾಪಕರ ಸಂಘದಿಂದ ಬ್ರಹತ ಪ್ರಮಾಣದಲ್ಲಿ

ಅನಿರ್ಧಿಷ್ಟಾವಧಿ ಧರಣಿ ಕೈಗೊಳ್ಳಬೇಕಾಗುತ್ತದೆಂದರು.

ಧರಣಿಯಲ್ಲಿ ಸಂಘದ ಪದಾಧಿಕಾರಿಗಳಾದ ಡಾ.ಮನೋಜ ಕುಲಕರ್ಣಿ., ಡಾ. ಜೈಭಾರತ ಮಂಗೇಶಕರ. ಉಮಾದೇವಿ ರೆಡ್ಡಿ, ಶಿವಕುಮಾರ ಹೂಗಾರ, ಚಂದ್ರಕಾಂತ ಸಿಂಗೆ, ಡಾ. ಸುನೀಲ ಮುಲಗೆ, ಚಂದ್ರಕಾಂತ ನಾರಾಣಪೂರೆ, ಚಂದ್ರಕಾಂತ ಸಿಂಗೆ, ವಿಶ್ವನಾಥ, ಸುಜಾತಾ ಪಾಟೀಲ್, ಗೋವಿಂದ, ವಿಕಾಸ ಪೋಸ್ತಾರ, ಹಲವಾರು ಜನ ಉಪಸ್ಥಿತರಿದ್ದರು.

## ಗ್ರಾಮೀಣ ಪ್ರದೇಶಗಳಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳು ಇದ್ದಲ್ಲಿ ಡಿಸೆಂಬರ್ 25 ರೊಳಗಾಗಿ ವೈಯಕ್ತಿಕ ಮಾಹಿತಿಯೊಂದಿಗೆ ಅರ್ಜಿ ಸಲ್ಲಿಕೆಗೆ ಸೂಚನೆ

**ಮಲ್ಲಮ್ಮ ನುಡಿ ವಾರ್ತೆ**

ಕಲಬುರಗಿ,ಡಿ.22–ಕಲಬುರಗಿ ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿರುವ ಅನೈರ್ಮಲ್ಯ ಶೌಚಾಲಯ ಹಾಗೂ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳನ್ನು ಗುರುತಿಸಲು ಈಗಾಗಲೇ ಸಮೀಕ್ಷೆಯನ್ನು ಪೂರ್ಣಗೊಂಡಿದ್ದು, ಇದನ್ನು ಹೊರತುಪಡಿಸಿ ಗ್ರಾಮೀಣ ಪ್ರದೇಶಗಳಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳು ಇದ್ದಲ್ಲಿ 2024ರ ಡಿಸೆಂಬರ್ 25ರ ಸಂಜೆ 5 ಗಂಟೆಯೊಳಗಾಗಿ ಸಂಬಂಧಪಟ್ಟ ಆಯಾ ತಾಲೂಕಿನ ತಾಲೂಕುಗಳ ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ತಮ್ಮ ವೈಯಕ್ತಿಕ ಮಾಹಿತಿಯೊಂದಿಗೆ ಅರ್ಜಿ ಸಲ್ಲಿಸಬೇಕೆಂದು ಕಲಬುರಗಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಡಿಸೆಂಬರ್ 23 ರಂದು ಅರಿವು ಮೂಡಿಸುವ ಕಾರ್ಯಕ್ರಮ ಉದ್ಘಾಟನೆ

**ಮಲ್ಲಮ್ಮ ನುಡಿ ವಾರ್ತೆ**

ಕಲಬುರಗಿ,ಡಿ.22– ಕಾಸಿಯಾ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಕರ್ನಾಟಕ ಸರ್ಕಾರ, ಜಿಲ್ಲಾ ಕೈಗಾರಿಕಾ ಕೇಂದ್ರ, ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನಾ ಕೇಂದ್ರ (ವಿ.ಟಿ.ಪಿ.ಸಿ) ಹಾಗೂ ಸ್ಥಳೀಯ ಕೈಗಾರಿಕಾ ಸಂಘಗಳ ಸಹಯೋಗದೊಂದಿಗೆ "ಎಂ.ಎಸ್.ಎಂ.ಇ.ಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸುವುದು ಮತ್ತು ವೇಗಗೊಳಿಸುವುದು" (RAMP) ಯೋಜನೆಯಡಿ ಒಂದು ದಿನದ ಅರಿವು ಮೂಡಿಸುವ ಕಾರ್ಯಕ್ರಮನ್ನು ಡಿಸೆಂಬರ್ 23 ರಂದು ಸೋಮವಾರ ಬೆಳಿಗ್ಗೆ 10.30 ಗಂ–ಟೆಗೆ ಕಲಬುರಗಿಯ ಕಲ್ಯಾಣ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ಈ ಕಾರ್ಯಕ್ರಮವನ್ನು ಕಲಬುರಗಿ ಜಿಲ್ಲಾಧಿಕಾರಿ ಬಿ. ಫೌಜಿಯಾ ತರನ್ನುಮ್ ಅವರು ಅರಿವು ಮೂಡಿಸುವ ಕಾರ್ಯಕ್ರಮವನ್ನು ಉದ್ಘಾಟಿಸುವರು. ಉದ್ದೇಶಿತ ಕಾರ್ಯಕ್ರಮವು ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳ ಉತ್ಪಾದಕತೆ ಮತ್ತು ಸ್ಪರ್ಧಾತ್ಮಕತೆಯನ್ನು ಹೆಚ್ಚಿಸಲು ಸಹಕಾರಿಯಾಗುವುದಲ್ಲದೇ ಎಂ.ಎಸ್.ಎಂ.ಇ. ಗಳ ಸಾಮರ್ಥ್ಯ ವೃದ್ಧಿಗಾಗಿ ನಿರ್ಣಾಯಕವಾಗಲಿದೆ. ದೀರ್ಘಾವಧಿಯ ಆರ್ಥಿಕ ಸ್ಥಿರತೆ ಮತ್ತು ಬೆಳವಣಿಗೆಯನ್ನು ಸಾಧಿಸಲು ಅಗತ್ಯವಾದ ಜ್ಞಾನ ಮತ್ತು ಕೌಶಲ್ಯಗಳೊಂದಿಗೆ ತಮ್ಮ ವ್ಯವಹಾರಗಳನ್ನು ಸಶಕ್ತಗೊಳಿಸುವುದಾಗಿದೆ. ರಫ್ತು ಜಾಗೃತಿ ಕಾರ್ಯಗಾರ, ಲೀನ್ ಯೋಜನೆ ಮತ್ತು ಝಡ್.ಇ.ಡಿ. ಹಾಗೂ ಇತರೆ ಕೈಗಾರಿಕಾ ವಲಯಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಸೇರಿಸಿ ಈ ಕಾರ್ಯಕ್ರಮವನ್ನು ರೂಪಿಸಲಾಗಿದ್ದು, ಹೆಚ್ಚಿನ ವಿವರಗಳಿಗಾಗಿ ಕೆ.ಎಸ್. ಶ್ರೀಧರ ಇವರ ಮೊಬೈಲ್ ಸಂಖ್ಯೆ 9945696049 ಗೆ ಸಂಪರ್ಕಿಸಲು ಕೋರಲಾಗಿದೆ.

# ಬೀದಿ ವ್ಯಾಪಾರಿಗಳ ಕಲ್ಯಾಣಕ್ಕೆ ಸರ್ಕಾರ ಗಮನ ಹರಿಸಲಿ: ಜಗನ್ನಾಥ ಸೂರ್ಯವಂಶಿ



ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ, ಡಿ.22– ಶ್ರಮಿಕ ವರ್ಗಕ್ಕೆ ಸೇರಿದ ಬೀದಿ ಬದಿಯ ವ್ಯಾಪಾರಸ್ಥರು ಅಸಂಘಟಿತ ವಲಯಕ್ಕೆ ಸೇರಿದ್ದಾರೆ ಅವರನ್ನು ಅಸಂಘಟಿತ ಕಾರ್ಮಿಕರೆಂದು ಪರಿಗಣಿಸಿ ಅವರಿಗೂ ಕಾರ್ಮಿಕ ಇಲಾಖೆಯ ಸೇವೆಯನ್ನು ನೀಸಲು ಸರ್ಕಾರ ಮುಂದಾಗಬೇಕು ಎಂದು ಬೀದಿ ವ್ಯಾಪಾರಿಗಳ ಸಂಘದ ಅಧ್ಯಕ್ಷ ಜಗನ್ನಾಥ ಎಸ್.ಸೂರ್ಯವಂಶಿ ಅವರು ಹೇಳಿದರು.

ನಗರದ ಸುಪರ ಮಾರುಕಟ್ಟೆ ಸಿಟಿ ಬಸ್ ನಿಲ್ದಾಣದ ಬಳಿ ಇರುವ ಅಖಿಲ ಕರ್ನಾಟಕ ಬೀದಿ ವ್ಯಾಪಾರಿಗಳ ಸಂಘದ ಕಚೇರಿಯಲ್ಲಿ ಆಯೋಜಿಸಿದ್ದ ಬೀದಿ ಬದಿ ವ್ಯಾಪಾರಿಗಳ ಸ್ಥಿತಿಗತಿಯ ಚಿಂತನ ಮಂಥನ ಕಾರ್ಯಕ್ರಮ ಉದ್ದೇಶಿಸಿ ಅವರು ಮಾತನಾಡಿದರು.

ಬೀದಿ ಬದಿ ವ್ಯಾಪಾರಿಗಳಿಗೆ ಸರಕಾರದಿಂದ ಸಿಗುವ ಮೂಲಭೂತ ಸೌಲಭ್ಯಗಳನ್ನು ಸಮರ್ಪಕವಾಗಿ ಕಲ್ಪಿಸಲು ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು ವಿನಾ ಕಾರಣ ವಿಳಂಭ ಮಾಡಬಾರದು, ಅಸಂಘಟಿತ ವರ್ಗಕ್ಕೆ ಸೇರಿದ ಈ ಶ್ರಮಜೀವಿಗಳ ಕಲ್ಯಾಣಕ್ಕಾಗಿ ಯೋಜನೆಗಳನ್ನು ಸಮರ್ಪಕವಾಗಿ ಜಾರಿಮಾಡಲು ಮುಂದಾಗಬೇಕು ಎಂದರು.

ಸಣ್ಣ ಸಣ್ಣ ವ್ಯಾಪಾರಿಗಳು ಸಂಘಟಿತರಾಗಿದ್ದಾರೆ, ಇವರೆಲ್ಲರಿಗೂ ಸರ್ಕಾರ ಸೌಲಭ್ಯ ಸಿಗುವಂತಾಗಬೇಕು, ಇದನ್ನು ಐಕ್ಯತೆಯ ಮೂಲಕ ಸರ್ಕಾರದ ಗಮನಕ್ಕೆ ತರಲು ಸಾಧ್ಯವಿದ್ದು, ರಾಜ್ಯ ಮತ್ತು ಕೇಂದ್ರ ಸರ್ಕಾರದ ವಿವಿಧ ಯೋಜನೆಗಳ ಲಾಭ ಪಡೆದುಕೊಳ್ಳಲು ಸಂಘಟಿತರಾಗಬೇಕು

ಬೀದಿ ವ್ಯಾಪಾರಿಗಳು ರಸ್ತೆ ಸಂಚಾರಕ್ಕೆ ಯಾವುದೇ ಅಡ್ಡಿಯಾಗದಂತೆ ಹಾಗೂ ಸ್ವಚ್ಛತೆಗೆ ಹೆಚ್ಚಿನ ಮಹತ್ವ ನೀಡಬೇಕು ಎಂದ ಅವರು, ಒಟ್ಟಿನಲ್ಲಿ ಈ ವರ್ಗವನ್ನು ಅಸಂಘಟಿತ ಕಾರ್ಮಿಕ ವರ್ಗಕ್ಕೆ ಸೇರಿಸಿ ಕಾರ್ಮಿಕ ಇಲಾಖೆಯ ಸೌಲಭ್ಯಗಳನ್ನು ಕೊಡಿಸಲು ಸರ್ಕಾರ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಅವರು ಒತ್ತಾಯಿಸಿದರು.

ಕಾರ್ಯಕ್ರಮದಲ್ಲಿ ವೆಂಕಟೇಶ ಕಾಂಬಳೆ, ಸುಮನ್, ಸೈಯದ ಯುನುಸ್, ಲಕ್ಷ್ಮೀಬಾಬಜಿ, ಶ್ರೀದೇವಿ ಕಟ್ಟಕರ, ದತ್ತು ಭಾಸಗಿ, ಬಾಬು ಪರಿಟ್ ಶೇಖ, ರಾಘವೇಂದ್ರ ಸೇರಿದಂತೆ ಹಲವರಿದ್ದರು.

# ಅಂತರಾಷ್ಟ್ರೀಯ ಧ್ಯಾನ ದಿನಾಚರಣೆ



ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ:ಡಿ.22:ಅಂತರಾಷ್ಟ್ರೀಯ ಧ್ಯಾನ ದಿನಾಚರಣೆಯ ಅಂಗವಾಗಿ ಕಲ್ಯಾಣ ಕರ್ನಾಟಕದ ಕಲಬುರ್ಗಿ ಜಿಲ್ಲೆಯ ವಿವಿದ ಯೋಗ ಸಂಸ್ಥೆಗಳ ಸಂಯೋಗದಡಿಯಲ್ಲಿ ಶಾಂತಿ, ಸಮಾಧಾನ, ಸೌಹಾರ್ದತೆಯ ಶಕ್ತಿಯ ಜಾಗೃತಿಗಾಗಿ ಧ್ಯಾನ ಕಾರ್ಯಕ್ರಮವನ್ನು ನಗರದ ಸಾರ್ವಜನಿಕ ಉದ್ಯಾನವನದಲ್ಲಿ ಈ ದಿನ ಆಚರಿಸಲಾಯಿತು.

ಈ ಕಾರ್ಯಕ್ರಮದ ಪ್ರಾಸ್ತಾವಿಕ ಹಾಗೂ ಧ್ಯಾನವನ್ನು ಪತಂಜಲಿ ಯೋಗ ಸಮಿತಿಯ ಭಾರತ ಸ್ವಾಭಿಮಾನದ ಜಿಲ್ಲಾಧ್ಯಕ್ಷ ಶ್ರೀ ಶಿವಾನಂದ ಸಾಲಿಮಠ ನೆರವೇರಿಸಿದರು, ಸ್ವಾಗತ ಮತ್ತು ಪ್ರಾಣಾಯಾಮಗಳನ್ನು ಶ್ರೀ ಚಂದ್ರಕಾಂತ ಬಿರಾದಾರ ನೆರವೇರಿಸಿದರು, ಬ್ರಹ್ಮಕುಮಾರಿ ಕವಿತಾ ಅಕ್ಕನವರು ಧ್ಯಾನದ ಕುರಿತು ವಿಶೇಷ ಉಪನ್ಯಾಸ ನೀಡಿದರು, ಪತಂಜಲಿ ಯೋಗ ಸಮಿತಿಯ ಅಧ್ಯಕ್ಷ ಶ್ರೀ ಹೆಚ್ ಸುಭಾಷ್ಚಂದ್ರ ಯೋಗ ದೇಹಕ್ಕೆ ಹಾಡ್ವೇರ್ ಆದರೆ ಧ್ಯಾನ ಸಾಫ್ಟ್ವೇರ್ ಮತ್ತು ಧ್ಯಾನದ ಮಹತ್ವವನ್ನು ತಿಳಿಹೇಳಿದರು. ಕಾರ್ಯಕ್ರಮದ ವಂದನಾರ್ಪಣೆ ಭಾರತ ಸ್ವಾಭಿಮಾನದ ಪ್ರಧಾನ ಕಾರ್ಯದರ್ಶಿ ಮಂಜುಳಾ ತಡಿಬಿಡಿ ಮಠ ನಿರ್ವಹಿಸಿದರು. ಶ್ರೀ ಬ್ರಹ್ಮ ಕುಮಾರ್ ಶರಣಬಸಪ್ಪ ಹೀರಾ, ಸುದೀಪ್, ಪತಂಜಲಿ ಯೋಗ ಸಮಿತಿಯ ಕಲಬುರಗಿಯ ಯೋಗ ಶಿಕ್ಷಕರಾದ ಬಸವರಾಜ್ ಕಾಪಟೆ, ಕೆ ಆರ್ ಕುಲಕರ್ಣಿ, ಚಂದ್ರಶೇಖರ್ ಗುರುಗುಂಟಿ, ಶರಣು ಉದನೂರು, ಘನಶ್ಯಾಮ ಗುತ್ತೇದಾರ್, ಖೆಮ್ಸಿಂಗ್ ಪವಾರ್, ಬಸವರಾಜ ಬೆನ್ನೂರ್, ಶರಣಗೌಡ ಪಾಟೀಲ್, ಮಹಾನಂದ, ರಾಜೇಂದ್ರ ಕಿಣಗಿ, ಡಾ ಸಂಗಮೇಶ ಕೇರಿ, ತಿಪ್ಪಣ್ಣ ತುರಂಗ, ನಿಂಗಣ್ಣಾ ನಡುವಿಹಳ್ಳಿ, ಮತ್ತು ವಿವಿಧ ಯೋಗ ಸಂಸ್ಥೆಗಳಾದ ಪತಂಜಲಿ ಯೋಗ ಸಮಿತಿ, ಬ್ರಹ್ಮ ಕುಮಾರಿ ಈಶ್ವರಿ ವಿಶ್ವ ವಿದ್ಯಾಲಯ, ವಿವೇಕ ಜಾಗೃತಿ ಯೋಗ ಪೀಠ, ಪಿಜಿ ಡಿಪ್ಲೋಮಾ ಯೋಗ ಕಾಲೇಜ್, ಭೂಮಿ ಯೋಗ ಫೌಂಡೇಷನ್, ಓಂ ಯೋಗ ಕೇಂದ್ರ, ಹರಿ ಓಂ ಯೋಗ ಕೇಂದ್ರದ ಅನೇಕ 200ಕ್ಕೂ ಹೆಚ್ಚು ಯೋಗ ಮುಖ್ಯಸ್ಥರು, ಯೋಗ ಶಿಕ್ಷಕರು, ಯೋಗ ಸಾಧಕರು ಹಾಗೂ ಸಾರ್ವಜನಿಕರು ಧ್ಯಾನ ಶಿಬಿರದಲ್ಲಿ ಪಾಲ್ಗೊಂಡಿದ್ದರು.

# ಮರ್ಮಾಂಗ ಸುಟ್ಟು ದೊಣ್ಣೆಯಿಂದ ಹೊಡೆದು ಯುವಕನ ಭೀಕರ ಕೊಲೆ

ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು,ಡಿ.22– ಕುಡಿದ ಮತ್ತಿನಲ್ಲಿ ಸಿಗರೇಟ್‌ನಿಂದ ಮರ್ಮಾಂಗ ಸುಟ್ಟು ದೊಣ್ಣೆಯಿಂದ ಹೊಡೆದು ಭೀಕರವಾಗಿ ಹತ್ಯೆಗೈದಿರುವ ಮಾದನಾಯ್ಕನಹಳ್ಳಿಯ ದಾರುಣ ಘಟನೆ ಭೋವಿತಿಮ್ಮನಪಾಳ್ಯದಲ್ಲಿ ನಡೆದಿದ್ದು, ತಡವಾಗಿ ಬೆಳಕಿಗೆ ಬಂದಿದೆ.

ಭೋವಿತಿಮ್ಮನಪಾಳ್ಯದ ಪ್ರದೀಪ್ (41) ಹಾಗೂ ಆರೋಪಿಯನ್ನು ಚೇತನ್ (30) ಎಂದು ಗುರುತಿಸಲಾಗಿದೆ.

ಕಳೆದ ಡಿ.19 ರಂದು ಕೊಲೆಯಾದ ಪ್ರದೀಪ್ ಪತ್ನಿಯೊಂದಿಗೆ ಜಗಳವಾಡಿಕೊಂಡಿದ್ದು, ಇದರಿಂದ ಇಬ್ಬರು ಬೇರೆಯಾಗಿದ್ದರು. ಆಕೆಯನ್ನು ಆರೋಪಿ ಚೇತನ್ ತನ್ನ ಮನೆಯಲ್ಲಿ ಇರಿಸಿಕೊಂಡಿದ್ದು, ಇದರಿಂದ ಕುಡಿದ ಮತ್ತಿನಲ್ಲಿ ಬಂದ ಪ್ರದೀಪ್ ಅವನ ಮನೆಯಲ್ಲಿ ಮೂತ್ರ ವಿಸರ್ಜನೆ ಮಾಡುತ್ತಿದ್ದು, ಇದೇ ವಿಚಾರಕ್ಕೆ ಇಬ್ಬರ ನಡುವೆ ಗಲಾಟೆಯಾಗಿದೆ.

ಗಲಾಟೆ ವಿಕೋಪಕ್ಕೆ ತಿರುಗಿದಾಗ ಸಿಗರೇಟ್‌ನಿಂದ ಮರ್ಮಾಂಗ ಸುಟ್ಟು ದೊಣ್ಣೆಯಿಂದ ಹೊಡೆದು ಕೊಲೆ ಮಾಡಿದ್ದಾನೆ. ಕಿರುಚಾಡುವ ಶಬ್ದ ಕೇಳಿಸದಂತೆ ಟಿವಿ ಸೌಂಡ್ ಜಾಸ್ತಿ ಇಟ್ಟು ಕೊಲೆ ಮಾಡಲಾಗಿದೆ.

ಟಿವಿ ಸೌಂಡ್ ಜಾಸ್ತಿ ಆದ ಹಿನ್ನೆಲೆಯಲ್ಲಿ, ಮನೆಯ ಮಾಲೀಕರು ಬಂದು ನೋಡಿದಾಗ ಕೊಲೆ ಪ್ರಕರಣ ಬೆಳಕಿಗೆ ಬಂದಿದೆ.

ಕೊಲೆಯ ಬಳಿಕ ತನ್ನ ಕಾರಿನಲ್ಲಿ ಚೇತನ್ ಪರಾರಿಯಾಗುತ್ತಿದ್ದ. ಟವರ್ ಲೊಕೇಶನ್ ಆಧಾರದ ಮೇಲೆ ಮಾದನಾಯಕನಹಳ್ಳಿ ಠಾಣೆಯ ಪೊಲೀಸರು ಬಂಧಿಸಿ ತನಿಖೆಯನ್ನು ಕೈಗೊಂಡಿದ್ದಾರೆ.

ಘಟನೆ ಸಂಬಂಧ ಆರೋಪಿ ಚೇತನ್‌ನನ್ನು ಪೊಲೀಸರು ಬಂಧಿಸಿದ್ದು, ಸಲಿಂಗಕಾಮಕ್ಕೆ ಸ್ನೇಹಿತನನ್ನು ಹತ್ಯೆ ಮಾಡಿರಬಹುದು ಎಂಬ ಶಂಕೆಯಲ್ಲಿ ಶಂಕಿಸಿದ್ದಾರೆ.

# ಭಾಷೆಗಳ ಮಹತ್ವ ಕುರಿತ ವಿಚಾರ ಸಂಕಿರಣ

ಮಲ್ಲಮ್ಮ ನುಡಿ ವಾರ್ತೆ

ತುಮಕೂರು, ಡಿ. 21– ನಗರದ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಸಂಸ್ಕೃತ ಮತ್ತು ಹಿಂದಿ ವಿಭಾಗದ ವತಿಯಿಂದ ಭಾಷೆಗಳ ಮಹತ್ವ ಕುರಿತು ವಿಚಾರ ಸಂಕಿರಣ ಏರ್ಪಡಿಸಲಾಗಿತ್ತು. ಕಾಲೇಜಿನ ಪ್ರಾಂಶುಪಾಲರಾದ ಡಾ. ನಿಜಲಿಂಗಪ್ಪ ಟಿ.ಬಿ. ರವರು ಪ್ರತಿಯೊಂದು ಭಾಷೆಯು ಅದರದೇ ಆದ ಮಹತ್ವ ಹೊಂದಿದೆ. ಆ ಭಾಷೆ ಅಲ್ಲಿನ ಮೌಲ್ಯಗಳನ್ನು ಕುರಿತು ವಿದ್ಯಾರ್ಥಿಗಳಿಗೆ ತಿಳಿಸಿದರು.

ಸಂಸ್ಕೃತ ವಿಷಯ ಕುರಿತು ಮಾತನಾಡಿದ ವತ್ಸಲಾ ಜಿ. ರವರು, ಕಾಳಿದಾಸನು ತನ್ನ ಕಾವ್ಯಗಳಲ್ಲಿ ನೈತಿಕ ಮೌಲ್ಯ ಅಜಮಹರಾಜನ ಗುಣ ಲಕ್ಷಣಗಳನ್ನು ಸೂಕ್ಷ್ಮವಾಗಿ ತಿಳಿಸಿದರು. ಹಿಂದಿ ವಿಷಯ ಕುರಿತು ಡಾ. ಶೋಭಾ, ಭಾಷೆಯ ಪ್ರಾಮುಖ್ಯತೆ, ಇತಿಹಾಸ ಕುರಿತು ಮಾತನಾಡಿದರು. ಈ ಸಂದರ್ಭದಲ್ಲಿ ಹಿಂದಿ ಮುಖ್ಯಸ್ಥರಾದ ರೆಹಾನ ಭಾನು, ಸಂಸ್ಕೃತ ವಿಭಾಗದ ಮುಖ್ಯಸ್ಥರಾದ ಸಿದ್ಧಲಿಂಗಸ್ವಾಮಿ, ಐ.ಕ್ಯೂ.ಎ.ಸಿ. ಮುಖ್ಯಸ್ಥರಾದ ಸರ್ವಮಂಗಳ ಮತ್ತಿತರರು ಉಪಸ್ಥಿತರಿದ್ದರು. ತುಮಕೂರು ವಿಶ್ವವಿದ್ಯಾನಿಲಯದ ಡಾ. ಶೋಭಾ ರವರು ಅತಿಥಿಗಳಾಗಿ ಆಗಮಿಸಿದ್ದರು.

# ಅಮಿತ ಶಾ ವಿರುದ್ಧ ಕ್ರಮಕ್ಕೆ ಆಗ್ರಹ



ಮಲ್ಲಮ್ಮ ನುಡಿ ವಾರ್ತೆ

ಕಮಲಾಪುರ,ಡಿ.22–ಕೇಂದ್ರ ಗೃಹಮಂತ್ರಿ ಅಮಿತ್ ಶಾ ಡಾ.ಅಂಬೇಡ್ಕರ್ ವಿರುದ್ಧ ಹಗುರವಾಗಿ ಮಾತನಾಡಿದ್ದು ಕೂಡಲೆ ಅವರನ್ನು ಗೃಹಮಂತ್ರಿ ಸ್ಥಾನದಿಂದ ಪದಚ್ಯುತಿಗೊಳಿಸಿ ಕಾನೂನು ಕ್ರಮ ಜರುಗಿಸಬೇಕು ಎಂದು ಬಹುಜನ ಶೋಷಿತ ಸಮಾಜ ಸಂಘರ್ಷ ಸಮಿತಿ ಹಾಗೂ ಭೀಮ ಪುತ್ರಿ ಬ್ರಿಗೇಡ್ ಜಿಲ್ಲಾ ಸಮಿತಿ ಮತ್ತು ತಾಲೂಕ ಸಮಿತಿ ವತಿಯಿಂದ ಪ್ರತಿಭಟನೆ ನಡೆಸಿದ್ದರು. ಬಿ.ಆರ್.ಅಂಬೇಡ್ಕರ್ ಪ್ರತಿಮೆ ಆವರಣದಿಂದ ತಹಶೀಲ್ದಾರ ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ಮೂಲಕ ಆಗಮಿಸಿದರು. ಶಾ ವಿರುದ್ಧ ಘೋಷಣೆ ಕೂಗಿದರು. ಗ್ರೇಡ್ 2 ತಹಶೀಲ್ದಾರ ಶಿವಕುಮಾರ ಶಾಬಾ ಮೂಲಕ ರಾಷ್ಟ್ರಪತಿಗೆ ಮನವಿ ಸಲ್ಲಿಸಿದರು.

ಬಿಎಸ್4 ಅಧ್ಯಕ್ಷ ಅಶೋಕಕುಮಾರ ಗೌರೆ, ಭೀಮಪುತ್ರಿ ಬ್ರಿಗೇಡ್ ಜಿಲ್ಲಾಧ್ಯಕ್ಷ ರಾಜಕುಮಾರ, ಮಹಿಳಾ ಘಟಕದ ಜಿಲ್ಲಾ ಅಧ್ಯಕ್ಷ ಜಗದೇವಿ, ಶಾಖಾ, ಸಾಯಿಬಣ್ಣ, ರಾಜೇಶ್ವರಿ, ದೇವಿಂದ್ರಪ್ಪ ಚೆಂಗಟಾ, ಅಶೋಕ ತಂಗಾ, ಅರುಣ ಬೆಳಕೋಟ, ಭೀಮಾ ಪಟ್ನಾಯಕ್, ಅಮರನಾಥ ಪಟ್ನಾಯಕ್, ಬಾಬುರಾವ ಸೋನಾದಿ , ದೀಪಕ ದಿನಸಿ, ದತ್ತು ಪಟ್ನಾಯಕ್, ಪಾಂಡುರಂಗ ಬಾಚನಾಳ, ಮಂಜು ಪೂಜಾರಿ, ಸಂತೋಷ್ ಚವ್ಹಾಣ, ಅವಿನಾಶ್ ಹಿಂಗೆ, ಸಚಿನ ಕಲಕೂಟಗಿ, ಅಮರ ಓಕಳಿ ಶ್ರೀದೇವಿ ದಸ್ತಾಪುರ್ ಕಾವೇರಿ ಜೀವಣಗಿ ಶೇಖಮ್ಮ ಜೇವನಗಿ ಮೋಸಿನ್ ಪಟೇಲ್ ಗುಲಾಮ ನಬಿ ಸಿದ್ದು ಕಟ್ಟಿಮನಿ ಹಾಜರಿದ್ದರು.

# ವಾರ್ಷಿಕ ಕ್ರೀಡಾಕೂಟದ ಧ್ವಜಾರೋಹಣ



ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ:ಡಿ.22:ಬಸವೇಶ್ವರ ಇಂಗ್ಲಿಷ್ ಮೀಡಿಯಂ ಪ್ರೌಢಶಾಲೆಯಲ್ಲಿ ವಾರ್ಷಿಕ ಕ್ರೀಡಾಕೂಟದ ಧ್ವಜಾರೋಹಣವನ್ನು ಬಸವಯೋಗ ಕೇಂದ್ರದ ಪ್ರಾಚಾರ್ಯರಾದ ಕೆ ಎಸ್ ಪಲ್ಯದ್ ನೆರವೇರಿಸಿದರು.

ದೈಹಿಕ ಶಿಕ್ಷಣ ವಿಭಾಗದ ಅಧಿಕಾರಿಗಳಾದ ಜಿ ಬಿ ಅಣ್ಣಿಗೇರಿ ಒಲಂಪಿಕ್ ಜ್ಯೋತಿಯನ್ನು ಬೆಳಗಿಸಿದರು. ಕಾರ್ಯಕ್ರಮವನ್ನು ತೋಂಟದಾರ್ಯ ಇಂಜಿನಿಯರಿಂಗ್ ಕಾಲೇಜಿನ ಕಂಪ್ಯೂಟರ್ ಸೈನ್ಸ್ ಮತ್ತು ಡಿಸೈನ್ ವಿಭಾಗದ ಮುಖ್ಯಸ್ಥರಾದ ಪ್ರೋಫೆಸರ್ ವಿಜಯಕುಮಾರ್ ಎಸ್ ಮಾಲ್ಗಿತ್ತಿ ಉದ್ಘಾಟಿಸಿದರು.

ಮುಖ್ಯ ಅತಿಥಿ ಸ್ಥಾನವನ್ನು ಬಸವೇಶ್ವರ ಪ್ರೌಢಶಾಲೆಯ ಮುಖ್ಯ ಗುರುಗಳಾದ ಕೆವಿ ಕೊರಡ್ಡಿ, ಡಿಸಿ ಪಾವಟೆ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯರಾದ ಎಸ್. ಪಿ. ಗೌಳಿ , ಶಿವಾನಂದ್ ಗಿಡ್ಡ ಕೆಂಚನ್ನವರ್, ಶ್ರೀಮತಿ ಲತಾ ಕಲ್ಬಾಡ್, ಕಾರ್ಯಕ್ರಮದ ಅಧ್ಯಕ್ಷತೆ ಸ್ಥಾನವನ್ನು ಜಗದ್ಗುರು ತೋಂಟದಾರ್ಯ ವಿದ್ಯಾಪೀಠದ ಕಾರ್ಯದರ್ಶಿಗಳಾದ ಪ್ರೋಫೆಸರ್ ಎಸ್ ಎಸ್ ಪಟ್ಟಣ್ ಶೆಟ್ಟರ್ ಅಲಂಕರಿಸಿದ್ದರು. ಈ ಸಂದರ್ಭದಲ್ಲಿ ಬೋಧಕ ,ಬೋಧಕೇತರ ಸಿಬ್ಬಂದಿಗಳು, ವಿದ್ಯಾರ್ಥಿಗಳು ಸೇರಿ ಮುಂತಾದವರು ಹಾಜರಿದ್ದರು.

# ಕೇಜ್ರಿವಾಲ್ ವಿಚಾರಣೆಗೆ ಗವರ್ನರ್ ಸಮ್ಮತಿ

ಮಲ್ಲಮ್ಮ ನುಡಿ ವಾರ್ತೆ

ನವದೆಹಲಿ, ಡಿ.22– ದೆಹಲಿ ಅಬಕಾರಿ ನೀತಿ ಪ್ರಕರಣದಲ್ಲಿ ಎಎಪಿ ರಾಷ್ಟ್ರೀಯ ಸಂಚಾಲಕ ಹಾಗು ಮಾಜಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ವಿಚಾರಣೆಗೆ ಒಳಪಡಿಸಲು ದೆಹಲಿ ಲೆಫ್ಟಿನೆಂಟ್ ಗವರ್ನರ್ ಸಮ್ಮತಿ ನೀಡಿದ್ದಾರೆ. ಹೀಗಾಗಿ ಮತ್ತೊಮ್ಮೆ ಸಂಕಷ್ಟಕ್ಕೆ ಸಿಲುಕುವಂತಾಗಿದೆ. ದೆಹಲಿ ಮಾಜಿ ಮುಖ್ಯಮಂತ್ರಿ ಅವರಿಂದ್ ಕೇಜ್ರಿವಾಲ್ ಅವರನ್ನು ಮಾರ್ಚ್ 21 ರಂದು ಬಂಧಿಸಲಾಗಿತ್ತು.6 ತಿಂಗಳ ಜೈಲಿನಿಂದ ಬಿಡುಗಡೆಯಾದ ಬಳಿಕ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.

2021–22 ರ ಅಬಕಾರಿ ನೀತಿ–ಸಂಬಂಧಿತ ಮನಿ ಲಾಂಡರಿಂಗ್ ಪ್ರಕರಣದಲ್ಲಿ ಸೆಪ್ಟೆಂಬರ್‌ನಲ್ಲಿ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದರು. ಅಬಕಾರಿ ನೀತಿ ಪ್ರಕರಣದಲ್ಲಿ ಎಎಪಿ ಮುಖ್ಯಸ್ಥ ಮತ್ತು ದೆಹಲಿ ಮಾಜಿ ಸಿಎಂ ವಿರುದ್ಧ ಕಾನೂನು ಕ್ರಮ ಜರುಗಿಸಲು ಜಾರಿ ನಿರ್ದೇಶನಾಲಯಕ್ಕೆ ಅನುಮತಿ ನೀಡಿದ್ದಾರೆ ಎಂದು ಎಲ್‌ಜಿ ಕಚೇರಿ ಮಾಹಿತಿ ನೀಡಿದೆ. ಕ್ರಿಮಿನಲ್ ಪ್ರಕರಣದಲ್ಲಿ ಸದ್ಯಕ್ಕೆ ವಿಚಾರಣಾ ನ್ಯಾಯಾಲಯದ ವಿಚಾರಣೆಗೆ ತಡೆ ನೀಡಲು ಹೈಕೋರ್ಟ್ ನಿರಾಕರಿಸಿದೆ. ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಅರವಿಂದಗ ಕೇಜ್ರಿವಾಲ್‌ಗೆ ಜುಲೈ 12 ರಂದು ಸುಪ್ರೀಂ ಕೋರ್ಟ್ ಮಧ್ಯಂತರ ಜಾಮೀನು ನೀಡಿದರೆ, ಸುಪ್ರೀಂ ಕೋರ್ಟ್ ಅವರನ್ನು ಸೆಪ್ಟೆಂಬರ್ 13 ರಂದು ಸಿಬಿಐ ಪ್ರಕರಣದಲ್ಲಿ ಜಾಮೀನಿನ ಮೇಲೆ ಬಿಡುಗಡೆ ಮಾಡಿತ್ತು. ಸಿಬಿಐ ಮತ್ತು ಜಾರಿ ನಿರ್ದೇಶನಾಲಯದ ಪ್ರಕಾರ, ಅಕ್ರಮಗಳು ನಡೆದಿವೆ. ಪರವಾನಗಿ ಹೊಂದಿರುವವರಿಗೆ ನೀತಿ ಮತ್ತು ಅನಪೇಕ್ಷಿತ ಅನುಕೂಲಗಳನ್ನು ವಿಸ್ತರಿಸಲಾಗಿತ್ತು.

2021–22ರ ಅಬಕಾರಿ ನೀತಿ ಸಂಬಂಧಿತ ಮನಿ ಲಾಂಡರಿಂಗ್ ಪ್ರಕರಣದಲ್ಲಿ ಮಾಜಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್‌ಗೆ ಜಾಮೀನು ಮಂಜೂರು ಮಾಡುವುದರ ವಿರುದ್ಧ ಜಾರಿ ನಿರ್ದೇಶನಾಲಯದ ಮನವಿಯನ್ನು ದೆಹಲಿ ಹೈಕೋರ್ಟ್ ಈಗ ಜನವರಿ 17,ರಂದು ವಿಚಾರಣೆ ನಡೆಸಲಿದೆ.

# ಸಂಗೀತಕ್ಕೆ ನಾದ ಬಹಳ ಮುಖ್ಯ



ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಡಿ.22–ಸಂಗೀತವನ್ನು ಆಲಿಸಬೇಕಾದರೆ ನಾದ ಬಹಳ ಮುಖ್ಯ. ಇತಿಹಾಸದುದ್ದಕ್ಕೂ ಶ್ರೇಷ್ಠ ಮಾನವ ಸೃಷ್ಟಿ ಎಂದು ಕರೆಯಲಾಗುತ್ತದೆ. ಸಂಗೀತವು ನಮ್ಮ ಜೀವನದ ಒಂದು ನಿರ್ಣಾಯಕ ಭಾಗವಾಗಿದೆ, ಇದು ಕೇವಲ ಮೋಜಿನ ಪಾಸ್–ಟೈಮ್ ಅಲ್ಲ ಆದರೆ ಉತ್ತಮ ಒತ್ತಡ ಬಸ್ಟರ್ ಆಗಿದೆ. ಸಂಗೀತವು ಮಾನವ ಜೀವನದ ವಿವಿಧ ಕ್ಷಣಗಳ ಪ್ರಮುಖ ಭಾಗವಾಗಿದೆ. ಇದು ವ್ಯಕ್ತಿಯ ಜೀವನದಲ್ಲಿ ಸಂತೋಷವನ್ನು ಹರಡುತ್ತದೆ. ಸಂಗೀತವು ಜೀವನದ ಆತ್ಮವಾಗಿದೆ ಮತ್ತು ನಮಗೆ ಅಪಾರ ಶಾಂತಿಯನ್ನು ನೀಡುತ್ತದೆ ಎಂದು ಆಧ್ಯಾತ್ಮ ಚಿಂತಕರಾದ ಸಿದ್ಧಾರೂಢ ಶರಣರು ಅಭಿಪ್ರಾಯಪಟ್ಟರು.

ನಗರದ ನ್ಯೂ ರಾಘವೇಂದ್ರ ಕಾಲೋನಿಯ ಶಿವ ಮಂದಿರ ದೇವಸ್ಥಾನದ ಆವರಣದಲ್ಲಿ ಗಾನ ಭಾರತಿ ಸಂಗೀತ ಸಾಹಿತ್ಯ ಸೇವಾ ಸಂಸ್ಥೆ ಹಾಗು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತ ಆಶ್ರಯದಲ್ಲಿ ಜರುಗಿದ ನಾದಮಯ ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಮುಖ್ಯ ಅತಿಥಿಗಳಾದ ಸುರೇಶ ಕುಲಕರ್ಣಿ ಮಾತನಾಡಿ, ಸಂಗೀತವು ನಮ್ಮ ಮನಸ್ಸನ್ನು ಶಾಂತಗೊಳಿಸುತ್ತದೆ ಮತ್ತು ನಮ್ಮಗೆ ಸಂಪೂರ್ಣವಾಗಿ ಪುನಯೌ‌ವನಗೊಳಿಸುತ್ತದೆ. ಸಂಗೀತವು ವಿದ್ಯಾರ್ಥಿಗಳಿಗೆ ತಮ್ಮ ಮನಸ್ಸನ್ನು ವಿಸ್ತರಿಸಲು ಮತ್ತು ಅವರ ಆತ್ಮ ವಿಶ್ವಾಸವನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ ಎಂದರು.

ಅಮರನಾಥ ಪಾಟೀಲ ಜಿಡಗಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ದತ್ತಪ್ಪ ಸಾಗಾನೂರ, ಮರಬಸಯ್ಯ ಸ್ವಾಮಿ ಇಂಗಳಗಿ, ಸುಮಾ ಪಾಟೀಲ, ಸಂಸ್ಥೆಯ ಅಧ್ಯಕ್ಷರಾದ ಮಹಾದೇವಿ ಸಪ್ಪನಗೊಳ ಉಪಸ್ಥಿತರಿದ್ದರು. ಕಲಾವಿದರಾದ ಅಣ್ಣಾರಾಯ ಮತ್ತಿಮಡು, ಸೈದಪ್ಪ ಸಪ್ಪನಗೋಳ, ಶಿವಕುಮಾರ ಪಾಟೀಲ, ಬಸಯ್ಯ ಸ್ಥಾವರಮಠ, ಉದಯ ಕುಮಾರ ಭಿಮಳ್ಳ, ಶ್ರೀಶೈಲ ಕೊಂಡೆದ, ನಾಗೇಂದ್ರ ಸಪ್ಪನಗೋಳ, ತೇಜು ನಾಗೋಜಿ, ನಾಗಲಿಂಗಯ್ಯ ಸ್ಥಾವರಮಠ, ಸಾಗರ ಭಿಮಳ್ಳಿ ಅವರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ರವಿ ಸ್ವಾಮಿ, ಸೋಮಶೇಖರ ಕಲ್ಯಾಣಿ, ಅನೀಲ ಮಠಪತಿ, ರವಿ ಸ್ವಾಮಿ ಗೋಟೂರ, ಪರಮೇಶ್ವರ ಕಲಶೆಟ್ಟಿ ತಬಲಾ ಸಾತ ನೀಡಿದರು. ಬಂಡಯ್ಯ ಸ್ವಾಮಿ ಸುಂಟನೂರ ಕಾರ್ಯಕ್ರಮ ನಿರೂಪಿಸಿದರು.

# ನಾಗಾವಿ ಇತಿಹಾಸ ಕುರಿತು ಉತ್ಖನನ ಹಾಗೂ ಸಂಶೋಧನೆ ಆಗಬೇಕಿದೆ: ನಾಗಯ್ಯ ಹಿರೇಮಠ



ಮಲ್ಲಮ್ಮ ನುಡಿ ವಾರ್ತೆ

ಚಿತ್ತಾಪುರ:ಡಿ.22: ರಾಷ್ಟ್ರಕೂಟರ ಕಾಲದಿಂದ ನಾಗಾವಿ ವಾಸ್ತುಶಿಲ್ಪ ಕಲೆಗೆ ಹಾಗೂ ಶಿಲಾಶಾಸನಗಳಿಗೆ ಹಾಗೂ ಭವ್ಯ ಪರಂಪರೆಗೆ ಹೆಸರಾಗಿದ್ದು ಈಗ ಅಳಿವಿನ ಅಂಚಿನಲ್ಲಿದೆ ಹೀಗಾಗಿ ಇಲ್ಲಿ ಸಂರಕ್ಷಣೆ ಜೊತೆಗೆ ಉತ್ಖನನ ಹಾಗೂ ಹೆಚ್ಚು ಸಂಶೋಧನೆ ಆಗಬೇಕಾಗಿರುವುದು ಬಹಳ ಅವಶ್ಯಕತೆಯಿದೆ ಎಂದು ತಹಸೀಲ್ದಾರ್ ನಾಗಯ್ಯ ಹಿರೇಮಠ ಹೇಳಿದರು.

ಪಟ್ಟಣದ ನಾಗಾವಿ ಕ್ಯಾಂಪಸ್‌ನ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ನಾಗಾವಿ ಸಾಹಿತ್ಯ ಸಾಂಸ್ಕೃತಿಕ ಪರಿಷತ್ ವತಿಯಿಂದ ಶನಿವಾರ ಹಮ್ಮಿಕೊಂಡಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ನಾಗಾವಿ 8 ನೇ ಶತಮಾನದಲ್ಲಿಯೇ ಬಹು ದೊಡ್ಡ ಶಿಕ್ಷಣ ಕೇಂದ್ರವಾಗಿತ್ತು ಎನ್ನುವುದೇ ಹೆಮ್ಮೆ ಪಡುವಂತಹ ವಿಷಯ ಎಂದರು.

ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ. ಶಿವಶರಣಪ್ಪ ಬಿರಾದಾರ ನಾಗಾವಿ ಇತಿಹಾಸ ಪರಿಚಯ ಕುರಿತು ವಿಶೇಷ ಉಪನ್ಯಾಸ ನೀಡಿದ ಅವರು, ನಾಗಾವಿ ಧಾರ್ಮಿಕ ಜೊತೆಗೆ ಶೈಕ್ಷಣಿಕ ಕೇಂದ್ರವಾಗಿತ್ತು. ಭಾರತದಲ್ಲಿಯೇ ಅತ್ಯಂತ ಪ್ರಸಿದ್ಧವಾದ ವಿದ್ಯಾಕೇಂದ್ರ (ಘಟಿಕಾಸ್ಥಾನ) ನಾಗಾವಿಯಲ್ಲಿದೆ. ಇಲ್ಲಿ ತ್ರೈಪುರೇಶ್ವರ, ಮಧುಸೂದನ, ರಾಮೇಶ್ವರ ಈ ಮೂರು ಶೈಕ್ಷಣಿಕ ಸಂಕಿರಣಗಳಿದ್ದವು ಎಂದರು. ಕರ್ನಾಟಕ ಎನ್ನುವ ಪದ ಮೊಟ್ಟ ಮೊದಲು ನಾಗಾವಿ ಶಾಸನದಲ್ಲಿ ಉಲ್ಲೇಖವಾಗಿದೆ ಎಂದು ಹೇಳಿದರು.

ದಕ್ಷಿಣ ಭಾರತದ ನಳಂದ ವಿಶ್ವವಿದ್ಯಾಲಯ ಎಂದು ನಾಗಾವಿ ವಿಶ್ವವಿದ್ಯಾಲಯಕ್ಕೆ ಕರೆಯಲಾಗಿದೆ. ಶಿಕ್ಷಣ, ಸಾಹಿತ್ಯ ಮತ್ತು ವಿದ್ವತ್ತಿನ ಪ್ರತಿರೂಪವಾದ ನಾಗಾವಿಯಲ್ಲಿಂದು ಮೂಢನಂಬಿಕೆಗಳು ಆಚರಣೆಯಲ್ಲಿ ಇರುವುದು ವಿಷಾದನೀಯ ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಶಶಿಧರ ಬಿರಾದಾರ ಮಾತನಾಡಿ, ನಾಗಾವಿ ವಿಶ್ವವಿದ್ಯಾಲಯ ಇರುವ ಪರಿಸರದಲ್ಲಿ ನೀವು ವಿದ್ಯಾಬ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳು ನೀವೇ ಪುಣ್ಯವಂತರು ಎಂದರು.. ಮೊದಲು ನಾವಿರುವ ಪ್ರದೇಶದ ಇತಿಹಾಸ ತಿಳಿದುಕೊಳ್ಳಬೇಕು ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳಲ್ಲಿ ಐತಿಹಾಸಿಕ ಪ್ರಜ್ಞೆ ಮೂಡಿಸುತ್ತಿರುವ ನಾಗಾವಿ ಸಾಹಿತ್ಯ ಸಾಂಸ್ಕೃತಿಕ ಪರಿಷತ್ ಕಾರ್ಯ ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕಂಬಳೇಶ್ವರ ಮಠದ ಶ್ರೀ ಸೋಮಶೇಖರ ಶಿವಾಚಾರ್ಯರು ಸಾನ್ನಿಧ್ಯ ವಹಿಸಿ ಮಾತನಾಡಿದ ಅವರು, ನಾಗಾವಿಗೆ ಬಹು ದೊಡ್ಡ ಇತಿಹಾಸವಿದೆ ಆದರೆ ಅದನ್ನು ಸಂರಕ್ಷಿಸದೆ ಇರುವುದರಿಂದ ಇಂದು ನಶಿಸುವ ಹಂತದಲ್ಲಿದೆ ಹೀಗಾಗಿ ನಮ್ಮ ಇತಿಹಾಸವನ್ನು ರಕ್ಷಿಸುವ ಕೆಲಸ ಮಾಡಬೇಕಿದೆ. ಬೇರೆ ಪ್ರದೇಶದ ಜನರು ನಮ್ಮ ನಾಗಾವಿ ನಾಡಿಗೆ ಬರುವ ಹಾಗೆ ಮಾಡಬೇಕು ಎಂದರು. ವಿದ್ಯಾರ್ಥಿಗಳನ್ನು ಒಮ್ಮೆ ಸುತ್ತಾಡಿಸಿಕೊಂಡು ನಾಗಾವಿ ಇತಿಹಾಸವನ್ನು ಪರಿಚಯಿಸುವ ಕೆಲಸ ಎಲ್ಲಾ ಶಿಕ್ಷಣ ಸಂಸ್ಥೆಯವರು ಮಾಡಬೇಕು ಎಂದು ಕಿವಿಮಾತು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ನಾಗಾವಿ ಸಾಹಿತ್ಯ ಸಾಂಸ್ಕೃತಿಕ ಪರಿಷತ್ ಅಧ್ಯಕ್ಷ ಕಾಶಿನಾಥ ಗುತ್ತೇದಾರ, ಮುಖ್ಯ ಅತಿಥಿಗಳಾಗಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರಾಂಶುಪಾಲ ಡಾ ಶರಣಪ್ಪ ಕವಡೆ ಮಾತನಾಡಿದರು.

ಬ್ಯಾಡ್ಮಿಂಟನ್ ಅಸೋಶಿಯೇಷನ್ ಅಧ್ಯಕ್ಷ ಸಾಯಬಣ್ಣ ಕಾಶಿ, ಬಂಜಾರಾ ಸಮಾಜ ತಾಲೂಕು ಅಧ್ಯಕ್ಷ ಭೀಮಸಿಂಗ್ ಚವ್ಹಾಣ, ಆರ್ಯ ಈಡಿಗ ಸಮಾಜದ ಯುವ ಅಧ್ಯಕ್ಷ ಪಂಕಜಗೌಡ್, ಪದಾಧಿಕಾರಿಗಳಾದ ನಟರಾಜ್ ಶಿಲ್ಪಿ, ಶಾಂತಕುಮಾರ್ ಮಳಖೇಡ, ಜಗದೇವ ಕುಂಬಾರ, ಉಮೇಶಬಾಬು ದಿಗ್ಗಾಂವ, ದೇವಿದಾಸ ಚವ್ಹಾಣ, ಚಿದಾನಂದ, ವಿನಯಕುಮಾರ್ ಶಿಲ್ಪಿ ಸೇರಿದಂತೆ ಇತರರು ಇದ್ದರು.

ಪ್ರದಾನ ಕಾರ್ಯದರ್ಶಿ ವೀರಸಂಗಪ್ಪ ಸುಲೇಗಾಂವ ಸ್ವಾಗತಿಸಿದರು, ನರಸಪ್ಪ ಚಿನ್ನಾಕಟ್ಟಿ ನಿರೂಪಿಸಿದರು, ದೇವಪ್ಪ ನಂದೂರಕರ್ ವಂದಿಸಿದರು.


# ನನ್ನ ವೃತ್ತಿ ನನ್ನ ಆಯ್ಕೆ: ನಾಗರಾಜ್ ಕಲಬುರ್ಗಿ

ಮಲ್ಲಮ್ಮ ನುಡಿ ವಾರ್ತೆ

ಜೇವರ್ಗಿ:ಡಿ.22: ನನ್ನ ವೃತ್ತಿ ನನ್ನ ಆಯ್ಕೆ ಎಂಬ ವಿಷಯ ಪ್ರತಿಯೊಬ್ಬ ವಿದ್ಯಾರ್ಥಿ ವಿದ್ಯಾರ್ಥಿಯರು ಗುರಿ ಇಟ್ಟುಕೊಂಡು ಆ ನಿಟ್ಟಿನಲ್ಲಿ ಕಠಿಣ ವಿದ್ಯಾಭ್ಯಾಸ ಮಾಡಿದಾಗ ಮಾತ್ರ ಒಂದು ಉತ್ತಮ ಒಳ್ಳೆಯ ವೃತ್ತಿ ಆಯ್ಕೆ ಆಗುತ್ತದೆ ಎಂದು ಉಪನ್ಯಾಸಕ ನಾಗರಾಜ್ ಕಲಬುರ್ಗಿ ಹೇಳಿದರು ಸರಕಾರಿ ಬಾಲಕಿಯರ ಪ್ರೌಢಶಾಲೆಯ ದೇವದುರ್ಗದಲ್ಲಿ ಹಮ್ಮಿಕೊಂಡ ನನ್ನ ವೃತ್ತಿ ನನ್ನ ಆಯ್ಕೆ ಎಂಬ ವಿಷಯದ ಬಗ್ಗೆ ಸವಿಸ್ತಾರವಾಗಿ ಮಾತನಾಡಿದರು ಅಧ್ಯಕ್ಷತೆ ಮುಖ್ಯ ಗುರುಗಳಾದ ಮಮತಾ ವಹಿಸಿದರು ಅತಿಥಿಗಳಾಗಿ ನೋಡಲ್ ಅಧಿಕಾರಿಗಳಾದ ರಾಜೇಂದ್ರ ರಾಯಚುರ ಮೋನಪ್ಪ ಹೊಸ್ಮನಿ ಕನ್ನೆ ಕೊಳ್ಳೂರ ವಹಿಸಿದರು ಹಣಮಂತ ಸ್ವಾಗತ ನಿರೋಪಿಸಿದರು ಈ ಸಂದರ್ಭದಲ್ಲಿ ವಿದ್ಯಾರ್ಥಿ ವಿದ್ಯಾರ್ಥಿನಿಯರು ಭಾಗವಹಿಸಿದರು

ಸೋನಾಳದಲ್ಲಿ ಲಿಂ. ನಿರಂಜನ ಮಹಾಸ್ವಾಮಿಗಳ 15 ಪುಣ್ಯ ಸ್ಮರಣೋತ್ಸವ! ಭಾತಂಬ್ರ ಶ್ರೀಗಳ ಅಭಿಮತ!

# ನಿರಂಜನ ಶ್ರೀಗಳು ಮನೆ ಮನೆಗೆ ಹೋಗಿ ಭಕ್ತರ ನೋವಿಗೆ ನೇರವಾದವರು



(ಪರಮೇಶ ರಾಂಪುರೆ)
ಮಲ್ಲಮ್ಮ ನುಡಿ ವಾರ್ತೆ
ಕಮಲನಗರ:

ನಿರಂಜನ ಶ್ರೀಗಳು ಮನೆ ಮನೆಗೆ ಹೋಗಿ ಭಕ್ತರ ನೋವಿಗೆ ನೇರವಾದವರು, ತಮ್ಮ ಆಯುರ್ವೇದ ಔಷದಿ ಮೂಲಕ ಭಕ್ತರ ದೈಹಿಕ ಕಾಯಿಲೆ ನಿವಾರಣೆ ಮಾಡುತ್ತಿದ್ದರು.

ಆದರೆ ಜೊತೆಯಲ್ಲಿ ಪ್ರವಚನ ಮೂಲಕ ಮನಸಿನ ಕಾಯಿಲೆ ಮದ್ದು ಕುಡುತ್ತಿದ್ದರು ಎಂದು ಭಾತಂಬ್ರ ಶ್ರೀ ಜಗದ್ಗುರು ಶಿವಯೋಗೀಶ್ವರರಾಜಯೋಗೀಂದ್ರ ಮಹಾಸ್ವಾಮಿಗಳು ನುಡಿದರು.

ಕಮಲನಗರ ತಾಲೂಕಿನ ಸೋನಾಳ ಗ್ರಾಮದ ವಿರಕ್ತಮಠ ಶಾಲೆಯ ಆವರಣದಲ್ಲಿ ಶನಿವಾರ ಲಿಂ.ನಿರಂಜನ ಮಹಾಸ್ವಾಮಿಗಳ 15ನೇ ಪುಣ್ಯ ಸ್ಮರಣೋತ್ಸವ ಮತ್ತು ನೂತನ ರಥ ಉತ್ಸವ ಕಾರ್ಯಕ್ರಮದಲ್ಲಿ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿದರು.

ಮನೆ ದೊಡ್ಡದಾಗಿವೆ ಅದ್ದರೆ ಮನಸು ಸಣ್ಣದಾಗುತ್ತಿವೆ. ಮಕ್ಕಳಿಗೆ ಒಳ್ಳೆಯ ಸಂಸ್ಕಾರ ನೀಡಬೇಕೆ ಎಂದು ತಿಳಿಸಿದರು.

ಶರಣರು ಬಸವ ತತ್ವ, ಚಿಂತನೆ, ಅವರ ಆದರ್ಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಹೇಳಿದರು.

ಗ್ರಾಮೀಣ ಭಾಗದಲ್ಲಿ ನಿರಂತರವಾಗಿ ಇಂತಹ ಧಾರ್ಮಿಕ ಕಾರ್ಯಕ್ರಮವನ್ನು ಮೇಲಿಂದ ಮೇಲೆ ನಡೆಯುತ್ತಿರಬೇಕು. ಇಂದಿನ ಒತ್ತಡದ ಜೀವನದಲ್ಲಿ ಧಾರ್ಮಿಕ ಚಿಂತನೆ ಕಡಿಮೆಯಾಗುತ್ತಿದೆ. ಆದ-ರಿಂದ ಗ್ರಾಮೀಣ ಪ್ರದೇಶದಲ್ಲಿ ಹಲವಾರು ಧಾರ್ಮಿಕ ಕಾರ್ಯಕ್ರಮ ಹಮ್ಮಿಕೊಳ್ಳಬೇಕು ಎಂದು ಮರುಳಸಿದ್ಧ ಮಹಾಸ್ವಾಮಿಗಳು ನೇತೃತ್ವವಹಿಸಿ ಮಾತನಾಡಿದರು.

> :ನಿರಂಜನ ಮಹಾಸ್ವಾಮಿಗಳು ಸಮಾಜಿಕ, ಧಾರ್ಮಿಕ, ಶೈಕ್ಷಣಿಕ, ಆಯುರ್ವೇದಕ್ಕ ಕ್ಷೇತ್ರದಲ್ಲಿ ಪಂಡಿತ ಪಡೆದು ಭಕ್ತರನ್ನು ಉದ್ಧಾರ ಮಾಡಿದರು. ಸಣ್ಣ ಸೋನಾಳ ಗ್ರಾಮದಿಂದ ಬಂದು ಇಂದು ಇಡಿ ರಾಜ್ಯ ತನ್ನ ಕಡೆ ತಿರುಗಿ ನೋಡುವಂತೆ ಮಾಡಿದ ಪವಾಡ ಪುರುಷರು. ಶ್ರೀಗಳ ಜೀವನ ನಮ್ಮೆಲ್ಲರಿಗೂ ಆದರ್ಶ.
>
> **-ಚನ್ನವೀರ ಮಹಾಸ್ವಾಮಿಗಳು,**
> **ಪೀಠಾಧಿಪತಿ ವೀರಕ್ತಮಠ ಹೂವಿನಶಿಗ್ಗಿ ಮತ್ತು ಸೋನಾಳ.**

ಕಾರ್ಯಕ್ರಮದಲ್ಲಿ ಶಾಂತವೀರ ಶಿವಾಚಾರ್ಯರುಗಡಿಗೌಡಗಾಂವ,ಶಿವಬಸವ ಮಹಾಸ್ವಾಮಿಗಳು ಸೇರಿದಂತೆ ಸ್ವಾಮೀಜಿಗಳು ಶ್ರೀ ಗಳ ಕುರಿತು ಮಾತನಾಡಿದರು.


ಅಧ್ಯಕ್ಷತೆ ವಹಿಸಿ ಶಿವಾನಂದ ಮಹಾಸ್ವಾಮಿಗಳು ಮಾತನಾಡಿದರು,

ಶಿವಯೋಗಿಹಾನಗಲಬಂದಿರದಲ್ಲಿ ಪೂಜ್ಯಶ್ರೀ ನಿರಂಜನ ಸ್ವಾಮಿಗಳು ಧಾರ್ಮಿಕ ಜ್ಞಾನವನ್ನು ಪಡೆದು ಸಮಾಜದ ಏಳಿಗೆ ದುಡಿದ್ದಿದ್ದಾರೆ. ಅವರಂತೆ ಸಾವಿರಾರು ಸ್ವಾಮೀಜಿಗಳು ಶಿಯೋಗ ಕಲಿತು ಸಮಾಜದ ಸ್ವಸ್ತಾ ಕಾಪಾಡುವಲ್ಲಿ ಶ್ರಮಿಸುತ್ತಿದ್ದಾರೆ ಎಂದು ಹೇಳಿದರು.

ಗ್ರಾಮೀಣ ಭಾಗದಲ್ಲಿ ರಾಜಕೀಯ ನಾಯಕರು ತಮ್ಮ ಸ್ವಾರ್ಥ ಸಾಧನೆಗಾಗಿ ಜನರಲ್ಲಿ ಒಡಕು ಮೂಡುವ ಕೆಲಸವನ್ನು ಮಾಡುತ್ತಾರೆ. ಆದರೆ ಗ್ರಾಮೀಣ ಭಾಗದ ಜನರು ರಾಜಕೀಯ ವಿಷಯವನ್ನು ಚುನಾವಣೆ ಸಂದರ್ಭದಲ್ಲಿ ಮಾತ್ರ ವಿಚಾರ ಮಾಡಬೇಕು. ಅದನ್ನು ಗ್ರಾಮದಲ್ಲಿ ಚಿಂತನೆ ಮಾಡಬಾರದು. ಗ್ರಾಮಗಳು ಅಭಿವೃದ್ಧಿಯಾಗಲು ಗ್ರಾಮೀಣ ಭಾಗದಲ್ಲಿ ಒಗ್ಗಟ್ಟು ಹಾಗೂ ಹೊಂದಾಣಿಕೆ ಅಗತ್ಯವಾಗಿದೆ. ಗ್ರಾಮಗಳಲ್ಲಿ ಎಲ್ಲರೂ ಒಂದುಗೂಡಿ ಗ್ರಾಮಗಳ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ನುಡಿದರು.

ಕಾರ್ಯಕ್ರಮದಲ್ಲಿ ಸೋನಾಳ ಮತ್ತು ಸುತ್ತಮುತ್ತಲಿನ ಹಳ್ಳಿಗಳಿಂದ ಬಂದಿದ್ದರು. ಹಾವೇರಿ ಜಿಲ್ಲೆ, ಅಂದ್ರ, ಮಹಾರಾಷ್ಟದಿಂದ ಭಕ್ತರು ಸಾಗರದಂತೆ ಬಂದಿದ್ದರು. ಮಹಾ ಪ್ರಸಾದ ಸೇವೆ ಲೋಕೇಶ ಧನರಾಜ ಹಣಮಶೆಟ್ಟಿ ಮು. ಸೋನಾಳ ಇವರು ಮಾಡಿದರು.

# ಸಮ- ಸಮಾಜ ನಿರ್ಮಾಣಕ್ಕಾಗಿ ಸಂಘ ಸಂಸ್ಥೆಗಳ ಪಾತ್ರ ಮುಖ್ಯ



(ಮಲ್ಲಿಕಾರ್ಜುನ್ ಮಳಿಕೇರಿ)
ಮಲ್ಲಮ್ಮ ನುಡಿ ವಾರ್ತೆ

ಶಹಾಪುರ-ನಗರದ ಬಸವ ಬಯಲು ಮಂಟಪ ಆವರಣದಲ್ಲಿ ನಡೆದ ಶ್ರೀ ನಾದಬ್ರಹ್ಮ ಸಂಗೀತ ಸಾಂಸ್ಕೃತಿಕ ಸಂಸ್ಥೆ(ರಿ) ವತಿಯಿಂದ ಭಾವೈಕ್ಯಸಂಗಮ ಹಾಗೂ ಮಾತೃಶ್ರೀ ಪ್ರಶಸ್ತಿ ಪ್ರಧಾನ ಕಾರ್ಯಕ್ರಮದ ದಿವ್ಯ ಸಂದೇಶವನ್ನು ಪೂಜ್ಯಶ್ರೀ ಸಿದ್ದಲಿಂಗ ದೇವರು ತಾಳಿಕೋಟಿ ರವರು ಇಂದಿನ ದಿನಮಾನಗಳಲ್ಲಿ ವ್ಯಕ್ತಿಗಳ ಸ್ವಾರ್ಥಕ್ಕಾಗಿ ಸಮಾಜ, ಧರ್ಮ, ಜಾತಿ, ಜಾತಿಗಳ ಮಧ್ಯ ಗೊಂದಲ, ಭಿನ್ನಮತ, ಮೂಡಿಸುವಂಥ ಸಂದರ್ಭದಲ್ಲಿ ಸಂಘ ಸಂಸ್ಥೆಗಳು ಸಮ ಸಮಾಜದ ನಿರ್ಮಾಣಕ್ಕಾಗಿ ಭಾವೈಕ್ಯ ಸಂಗಮ ವೇದಿಕೆಯಲ್ಲಿ ಹಿಂದೂ ,ಮುಸ್ಲಿಂ ,ಕ್ರೈಸ್ತ, ಬೌದ್ಧ, ಧರ್ಮದ ಗುರುಗಳನ್ನು ಒಂದೇ ವೇದಿಕೆ ಅಡಿಯಲ್ಲಿ ಸೇರಿಸಿ ಕಲ್ಯಾಣ ನಾಡಿನ ಭಾತೃತ್ವ , ಮಾತೃತ್ವ, ಭಾವನೆಗಳನ್ನು ಬಿತ್ತರಿಸುತ್ತಿರುವ ವೇದಿಕೆ ಇದಾಗಿದೆ ಎಂದರು. ಎಲ್ಲರೂ ಬದುಕು ಇರುವತನಕ ಧಾನ, ಧರ್ವ, ಪರೋಪಕಾರ, ಒಬ್ಬರನ್ನೊಬ್ಬರು ಪ್ರೀತಿಸುವುದು, ಗೌರವಿಸುವುದು, ಮಾನವ ಧರ್ಮ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಮುಸ್ಲಿಂ ಧರ್ಮ ಗುರುಗಳಾದ, ಸಗರ ಮುತ್ಯಾ ಹಜರತ್ ಸೈಯದ್ ಮೊಹಮ್ಮದ್ ಮುಜೀಬುದ್ದೀನ್ ಸಾಬ್ ಮಾತನಾಡಿ ಬೆರಳೆಣಿಕೆಯಷ್ಟು ಜನರು ಭಾರತದ ಸಾಮರಸ್ಯದ ಬದುಕನ್ನು ಹಾಳು ಮಾಡುತ್ತಿದ್ದಾರೆ ದೇವನೊಬ್ಬ ನಾಮ ಹಲವು ಎಂಬ ಸಂದೇಶವನ್ನು ವಿಶ್ವಗುರು ಬಸವಣ್ಣನವರು ಸಾರಿರುವುದು ನಮಗೆಲ್ಲ ತಿಳಿದಿರುವ ವಿಷಯ ಗಾಂಧೀಜಿಯ ಕನಸು ಹಿಂದೂ ಮುಸ್ಲಿಂ ಕ್ರೈಸ್ತರೆಲ್ಲರಿಗೂ ಒಂದೇ ಭಾರತ ಮಂದಿರ ಎನ್ನುವ ಹಾಗೆ ನಾವೆಲ್ಲರೂ ಭಾರತಾಂಬೆಯ ಮಕ್ಕಳು ಎಂದು ತಿಳಿಸಿದರು. ಕ್ರೈಸ್ತ ಧರ್ಮದ ಗುರುಗಳು ಫಾದರ್ ಸ್ಟೀವನ್ ಪ್ರಕಾಶ್ ವೇಗಿಸ್ ಅವರು ಮಾತನಾಡಿ ಶಹಾಪೂರ ಸಗರನಾಡಿನ ಸಂತರು, ಶರಣರ, ಮಹಾತ್ಮರ, ಬೀಡು ಫಕೀರೇಶ್ವರ ಮಠವು ಭಾವೈಕ್ಯ ಸಂಬಂಧವನ್ನು ಹೊಂದಿರುವ ಶ್ರೀಮಠ ವಾಗಿರುತ್ತದೆ ಎಂದು ತಿಳಿಸಿದರು. ಕಾರ್ಯಕ್ರಮದ ಸಾಹಿತ್ಯ ಉಳಿಸಿರುವ ಫಕೀರೇಶ್ವರ ಮಠದ ಪೂಜ್ಯ ಶ್ರೀ ಗುರುಪಾದ ಮಹಾಸ್ವಾಮಿಗಳು ಮಾತನಾಡಿ ಭಾವೈಕ್ಯ ಸಂಗಮ ಉತ್ತಮವಾದ ಕಾರ್ಯಕ್ರಮವನ್ನು ಆಯೋಜಿಸುವುದರ ಮುಖಾಂತರ ಸಮಾನತೆಯ ಮಂತ್ರವನ್ನು ಶ್ರೀ ನಾದಬ್ರಹ್ಮ ಸಂಗೀತ ಸಾಂಸ್ಕೃತಿಕ ಸಂಸ್ಥೆ ಕಾರ್ಯ ಕಾರ್ಯ ಶ್ಲಾಘನೀಯ ಎಂದರು. ಈ ಸಂದರ್ಭದಲ್ಲಿ ಮಾತೃಶ್ರೀ ಪ್ರಶಸ್ತಿ ಪ್ರಧಾನ ಮಾಡುವುದರ ಮುಖಾಂತರ ತಾಯಿಯೇ ದೇವರು ಎಂಬ ಹೆಗ್ಗಳಿಕೆಯನ್ನು ಗುರುತಿಸುವುದರ ಮುಖಾಂತರ ಹೆತ್ತ ತಾಯಿಗಿಂತ ,ಸಾಕು ತಾಯಿ, ಶ್ರೇಷ್ಠಳು ಎಂದು ಗುರುತಿಸಿ ಶ್ರೀಮತಿ ಸಿದ್ದಲಿಂಗಮ್ಮ ದಿ ಅಯ್ಯಣ್ಣ ಬಳಬಟ್ಟಿ ಶಹಾಪುರ ರವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು ಕಾರ್ಯಕ್ರಮದ ಉದ್ಘಾಟಕರಾಗಿ ವಿಶ್ವನಾಥರಡ್ಡಿ ದರ್ಶನಾಪುರ, ಅಧ್ಯಕ್ಷತೆ ಭೀಮನಗೌಡ ಬಿ.ಬಿರದಾರ ,ನೇತೃತ್ವ ಮಲ್ಲಯ್ಯ ಸ್ವಾಮಿ ಇಟಗಿ ಸಂಸ್ಥೆಯ ಅಧ್ಯಕ್ಷರು, ಸಂಗೀತ ಸೇವೆ ಚಂದ್ರಶೇಖರ ಗೋಗಿ, ವಾದ್ಯ ಸಹಕಾರ ಮಲ್ಲಯ್ಯ ಹಿರೇಮಠ, ಭರತನಾಟ್ಯ ನಿವೇದಿತಾ ಎಮ್. ನಾಯಕ, ನಿರೂಪಣೆ ವೀರೇಶ ಉಳ್ಳಿ ಶಹಾಪುರ ಮಾಡಿದರು ಸಂಗಮೇಶ ಅನವಾರ ಸ್ವಾಗತಿಸಿ ವಂದಿಸಿದರು. ಈ ಸಂದರ್ಭದಲ್ಲಿ ಸರ್ವ, ಧರ್ಮಗಳ ,ಸರ್ವಜನರು ,ನೂರಾರು ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಿದರು.

# ಬಿ ಶ್ಯಾಮಸುಂದರ ದಕ್ಷಿಣ ಭಾರತದ ಅಂಬೇಡ್ಕರ್ : ಡಾ ಅಂಬಾರಾಯ ಅಷ್ಟಗಿ ಬಣ್ಣನೆ



ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ: ಸಮಾಜ ಸುಧಾರಕ ಬಿ ಶ್ಯಾಮ ಸುಂದರ ಅವರು ಒಬ್ಬ ಕ್ರಾಂತಿಕಾರಿ ಬದಲಾವಣೆಯ ಹೋರಾಟಗಾರರಾಗಿ, ಶೋಷಿತ ವರ್ಗಗಳ ಕಲ್ಯಾಣಕ್ಕೆ ಹೋರಾಟ ನಡೆಸಿದ ದಕ್ಷಿಣ ಭಾರತದ ಅಂಬೇಡ್ಕರ್ ಎಂದು ಕಲಬುರಗಿ ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷ ಹಾಗೂ ಬಿಜೆಪಿ ಎಸ್ಸಿ ಮೋರ್ಚಾ ರಾಜ್ಯ ಉಪಾಧ್ಯಕ್ಷ ಡಾ ಅಂಬಾರಾಯ ಅಷ್ಟಗಿ ಅಭಿಪ್ರಾಯಪಟ್ಟರು.

ಕರ್ನಾಟಕ ಸಮತಾ ಸೈನಿಕ ದಳದ ಜಿಲ್ಲಾ ಘಟಕದ ವತಿಯಿಂದ ನಗರದ ಕಲಾ ಮಂಡಳ ಸಭಾಂಗಣದಲ್ಲಿ ಆಯೋಜಿಸಿದ್ದ, ಸಮಾಜ ಸುಧಾರಕ ಹಾಗೂ ಮಾಜಿ ಉಪಸಭಾಪತಿ ಬಿ ಶ್ಯಾಮ ಸುಂದರ ಅವರ 116 ಜಯಂತೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಭಾರತದ ಇತಿಹಾಸವನ್ನು ಅವಲೋಕಿಸಿದಾಗ, ಬಿಶ್ಯಾಮಸುಂದರ ಅವರು ಹೈದರಾಬಾದ್ ನಿಜಾಮ್ ಸರ್ಕಾರದಲ್ಲಿ ಮಂತ್ರಿಯಾಗಿ ಸಾರ್ವಜನಿಕರಿಗೆ ಮತ್ತು ವಿಶೇಷವಾಗಿ ತುಳಿತಕ್ಕೊಳಗಾದ ಸಮುದಾಯಗಳಿಗೆ ಮಾಡಿರುವ ಕಾರ್ಯ ಶ್ಲಾಘನೀಯವಾದದ್ದು ಎಂದು ಅವರು ಬಣ್ಣಿಸಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಪ್ರೊ ಅಲ್ಲಾವುದ್ದೀನ್ ಸಾಗರ, ದಲಿತ -ಮುಸ್ಲಿಂ ಸಮುದಾಯಗಳನ್ನು ಒಗ್ಗೂಡಿಸಿ ಹೋರಾಟ ನಡೆಸಿದ ಅಪೂರ್ವ ಹೋರಾಟದ ಚಿಲುಮೆ ಬಿ ಶ್ಯಾಮ ಸುಂದರ ಆಗಿದ್ದರು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ, ಹಿರಿಯ ಪತ್ರಕರ್ತ ಶಿವರಾಯ ದೊಡ್ಡಮನಿ ಡಾ.ದೇವೇಂದ್ರಪ್ಪ ಕಮಲಾಪುರ, ಸುನೀಲ್ ಕುಮಾರ್ ವಂಟಿ, ಮಾತನಾಡಿದರು.

ಶಿವಶಂಕರಪ್ಪ ಪಟ್ಟಣಕರ, ಲಕ್ಷ್ಮಿಕಾಂತಗಾರೆ ವೇದಿಕೆಯಲ್ಲಿದ್ದರು.

ಕರ್ನಾಟಕ ಸಮತಾ ಸೈನಿಕ ದಳದ ವಿಭಾಗೀಯ ಅಧ್ಯಕ್ಷ ಸಂಜೀವಕುಮಾರ ಮಾಲೆ ಪ್ರಾಸ್ತಾವಿಕವಾಗಿ ಮಾತನಾಡಿ, ಬಿ ಶ್ಯಾಮಸುಂದರ ಅವರ ಕೊಡುಗೆಗಳ ಕುರಿತು ಹೆಚ್ಚಿನ ಮಾಹಿತಿಯ ಅವಶ್ಯಕತೆ ಇದೆ ಎಂದು ಹೇಳಿದರು.

ಬೀದರಿನ ಪೂಜ್ಯ ಭಂತೆ ಧಮ್ಮದೀಪ ಅವರು ಸಾನಿಧ್ಯ ವಹಿಸಿದ್ದರು, ಕಸಸೈ ದಳದ ಜಿಲ್ಲಾಧ್ಯಕ್ಷ ಈರಣ್ಣ ಜಾನೆ ಅಧ್ಯಕ್ಷತೆ ವಹಿಸಿದ್ದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅಪ್ಪಾರಾವ ಭಾವಿಮನಿ ನಿರೂಪಿಸಿದರು, ಮಹಾದೇವ ನಾಟೀಕರ್ ವಂದಿಸಿದರು, ಮಲ್ಲಿಕಾರ್ಜುನ ಉದಯಕರ್ ಸ್ವಾಗತಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ಸಮತಾ ಸೈನಿಕ ದಳದ ಪದಾಧಿಕಾರಿಗಳಾದ, ವಿಜಯಕುಮಾರ್ ಉದ್ದ ಶಿವಲಿಂಗಮ್ಮ ಸಾವಳಗಿ, ಮಹಾದೇವಿ ಬಾಪುನಗರ್, ಯಶೋಧ ಕುಸನೂರ್ ಸಿದ್ದಾರ್ಥ ಕಣಮಸ್, ಖತಲಪ್ಪ ಕಟ್ಟಿಮನಿ, ಮಲ್ಲಮ್ಮ ಜಗತಿ , ಶಿವಮೂರ್ತಿ ಬಲಿಚಕ್ರವರ್ತಿ, ಜ್ಞಾನಪ್ರಕಾಶ ಮೂಲಭಾರತಿ, ಅಮೃತರಾವ್ ನಾಯ್ಕೋಡಿ, ಮಲ್ಲು ನಂದೂರ, ಕಪೀಲ ಜಾನೆ, ಸೂರ್ಯಕಾಂತ ಅಂಬಲಗಿ, ಮಾರುತಿ ಲೇಂಗಟಿ, ಜಯಾನಂದ ಕೊಳ್ಳುರ, ಭೀಮರಾವ ಕೇಲಕೇರಿ , ವಿಜಯಕುಮಾರ ಸಾವಳಗಿ, ಭಾರತಿಬಾಯಿ ಕಾಂಬಳೆ, ಕಾವೇರಿ ಗೊರಂಪಳ್ಳಿ, ರೇವಣಸಿದ್ದಪ್ಪ ಅಲಂಕಾರ, ಶಿವಶರಣಪ್ಪ ಬೆಳಮಗಿ, ಪದ್ಮಾವತಿ ಅಟ್ಟೂರಕರ, ಮಹಾದೇವಿ ರಾಜಾಪುರ, ಶ್ಯಾಮ ತಾರಫೈಲ ಸೇರಿದಂತೆ ಅನೇಕರು ಉಪಸ್ಥಿತರಿದ್ದರು

ಗವಿಮಠ ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಶ್ರೀಗಳ ಕ್ಲಾಸ್ ಮೆಟ್ಸ್ ನವರಿಂದ ಪ್ರಸಾದ ವ್ಯವಸ್ಥೆ

# ವೃದ್ಧಾಶ್ರಮದಲ್ಲಿಯೂ ವೃದ್ಧರಿಗೂ ಊಟದ ವ್ಯವಸ್ಥೆ



( ವೀರಯ್ಯ ವಿ ಹಿರೇಮಠ)
ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ: ಶ್ರೀ ಗವಿಸಿದ್ದೇಶ್ವರ ಮಹಾವಿದ್ಯಾಲಯದ 1997-98 ನೇ ಸಾಲಿನ ಶ್ರೀ ಗವಿಸಿದ್ದೇಶ್ವರ ಮಹಾಸ್ವಾಮೀಜಿಗಳ ಕ್ಲಾಸ್ ಮೆಟ್ಸ್ ನವರು ಶ್ರೀ ಗವಿಸಿದ್ದೇಶ್ವರ ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಭಾನುವಾರ ಒಂದು ದಿನದ ಪ್ರಸಾದ ವ್ಯವಸ್ಥೆಯನ್ನು ಮಾಡಿಸಿದರು.

ಗೋಧಿ ಹುಗ್ಗಿ, ಅನ್ನಸಾಂಬರ್ ಹಾಗೂ ಫಲ್ಯವನ್ನು ಮಾಡಿ, ಮಕ್ಕಳಿಗೆ ಪ್ರಸಾದ ವ್ಯವಸ್ಥೆ ಮಾಡಲಾಯಿತು. ಖುದ್ದು ಶ್ರೀಗಳು ಸಹ ತಮ್ಮ ಪದವಿ ತರಗತಿ ವಿದ್ಯಾರ್ಥಿಗಳೊಂದಿಗೆ ಹಾಸ್ಟೆಲ್ ನಲ್ಲಿ ಕೆಲಕಾಲ ಕಳೆದರು. ಹಾಸ್ಟೆಲ್ ನಲ್ಲಿ ಅಳವಡಿಸಿರುವ ಹೊಸ ಹೊಸ ವ್ಯವಸ್ಥೆಗಳನ್ನು ತಮ್ಮ ಪದವಿ ತರಗತಿಯವರಿಗೆ ತಾವೇ ವಿವರಿಸಿದರು.

ವೃದ್ಧಾಶ್ರಮದಲ್ಲಿ ಊಟ- ಇದಕ್ಕೂ ಮೊದಲು ಸುರಭಿ ವೃದ್ಧಾಶ್ರಮದಲ್ಲಿ ಅಲ್ಲಿದ್ದ ವೃದ್ಧರಿಗೆ ಊಟದ ವ್ಯವಸ್ಥೆಯನ್ನು ಸಹ ಮಾಡಿದರು. ಅವರೊಂದಿಗೆ ಕೆಲಕಾಲ ಕಳೆದು, ಅವರ ಯೋಗಕ್ಷೇಮವನ್ನು ವಿಚಾರಿಸಿ, ಅವರೊಂದಿಗೆ ಕೆಲಕಾಲ ಕಳೆದರು.

ಶ್ರೀಶೈಲ ಅಳವಂಡಿ, ಕನಕಪ್ಪ, ಬಸವರಾಜ ಒಂಟಿ, ಶಂಭು ಪಾಟೀಲ್, ಗುರು ಈಳಿಗೇರ, ಸೋಮರಡ್ಡಿ ಅಳವಂಡಿ, ಗುರುಬಸವ ಹಿರೇಮಠ, ರಾಜಮಹ್ಮದ್, ಇಬ್ರಾಹಿಂ, ನಾಗನಗೌಡ, ಶರಣಪ್ಪ ಶೆಟ್ಟರ್, ಉಮೇಶ, ನಿಂಗರಾಜ, ಸಂಜೀವ ವಾಲ್ಮಿಕಿ, ಗಿರೀಜಾ ಪೊಲೀಸ್ ಪಾಟೀಲ್, ವೀಣಾ ದೇಶಪಾಂಡೆ, ಪ್ರಮೀಳಾ, ಸುಮಂಗಲಾ ಸಜ್ಜನ, ವಿಜಯಲಕ್ಷ್ಮಿ ಬಳ್ಳೊಳ್ಳಿ, ಗೀತಾ ಪತ್ತಾರ ಸೇರಿದಂತೆ ಸ್ನೇಹಬಳಗ ಇದ್ದರು.

22ಕೆಪಿಎಲ್22 ಕೊಪ್ಪಳ ನಗರದ ಶ್ರೀ ಗವಿಸಿದ್ದೇಶ್ವರ ಮಹಾವಿದ್ಯಾಲಯದ 1997-98 ನೇ ಸಾಲಿನ ಪದವಿ ತರಗತಿ ವಿದ್ಯಾರ್ಥಿಗಳು ಹಾಸ್ಟೆಲ್ ನಲ್ಲಿ ಪ್ರಸಾದ ವ್ಯವಸ್ಥೆಯನ್ನು ಮಾಡಿದರು. ಶ್ರೀ ಗವಿಸಿದ್ದೇಶ್ವರ ಮಹಾಸ್ವಾಮಿಜಿಗಳು ಸಹ ಉಪಸ್ಥಿತರಿದ್ದರು.

# ಕೆ ಕೆ ಆರ್ ಟಿಸಿ ನೌಕರರಿಂದ ಕಲಬುರಗಿ ಕೇಂದ್ರ ಬಸ್ ನಿಲ್ದಾಣದ ಹತ್ತಿರ ಪ್ರತಿಭಟನೆ



ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ : ಸಂಸತ್ತಿನಲ್ಲಿ ಸಂವಿಧಾನ ಶಿಲ್ಪಿ ಡಾ. ಬಿ ಆರ್ ಅಂಬೇಡ್ಕರ್ ಅವರ ಕುರಿಯತಾಗಿ ಹಗುರವಾಗಿ ಮಾತನಾಡಿದ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಕೂಡಲೆ ಮಂತ್ರಿ ಸ್ಥಾನದಿಂದ ವಜಾಗೊಳಿಸುವಂತೆ ಒತ್ತಾಯಿಸಿ ಕಲಬುರಗಿಯಲ್ಲಿ ಕೆ ಕೆ ಆರ್ ಟಿಸಿ ನೌಕರರಿಂದ ಕಲಬುರಗಿ ಕೇಂದ್ರ ಬಸ್ ನಿಲ್ದಾಣದ ಹತ್ತಿರ ಪ್ರತಿಭಟನೆನಡೆಸಿ ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿದರು.

ನಗರದ ಕೇಂದ್ರ ಬಸ್ ನಿಲ್ದಾಣದ ಎದುರು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ವಿಭಾಗ 1 ಮತ್ತು 2 ರ ಘಟಕದ ಕಲಬುರ್ಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ನೌಕರರ ಸಂಘಟನೆಗಳ ಜಂಟಿ ಸಮನ್ವಯ ಸಮಿತಿ ನೌಕರರ ಸಂಘದ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದ ನೌಕರರು, ಅಮಿಶಾ ವಿರುದ್ಧ ಘೋಷಣೆ ಕೂಗಿ ಆಕ್ರೋಶ ಹೊರಹಾಕಿದ್ರು. ಅಮಿತ್ ಶಾ ಅವರು ಈ ದೇಶ ಗೃಹ ಮಂತ್ರಿಯಾಗಿ ಅಧಿಕಾರ ಪಡೆಯಲು ಅಂಬೇಡ್ಕರ್ ಅವರು ಬರೆದ ಸಂವಿಧಾನವೇ ಕಾರಣ, ಅವರಿಂದ ಅಧಿಕಾರ ಪಡೆದು ಅವರ ಬಗ್ಗೆಯೇ ಹಗುರವಾಗಿ ಮಾತನಾಡುವುದು ಎಷ್ಟರ ಮಟ್ಟಿಗೆ ಸರಿ,.? ಕಾಂಗ್ರೆಸ್ ಅವರ ವಿರುದ್ಧ ರಾಜಕೀಯ ಮಾಡಲು ಈ ರೀತಿ ಹೇಳಿಕೆ ನೀಡಿದ್ದಾರೆ. ರಾಜಕೀಯ ಮಾಡಿ ಅದರೆ ಮಹಾನ್ ನಾಯಕರ ಹೆಸರು ದುರ್ಬಳಕೆ ಮಾಡಿಕೊಂಡರೆ ಈ ದೇಶದ ಜನ ಸುಮ್ಮನಿರುವುದಿಲ್ಲ ಎಂದು ಕಿಡಿಕಾರಿದರು.

ಈ ಸಂದರ್ಭದಲ್ಲಿ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ಕಲಬುರ್ಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ನೌಕರರ ಕ್ಷೇಮಾಭಿವೃದ್ಧಿ ಸಂಘದ ಮುಖಂಡರಾದ. ರಾಮಚಂದ್ರ ಬಿ ಹೈಯಾಳಕರ್. ಸಂಗಣ್ಣಾ ಶಾಸ್ತ್ರಿ. ಸುರೇಶ್ ಬಿಲ್ಲಾಡ್. ವಸಂತ ಗೋಡಬೋಲೆ. ಅಮೃತ ಪಿರಂಗಿ. ವಿಠ್ಠಲ ಭೀಮನ. ಶಿವಶರಣಪ್ಪ ಡಬರಾಬಾದಿ. ದಯಾನಂದ ಮಾಶ್ಯಾಳಕರ್. ಸುನೀಲ್ ರಾಜೆ. ನಾಗಭೂಷಣ. ಗುಂಡುರಾಯ್ ದೊಡ್ಡಮನಿ. ಭೀಮಣ್ಣ ದಂಡಗೂಲಕರ್. ಸೇರಿದಂತೆ ಅನೇಕ ಜನರು ಉಪಸ್ಥಿತರಿದ್ದರು.

# ಕ್ರಿಕೆಟ್ ಪಂದ್ಯಾವಳಿ: ಬಹುಮಾನ ವಿತರಣಾ ಸಮಾರಂಭ



ಮಲ್ಲಮ್ಮ ನುಡಿ ವಾರ್ತೆ

ತಾಳಿಕೋಟಿ: ತಾಲೂಕಿನ ತುಂಬಗಿ ಗ್ರಾಮದಲ್ಲಿ ಶ್ರೀ ಗ್ರಾಮದೇವತೆ ಜಾತ್ರಾಮಹೋತ್ಸವ ಅಂಗವಾಗಿ ಹಮ್ಮಿಕೊಂಡ ಗ್ರಾಮೀಣ ಮಟ್ಟದ ಟೆನ್ನಿಸ್ ಬಾಲ್ ಕ್ರಿಕೆಟ್ ಟೂರ್ನಮೆಂಟ್ ಅಂತಿಮ ಪಂದ್ಯದಲ್ಲಿ ವಿಜೇತ ತಂಡಗಳಿಗೆ ಟ್ರೋಫಿ ಹಾಗೂ ನಗದು ಬಹುಮಾನ ವಿತರಣಾ ಸಮಾರಂಭ ರವಿವಾರ ಜರುಗಿತು. ವಿಜೇತ ತಂಡಗಳಿಗೆ ಟ್ರೋಫಿ ಹಾಗೂ ನಗದು ಬಹುಮಾನ ವಿತರಿಸಿ ಸಮಾಜ ಸೇವಕ ಪ್ರವೀಣ ರೆಡ್ಡಿ ಅವರು ಮಾತನಾಡಿ ಈ ಟೂರ್ನಮೆಂಟ್ನಲ್ಲಿ ಟ್ರೋಫಿ ಗೆದ್ದ ಹಾಗೂ ರನ್ನರ್ಸ್ ತಂಡಗಳಿಗೆ ನಾನು ಅಭಿನಂದಿಸುತ್ತೇನೆ. ಕ್ರೀಡೆಯಲ್ಲಿ ಸೋಲು-ಗೆಲುವೇ ಮುಖ್ಯವಾಗಬಾರದು, ಭಾಗವಹಿಸುವಿಕೆ ಮುಖ್ಯವಾಗಬೇಕು. ಇಂದಿನ ಸೋಲು ನಾಳಿನ ಗೆಲುವಿಗೆ ಸೋಪಾನ ಒಳ್ಳೆಯ ಕ್ರೀಡಾ ಮನೋಭಾವದೊಂದಿಗೆ ಕ್ರೀಡೆ ಆಡಲು ಪ್ರಯತ್ನಿಸಿ ಎಂದರು. ಎರಡು ದಿನಗಳ ಈ ಟೂರ್ನಮೆಂಟ್ ನಲ್ಲಿ ಒಟ್ಟು ಎಂಟು ತಂಡುಗಳು ಭಾಗವಹಿಸಿದ್ದವು. ಅಂತಿಮ ಪಂದ್ಯದಲ್ಲಿ ಯಂಗ್ ಸ್ಟಾರ್ ಕ್ರಿಕೆಟ್ ಟೀಮ್ ಹಾಗೂ ಎಚ್ ಎಸ್ ಗೆಳೆಯರ ಬಳಗದ ತಂಡಗಳು ಮುಖಾಮುಖಿಯಾಗಿ ಯಂಗ್ ಸ್ಟಾರ್ ಕ್ರಿಕೆಟ್ ತಂಡವು ರೋಚಕ ಗೆಲುವು ಸಾಧಿಸಿತು, ಎಚ್ ಎಸ್ ಗೆಳೆಯರ ಬಳಗದ ಟೀಮ್ ರನ್ನರ್ಸ್ ಆಯಿತು. ತುಂಬಗಿಯ ಜೈ ಭೀಮ್ ಸಿಸಿ ತಂಡ ಟೂರ್ನಮೆಂಟಿನಲ್ಲಿ ಅತ್ಯುತ್ತಮ ಪ್ರದರ್ಶನವನ್ನು ನೀಡಿ ಮೂರನೇ ಸ್ಥಾನದ ಬಹುಮಾನವನ್ನು ಪಡೆದು-ಕೊಂಡಿತು. ವಿಜೇತ ತಂಡಕ್ಕೆ ಕಮಿಟಿ ವತಿಯಿಂದ ಪ್ರಥಮ ಬಹುಮಾನ,7001, ರನ್ನರ್ ತಂಡಕ್ಕೆ ಸಮಾಜ ಸೇವಕ ಪ್ರವೀಣ ರೆಡ್ಡಿ ಕೊಡ ಮಾಡಿದ ರೂ 5001, ಮೂರನೇ ಬಹುಮಾನ ಆದಿಲ್ ನಾಯ್ಕೋಡಿ ಅವರಿಂದ ರೂ.3001 ನೀಡಿ ಗೌರವಿಸಲಾಯಿತು. ಬಹುಮಾನ ವಿತರಣಾ ಕಾರ್ಯಕ್ರಮದಲ್ಲಿ ಗ್ರಾಮದ ಗಣ್ಯರು ಹಿರಿಯರು ಉಪಸ್ಥಿತರಿದ್ದರು.

# ಮನಸಿಗೆ ನೆಮ್ಮದಿ ಶಾಂತಿ ಪಡೆಯಲು ಧ್ಯಾನ ಒಂದೇ ಉತ್ತಮ ಮಾರ್ಗ : ಬ್ರಹ್ಮಕುಮಾರಿ ಯೋಗಿನಿ

(ವೀರಯ್ಯ ವಿ ಹಿರೇಮಠ)
ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ವರ್ತಮಾನ ಸಮಯದಲ್ಲಿ ವಿಶ್ವಕ್ಕೆ ಬೇಕಾಗಿರುವುದು ಶಾಂತಿ. ಈ ಶಾಂತಿ ಜಗತ್ತಿನಲ್ಲಿ ನೆಲೆಸುವುದು "ಧ್ಯಾನ"ದಿಂದ ಮಾತ್ರ ಎಂದು ಬ್ರಹ್ಮಕುಮಾರಿ ಯೋಗಿನಿ ಅಕ್ಕ ತಿಳಿಸಿದರು. ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದಲ್ಲಿ ಏರ್ಪಡಿಸಿದ "ವಿಶ್ವ ಧ್ಯಾನ ದಿನ"ದಂದು ಉದ್ಘಾಟಿಸಿ ಮಾತನಾಡುತ್ತಾ ಜಗತ್ತಿನಲ್ಲಿ ದಿನದಿಂದ ದಿನಕ್ಕೆ ಒತ್ತಡ, ದುಃಖ, ಚಿಂತೆ, ಭಯ, ಅಶಾಂತಿ ಜಾಸ್ತಿ ಆಗುತ್ತಿದೆ ಪರಿಣಾಮವಾಗಿ ಮನುಷ್ಯ ಶಾಂತಿ, ನೆಮ್ಮದಿಯನ್ನು ಹುಡುಕುತ್ತಿದ್ದಾನೆ.

ನಾವು ಹಣದಿಂದ ಒಡವೆ, ವಸ್ತ್ರ ಇತ್ಯಾದಿ ಸಾಮಗ್ರಿಗಳನ್ನು ಖರೀದಿ ಮಾಡಬಹುದು, ಆದರೆ ಮನಸ್ಸಿಗೆ ಶಾಂತಿ ನೆಮ್ಮದಿಯನ್ನು ಪಡೆಯಲು ಸಾಧ್ಯವಿಲ್ಲ ಶಾಂತಿ ನೆಮ್ಮದಿಗಾಗಿ ಧ್ಯಾನ ಒಂದೇ ಮಾರ್ಗ.



ಧ್ಯಾನ ಎಂದರೆ ಮನಸ್ಸಿನ ಆಲೋಚನೆಗಳನ್ನು ನಕರಾತ್ಮಕತೆಯಿಂದ ಸಕರಾತ್ಮಕತೆಗೆ ಪರಿವರ್ತನೆ ಮಾಡವ ಅಭ್ಯಾಸವಾಗಿದೆ ಧ್ಯಾನ ಇದೊಂದು ಮನಸ್ಸಿನ ವ್ಯಾಯಾಮವಾಗಿದೆ. ಧ್ಯಾನ ಮೆಡಿಟೇಶನ್ ಮಾಡುವುದರಿಂದ ಮನಸ್ಸು ಶಕ್ತಿಶಾಲಿ ಆಗುತ್ತದೆ ಯಾವುದೇ ಪರಿಸ್ಥಿತಿಯಲ್ಲೂ ಸಮಚಿತ್ತದಲ್ಲಿರುವ ಶಕ್ತಿ ನೀಡುತ್ತದೆ. ಸೋಲು-ಗೆಲುವು, ನೋವು-ನಲಿವು, ಸುಖ-ದುಃಖ, ಮಾನ-ಅಪಮಾನ, ಹೊಗಳಿಕೆ-ತೆಗಳಿಕೆ ಇವೆಲ್ಲವುಗಳಲ್ಲಿಯೂ ನಾವು ಏಕರಸವಾಗಿರುವ ಶಕ್ತಿಯನ್ನು ಕೊಡುತ್ತದೆ ಧ್ಯಾನದಿಂದ ಮನಸ್ಸಿನ ಆರೋಗ್ಯ, ಶರೀರದ ಆರೋಗ್ಯ ಸುಧಾರಿಸುತ್ತದೆ ಮನೆಯ ವಾತಾವರಣವನ್ನು ಶಾಂತಗೊಳಿಸುತ್ತದೆ ಧ್ಯಾನ ಎಂದರೆ ತಮ್ಮನ್ನು ಆತ್ಮ ಎಂದು ತಿಳಿದು ಸರ್ವಶಕ್ತಿವಂತನಾದ ಪರಮಾತ್ಮನೊಂದಿಗೆ ಮನಸ್ಸು ಬುದ್ಧಿಯನ್ನು ಜೋಡಿಸುವುದಾಗಿದೆ. ಸಂಗದಂತೆ ರಂಗು ಎನ್ನುವಂತೆ ಸುಖ, ಶಾಂತಿಯ ಸಾಗರನಾದ ಪರಮಾತ್ಮನ ಸಂಗದಲ್ಲಿದ್ದಾಗ ಶಾಂತಿ, ಸುಖ, ಆನಂದದ ಅನುಭೂತಿ ಆಗುತ್ತದೆ. ಇದರ ಮೂಲಕ ವಿಶ್ವಕ್ಕೆ ಶಾಂತಿ, ಆನಂದದ ಪ್ರಕಂಪನಗಳು ಹರಡುತ್ತವೆ ಎಂದರು. 1 ಗಂಟೆ ಸಾಮೂಹಿಕ ಧ್ಯಾನ ನೆರವೇರಿತು ಧ್ಯಾನದ ವಾತಾವರಣದಲ್ಲಿ ಸಾರ್ವಜನಿಕರು ಶಾಂತಿಯ ಅನುಭೂತಿ ಮಾಡಿದರು. ವೇದಿಕೆಯಲ್ಲಿ ಬ್ಯಾಂಕ್ ಮ್ಯಾನೇಜರ್ ಮನೋಹರ್, ವ್ಯಾಪಾರಸ್ಥರಾದ ಭೀಮಣ್ಣ, ಬಸವರಾಜ್ ಹಿಟ್ಟಿ, ಸೋಮಣ್ಣ ಚಿನ್ನೂರು, ಸುಜಾತ, ಅಂಜಲಿ ಮುಂತಾದವರಿದ್ದರು.

# ಯಾದಗಿರಿ ಜಿಲ್ಲೆಯಲ್ಲಿ ಶೀತ ಗಾಳಿ ಬೀಸುವ ಕುರಿತು ಎಚ್ಚರಿಕೆ



ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ : ಡಿ.22- : ಭಾರತೀಯ ಹವಾಮಾನ ಇಲಾಖೆಯಿಂದ 2024ರ ಡಿಸೆಂಬರ್ 18 ರಂದು ಯಾದಗಿರಿ ಜಿಲ್ಲೆಗೆಘೋಷಿಸಿದ್ದು, ಯಾದಗಿರಿ ಜಿಲ್ಲೆಯಾದ್ಯಂತ ಬೆಳಗಿನ ಜಾವ ತೀವ್ರವಾದ ಶೀತ ಗಾಳಿ ಬೀಸುವ ಸಾಧ್ಯತೆಯಿರುತ್ತದೆಹಾಗೂ ಸಾಮಾನ್ಯ ತಾಪಮಾನಕ್ಕಿಂತ 5-6 ಡಿಗ್ರಿ ಸೆಲ್ಸಿಯಸ್ ನಷ್ಟು ಕಡಿಮೆ ಆಗುವ ಸಾಧ್ಯತೆ ಇದೆ ಎಂದು ಯಾದಗಿರಿ ಜಿಲ್ಲಾಧಿಕಾರಿ ಡಾ.ಸುಶೀಲಾ.ಬಿ ಅವರು ತಿಳಿಸಿದ್ದಾರೆ.

ಇತ್ತಿಚೇಗೆ ಸಾರ್ವಜನಿಕರು ಬೆಳಗ್ಗೆ ಸೂರ್ಯೋದಯಕ್ಕಿಂತ ಮುಂಚೆ ಹಾಗೂ ಸೂರ್ಯಾಸ್ತದ ನಂತರ ವಾಕಿಂಗ್ ಬರುವವರು ಮುನ್ನಚ್ಚರಿಕೆ ವಹಿಸಿಬೇಕು, ಗ್ರಾಮಗಳಲ್ಲಿ ಸಾರ್ವಜನಿಕರು, ರೈತರು ಅನಾವಶ್ಯಕವಾಗಿ ದ್ವಿ ಚಕ್ರ ವಾಹನಗಳಲ್ಲಿ ಹೊರಗಡೆ ಬರದಿರಲು ಜಿಲ್ಲಾಡಳಿತದಿಂದ ವಿನಂತಿಸಿದೆ.

ಮುನ್ನಚ್ಚರಿಕೆ ಕ್ರಮಗಳು : ಸಾರ್ವಜನಿಕರು ಸಾಧ್ಯವಾದಷ್ಟು ಮನೆ ಬಿಟ್ಟು ಹೊರಗಡೆ ಬರದಿರಲು ತಿಳಿಸಿದೆ. ಒಂದು ವೇಳೆ ಅವಶ್ಯವಿದ್ದಲ್ಲಿ ಬೆಚ್ಚನೆಯ ಉಡುಪುಗಳಾದ ಸ್ವೇಟರ್, ಜಾಕೇಟ್, ಉಲನ್ ಟೋಪಿ ಕಾಲುಕುಬಸ್, ಕೈಗೌಸ್ ಗಳನ್ನು ಧರಿಸಲು ಸೂಚಿಸಿದೆ. ಅದೇ ರೀತಿ ಮಕ್ಕಳನ್ನು ಸಹ ಮನೆಯಿಂದ ಹೊರಗಡೆ ಬಿಡದಿರಲು ತಿಳಿಸಿದೆ. ರೈತ ಬಾಂಧವರು ಈ ದಿವಸಗಳಲ್ಲಿ ವಿಶೇಷವಾಗಿ ರಾತ್ರಿ ಸಮಯದಲ್ಲಿ ಹೊಲಗಳಲ್ಲಿ ತಂಗುವುದು ಮತ್ತು ಹಗಲಿನಲ್ಲಿ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳದಿರಲು ತಿಳಿಸಿದೆ. ಅವಶ್ಯವಿದ್ದಲ್ಲಿ ಮಾತ್ರ ಬೆಚ್ಚನೆಯ ಉಡುಪುಗಳಾದ ಸ್ವೇಟರ್, ಜಾಕೇಟ್, ಉಲನ್ ಟೋಪಿಗಳನ್ನು ಧರಿಸಲು ತಿಳಿಸಿದೆ. ಕೃಷಿ ಇಲಾಖೆಯಿಂದ ಮುನ್ನಚ್ಚರಿಕೆ ಕ್ರಮವಾಗಿ ರೈತರು ಹಿಂಗಾರು ಬೆಳೆಗಳಿಗೆ ಶೀತ ಗಾಳಿಯ ಪ್ರಭಾವವನ್ನು ಪ್ರತಿರೋಧಿಸಲು 0.5 ಮಿಲಿ ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸಲು ತಿಳಿಸಿದೆ.

# ಪೂರ್ಣಿಮಾ ಪವಾರ್ ರಾಯಚೂರು ಕನ್ನಡ ಭವನದ ಜಿಲ್ಲಾಧ್ಯಕ್ಷೆಯಾಗಿ ಆಯ್ಕೆ.



ರಾಯಚೂರು : ಪತ್ರಕರ್ತೆ, ಸಂಘಟಕಿ, ರಂಗಕಲಾವಿದೆ, ಟಿವಿ8 ಕನ್ನಡ ಡಿಜೀಟಲ್ ವಾಹಿನಿ ಮುಖ್ಯಸ್ಥೆ ಹಾಗೂ ಕಲಾ ಕೌಸ್ತುಭ ಟ್ರಸ್ಟ್ ರಿ ಬೆಂಗಳೂರು ಅಧ್ಯಕ್ಷರಾದ

ಪೂರ್ಣಿಮಾ ಪವಾರ್ ಇವರನ್ನು ಕೇರಳ ರಾಜ್ಯದ ಕಾಸರಗೋಡು ಕನ್ನಡ ಭವನದ ರಾಯಚೂರು ಜಿಲ್ಲಾ ಘಟಕದ, ಜಿಲ್ಲಾಧ್ಯಕ್ಷೆಯಾಗಿ ಆಯ್ಕೆ ಮಾಡಲಾಗಿದೆ. ಕನ್ನಡ ಭವನದ ರಜತ ಸಂಭ್ರಮ ವರ್ಷವಾದ 2025 ರಲ್ಲಿ ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಕನ್ನಡ ಪರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಸದುದ್ದೇಶದಿಂದ ಎಲ್ಲಾ ಜಿಲ್ಲೆಗಳಲ್ಲಿ ಘಟಕಗಳನ್ನು ಸ್ಥಾಪಿಸಲಾಗುತ್ತದೆ. ಕಾಸರಗೋಡು ಕನ್ನಡ ಭವನದ ನಿರ್ದೇಶಕರಾದ ಸಿ. ವೈ. ಮೆಣಸಿನಕಾಯಿ ನಾಮ ನಿರ್ದೇಶನ ಮಾಡಿದರು.

ವಿಜಯನಗರ ಜಿಲ್ಲಾಧ್ಯಕ್ಷರಾದ ಚಿಟಗೇರಿಕೊಟ್ರೇಶಿಅನುಮೋದಿಸಿದರು. ಸರ್ವಾನುಮತಿಯೊಂದಿಗೆಆಯ್ಕೆಯಾದ ಪೂರ್ಣಿಮಾ ಪವಾರ್ ಅವರು, ಕನ್ನಡ ಭವನ ಗ್ರಂಥಾಲಯ (ರಿ.)ಕನ್ನಡ ಭವನ ಪ್ರಕಾಶನ, ಕರ್ನಾಟಕದಿಂದ ಕಾಸರಗೋಡಿಗೆ, ಆಗಮಿಸುವ, ಸಾಹಿತ್ಯ, ಸಾಂಸ್ಕೃತಿಕ ರಾಯಭಾರಿಗಳಿಗೆ "ಉಚಿತ ವಸತಿ ಸೌಕರ್ಯ ", ಕನ್ನಡ ಭವನ ಸಾರ್ವಜನಿಕ ವಾಚನಾಲಯ, ಮತ್ತು ರಜತ ಸಂಭ್ರಮ ವಿಶೇಷ ಕಾರ್ಯಕ್ರಮಗಳ ಜವಾಬ್ದಾರಿ ಸ್ವೀಕರಿಸಿ, ಜಿಲ್ಲಾ ಘಟಕವನ್ನು ವಿಸ್ತರಿಸಿ ಕಾರ್ಯ ಪ್ರವಿತ್ತರಾಗಬೇಕೆಂದು ಕಾಸರಗೋಡು ಕನ್ನಡ ಭವನದ ಸ್ಥಾಪಕಧ್ಯಕ್ಷರಾದ ಡಾ. ವಾಮನ್ ರಾವ್ ಬೇಕಲ್ ಹಾಗೂ ಸಂಚಾಲಕಿಯಾದ ಸಂಧ್ಯಾ ರಾಣಿ ಟೀಚರ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಇಂದು ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಡಿ.22-ಕಲಬುರಗಿ ಜೆಸ್ಕಾಂ ಕಾರ್ಯ ಮತ್ತು ಪಾಲನೆ ನಗರ ವಿಭಾಗದಲ್ಲಿ ಬರುವ 11ಕೆ.ವಿ. ಕೆಳಕಂಡ ಫೀಡರ್ ವ್ಯಾಪ್ತಿಯಲ್ಲಿ ನಿರ್ವಹಣಾ ಕಾರ್ಯ ಕೈಗೊಳ್ಳುವ ಪ್ರಯುಕ್ತ ಡಿಸೆಂಬರ್ 23 ರಂದು ಸೋಮವಾರ ಬೆಳಿಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ. ಸಾರ್ವಜನಿಕರು ಜೆಸ್ಕಾಂನೊಂದಿಗೆ ಸಹಕರಿಸುವಂತೆ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರರು(ವಿ) ಪ್ರಕಟಣೆಯಲ್ಲಿ ಕೋರಿದ್ದಾರೆ.

ಹೌಸಿಂಗ್ ಬೋರ್ಡ್ ಫೀಡರ್: ಗಂಜ್ ಬ್ಯಾಂಕ ಕಾಲೋನಿ, ಗಂಜ ಬಸ್‌ಸ್ಟ್ಯಾಂಡ ಎದುರುಗಡೆ, ಭವಾನಿ ಗುಡಿ, ಈಶ್ವರಗುಡಿ, ರಾಮ ಮಂದಿರ. ಬಿಯಾನಿ, ಜಿ.ಓ.ಎಸ್ ಪ್ರದೇಶ, ಲಾಹೋಟಿ ಕಲ್ಯಾಣ ಮಂಟಪ ಹಿಂಭಾಗ ಪ್ರದೇಶ, ಆದರ್ಶ ಸ್ಕೂಲ್ ಪ್ರದೇಶ ಕೆ.ಎಚ್.ಬಿ ಕಾಲೋನಿ, ಕಲಂತ್ರಿ ಬಿಲ್ಡಂಗ್ ಪ್ರದೇಶ ಹಾಗೂ ಸುತ್ತಮುತ್ತಲಿನ ಪ್ರದೇಶಗಳು.

ಮಿಜುಗುರಿ ಫೀಡರ್: ಕರ್ನಾಟಕ ಐಸ್ ಪ್ಯಾಕ್ಟರಿ, ತಾಜ್ ಐಸ್ ಪ್ಯಾಕ್ಟರಿ, ನಯಾ ಮೋಹಲ್ಲಾ, ಹಜ್ ಕಮಿಟಿ ಹಿಂದುಗಡೆ , ಮೀಜುಗುರಿ ವಾಟರ್ ಟ್ಯಾಂಕ್ ಹಿಂದು ಗಡೆ , ಮುಸ್ಲಿಂ ಚೌಕ್ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

ಗಂಜ್ ಫೀಡರ್: ಸಂಜೀವ ಗಾಂದಿ ನಗರ, ಆರ್ಯ ನಗರ, ಗಂಜ್ ಅಡತ್, ಬಂಬೂ ಬಜಾರ ಹಾಗೂ ಸುತ್ತಮುತ್ತಲಿನ ಪ್ರದೇಶಗಳು.

ದರ್ಗಾ ಫೀಡರ್: ಬಹುಮನಿ ಚೌಕ್, ಹೋಲಿ ಕಟ್ಟಾ, ಸರಾಫ್ ಬಜ಼ಾರ್, ಗಣೇಶ ಮಂದಿರ, ಚಪ್ಪಲ್ ಬಜ಼ಾರ್, ಕ್ಲಾತ್ ಬಜ಼ಾರ್, ಸಜ್ಜನ್ ಕಾಂಪ್ಲೆಕ್ಸ್, ಫೂಲ್ ಮಾರ್ಕೆಟ್, ಮಕ್ತಾಮ್‌ಪುರ, ಜವಾಹರ್ ಹಿಂದ್ ಶಾಲೆ, ಬಕರಿಕಮೇಳಾ, ಮೋತಿ ವೈನ್ ಶಾಪ್, ನಯಾ ಮೊಹಲ್ಲಾ, ಸಂತ್ರಸವಾಡಿ ಲೊವರ್ ಲೇನ್, ಜಾಜಿ ಬ್ಲಾಕ್, ನ್ಯಾಷನಲ್ ಚೌಕ್, ಹಳೇ ಡಂಕಾ, ಓಲ್ಡ್ ಡಂಕಾ, ನೂರ್ ಬಾಗ್, ಡೆಕ್ಕನ್ ಪೇಪರ್, ಹಫ್ತ್ ಗುಂಬಜ಼್, ಜಲೀಮ್ ಕಾಂಪೌಂಡ್, ಮಕ್‌ಬರಾ ಮತ್ತು ಸುತ್ತ-ಮುತ್ತಲಿನ ಪ್ರದೇಶಗಳು.

ಸಿನಿಮಾ ಫೀಡರ್: ಬಂಬೂ ಬಜಾರ, ಭೂವಿ ಗಲ್ಲಿ, ಚಪ್ಪರ ಬಂದಿ, ಐಯರ್‌ವಾಡಿ, ಕಾವೇರಿ ನಗರ, ನೆಹರು ನಗರ, ಮಹಾರಾಜ ಹೊಟೇಲ್, ಲಕ್ಷ್ಮೀ ನಗರ, ಅಕ್ಕ ತಂಗಿ ಟೆಂಪಲ್, ಕೆ.ಹೆಚ್.ಬಿ. ಕಾಲೋನಿ, ಲಂಗೋಟೆ ಫೀರ್ ದರ್ಗಾ, ಪಾಲಾದಿ ಗ್ಯಾಸ್, ಮತ್ತು ಸುತ್ತಮುತ್ತಲಿನ ಪ್ರದೇಶಗಳು.

ಬ್ರಹ್ಮಪೂರ ಫೀಡರ್: ಶಹಬಜಾರ, ಶೆಟ್ಟಿಕಾಂಪ್ಲೆಕ್ಸ್, ಗದ್ಲೆಗಾಂವ, ಶಹಬಜಾರ ನಾಕಾ, ಶಹಬಜಾರಜಿ.ಡಿ.ಎ, ಕೈಲಾಶ ನಗರ, ಮಾಣೀಕೇಶ್ವರಿ ಕಾಲೋನಿ, ಲಾಲಗೇರಿ, ಗಂಗಾನಗರ, ಅಗ್ನಿಶಾಮಕ ದಳ, ಜನತಾ ಲೇಔಟ, ಕಾಳೆ ಲೇಔಟ, ಮಹಾಲಕ್ಷ್ಮೀ ಲೇಔಟ, ಚೌಡೇಶ್ವರಿ ಕಾಲೋನಿ, ಎನ್.ಆರ್. ಕಾಲೋನಿ, ಬಾಳೆ ಲೇಔಟ, ಅಗ್ರೀಕಲ್ಚರ ಲೇಔಟ, ಜಿ.ಡಿ.ಎ ವಕ್ಕಲಗೇರಾ, ಜಿ.ಡಿ.ಎ. ಶಹಬಜಾರ, ಹರಿಜನವಾಡಾ ಹಾಗೂ ಸುತ್ತಮುತ್ತಲಿನ ಪ್ರದೇಶಗಳು

ಗೋಳಾ ಚೌಕ್ ಫೀಡರ್: ಸಂಜೀವ ನಗರ, ಆರ್ಯಾ ನಗರ, ಗಡಂಗ, ಗೋಳಾ ಚೌಕ್, ಮೋಮಿನಪುರಾ, ರಂಗಿನ್ ಮಸೀದಿ ಪುಟಾಣಿ ಗಲ್ಲಿ, ಹುಮನಾಬಾದ್ ಬೇಸ್, ಡಾ॥ ಚಿಂಚೋಳ್ಳಿ ಆಸ್ಪತ್ರೆ, ಇಂದ್ರಾ ಆಸ್ಪತ್ರೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳು.

ದುಬೈ ಕಾಲೋನಿ ಫೀಡರ್: ಎಮ್ ಜಿ. ಟಿ.ಟಿ, ಆಶ್ರಯ ಕಾಲೋನಿ, ದುಬೈ ಕಾಲೋನಿ ಶೇಖ ರೋಜಾ ಜಿಡಿಎ, ಕಸ್ತೂರಿ ನಗರ, ಸ್ವಾರ್ಗೆಟ್ ನಗರ, ಸುವರ್ಣ ನಗರ ಜಿ.ಡಿ.ಎ, ವೈಷ್ಣವಿ ದೇವಿ ಮಂದಿರ ಸುತ್ತಮುತ್ತಲಿನ ಪ್ರದೇಶ, ಚಿಂಚೋಳ್ಳಿ ಕ್ರಾಸ್, ಭೀರಲಿಂಗೇಶ್ವರ ಮಂದಿರ ಏರಿಯಾ, ಶಿವಲಿಂಗೇಶ್ವರ ಮಂದಿರ ಸುತ್ತಲಿನ ಪ್ರದೇಶ, ಆಯುರ್ವೇದಿಕ ಆಸ್ಪತ್ರೆ, ಸರ್ಕಾರಿ ಆಸ್ಪತ್ರೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳು.

# ಕೃಪಾಸಾಗರ ಗೊಬ್ಬುರ ಅವರಿಗೆ 'ಗಡಿ ನಾಡ ರತ್ನ ಪ್ರಶಸ್ತಿ'



ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ:ಡಿ.22: ಗಡಿನಾಡ ಸಂಗೀತ ಸೇವಾ ಸಂಸ್ಥೆ (ರಿ) ಕಲಬುರಗಿ ವತಿಯಿಂದ 2024 ನೇಯ ಸಾಲಿನ ರಾಜ್ಯ ಮಟ್ಟದ ಗೋದುತಾಯಿ ದೊಡ್ಡಪ್ಪ ಅಪ್ಪ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಮಹಿಳಾಪದವಿಮಹಾವಿದ್ಯಾಲಯದ ಪತ್ರಿಕೋದ್ಯಮ ಪ್ರಾಧ್ಯಾಪಕ ಕೃಪಾಸಾಗರ ಗೊಬ್ಬುರ ಅವರಿಗೆ ಗಡಿ ನಾಡ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಕನ್ನಡ ಸಾಹಿತ್ಯ ಪರಿಷತ್ತಿನ ಸುವರ್ಣ ಸಭಾ ಭವನದಲ್ಲಿ ರವಿವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪುರಸ್ಕರಿಸಲಾಯಿತು.

# ಐದು ದಿನದ ನವಜಾತ ಗಂಡು ಶಿಶುವಿನ ಪೋಷಕರ ಪತ್ತೆಗಾಗಿ ಮನವಿ

ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ : ಡಿಸೆಂಬರ್ 22- 2024ರ ಡಿಸೆಂಬರ್ 11 ರಂದು ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನ ದಿವಳಗುಡ್ಡ ಗ್ರಾಮದ ಪಿಡ್ಡಣ್ಣ ಮುತ್ಯನ ದೇವಸ್ಥಾನ ಹಿಂದೆ ಸಿಕ್ಕ ಅಂದಾಜು ಐದು ದಿನದ ನವಜಾತ ಗಂಡು ಶಿಶುವಿನ ಪೋಷಕರ ಪತೆ-ಗಾಗಿ ಮನವಿ ಮಾಡಲಾಗಿದೆ ಎಂದು ಯಾದಗಿರಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಪ್ರೇಮ್‌ಮೂರ್ತಿ ಅವರು ತಿಳಿಸಿದ್ದಾರೆ.

2024ರ ಡಿಸೆಂಬರ್ 11 ರಂದು ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನ ದಿವಳಗುಡ್ಡ ಗ್ರಾಮದ ಪಿಡ್ಡಣ್ಣ ಮುತ್ಯನ ದೇವಸ್ಥಾನ ಹಿಂದೆ ಸಿಕ್ಕ ಅಂ-ದಾಜು ಐದು ದಿನದ ನವಜಾತ ಗಂಡು ಶಿಶು ಸಿಕ್ಕಿದ್ದು, ಸದರಿ ಶಿಶುವಿನ ಪಾಲಕರ ಪತ್ತೆಗಾಗಿ ಬಾಲ ನ್ಯಾಯ (ಪಾಲನೆ ಮತ್ತು ರಕ್ಷಣೆ) ಕಾಯ್ದೆ-2015 ರನ್ವಯ ಉಚಿತ ಪತ್ರಿಕಾ ಪ್ರಕಟಣೆ ನೀಡಬೇಕಾಗಿರುವುದರಿಂದ ಹಾಗೂ ವಾರಸುದಾರರು (ಪೋಷಕರು) ಯಾರು ಪತ್ತೆಯಾಗದಿದ್ದಾಗ ಸದರಿ ಕಾಯ್ದೆಯಡಿ ಮಗುವಿನ ಯಾರು ವಾರಸುದಾರರು, ಪೋಷಕರು ಇಲ್ಲವೆಂದು ಭಾವಿಸಿ ದತ್ತು ಮುಕ್ತ ಆದೇಶ ನೀಡಲು ಅವಶ್ಯವಿರುವುದರಿಂದ ಸದರಿ ಮಗುವಿಗೆ ಪ್ರಸ್ತುತ ಅಂ-ದಾಜು 15 ದಿನಗಳಾಗಿದ್ದು, ಈ ನವಜಾತ ಗಂಡು ಶಿಶುವಿನ ವಾರಸುದಾರರು, ಪೋಷಕರು ಯಾರಾದರು ಇದ್ದಲ್ಲಿ ಈ ಪ್ರಕಟಣೆ ಹೊರಡಿಸಿದ 60 ದಿನಗಳ ಒಳಗೆ ಸಂಪರ್ಕಿಸಬೇಕಾದ ವಿಳಾಸ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಕಛೇರಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಕೋಣೆ ಸಂಖ್ಯೆ ಸಿ-17, ಒಂದನೇ ಮಹಡಿ, ಜಿಲ್ಲಾಡಳಿತ ಭವನ ಸಂಕೀರ್ಣ, ಚಿತ್ತಾಪೂರ ರಸ್ತೆ, ಯಾದಗಿರಿ ಇಲ್ಲಿಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಾಹನ ದುರಸ್ಥಿಗೆ ಅಂದಾಜು ದರಪಟ್ಟಿ ನೀಡಲು ಅರ್ಜಿ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ : ಡಿಸೆಂಬರ್ 22: ಯಾದಗಿರಿ ಅಗ್ನಿಶಾಮಕ ಠಾಣೆಯ ಕ್ವಿಕ್ ರೆಸ್ಪಾನ್ಸ ವಾಹನ ಕೆಎ-42 ಜಿ-638 ವಾಹನಕ್ಕೆ ಸಂಬಂಧಪಟ್ಟ ದುರಸ್ಥಿ ಕಾರ್ಯಗಳನ್ನು ಕೈಗೊಳ್ಳಲು ಅಂದಾಜು ದರಪಟ್ಟಿಗಳನ್ನು ಅರ್ಜಿ ಆಹ್ವಾನಿಸಲಾಗಿದೆ ಎಂದು ಯಾದಗಿರಿ ಕರ್ನಾಟಕ ರಾಜ್ಯ ಅಗ್ನಿ ಶಾಮಕ ಮತ್ತು ತುರ್ತು ಸೇವೆಗಳು ಅಗ್ನಿ ಶಾಮಕ ಠಾಣಾಧಿಕಾರಿ ವಿರೇಶ ಅವರು ತಿಳಿಸಿದ್ದಾರೆ.

ಯಾದಗಿರಿ ಅಗ್ನಿಶಾಮಕ ಠಾಣೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ, ಕ್ವಿಕ್ ರೆಸ್ಪಾನ್ಸ ವಾಹನ ಕೆಎ-42 ಜಿ-638 ವಾಹನಕ್ಕೆ ಕೆಲವು ಅತೀ ಅವಶ್ಯಕ ಈ ಕೆಳಕಂಡ ದುರಸ್ಥಿ ಕಾರ್ಯಗಳನ್ನು ಮಾಡಿಸಬೇಕಾಗಿರುವುದರಿಂದ, ಈ ವಾಹನವು ಸಾರ್ವಜನಿಕ ಅಗ್ನಿ ಅನಾಹುತ, ರಕ್ಷಣೆ ಕರೆ, ಮತ್ತು ಸಂಬಂಧಿಸಿದ ಇನ್ನಿತರೆ ವಿಶೇಷ ಕರೆಗಳಿಗೆ ಸ್ಪಂದಿಸುತ್ತಿರುವುದರಿಂದ, ಕಾರಣ ಸದರಿ ವಾಹನದ ಪ್ರಸ್ತಾವಿತ ದುರಸ್ಥಿ ಕಾರ್ಯಗಳನ್ನು ಮಾಡಿಸಲು ಅಂದಾಜು ದರ ಪಟ್ಟಿಗಳನ್ನು ನೀಡಲು ಅಹ್ವಾನಿಸಿದೆ. ವಿವರಣೆ Suspention System, WiperBlade, Electrical System (Head Light Asssyfoglightignation System, BannetMat, MirrorAssymbly, Hydrolic LiftRepair, BoshPump Work, Wooter Syren ದರ ಪಟ್ಟಿ ಸಲ್ಲಿಸಲು ಇರುವ ಕ್ರಮಗಳು ಮತ್ತು ಷರತ್ತುಗಳು. ಭಾಗವಹಿಸುವ ಗುತ್ತಿಗೆದಾರರ ಯಾರ ದರ ಕಡಿಮೆ ಇರುತ್ತದೆ-ಯೊ ಅವರ ದರ ಪಟ್ಟಿಯನ್ನು ಅಂಗಿಕರಿಸಲಾಗುವುದು. ಸಲ್ಲಿಸಲಾದ ದರ ಪಟ್ಟಿಗಳಲ್ಲಿ ಯಾವುದೆ ತಿದ್ದುಪಡಿಗೆ ಅವಕಾಶವಿರುವುದಿಲ್ಲ. ದರ ಪಟ್ಟಿಯನ್ನು ಅಂಗಿಕರಿಸಲು ಯಾವುದೆ ಶಿಫಾರಸ್ಸು ಹಾಗೂ ಬಾಹ್ಯ ಒತ್ತಡ ತರತಕ್ಕದ್ದಲ್ಲ. ದರ ಪಟ್ಟಿಗಳನ್ನು ಅಂಗಿಕರಿಸುವ ಮತ್ತು ತಿರಸ್ಕರಿಸುವ ಅಧಿಕಾರ ಪೊಲೀಸ್ ಮಹಾ ನಿರ್ದೇಶಕರು ಹಾಗೂ ಮಹಾ ನಿರ್ದೇಶಕರು ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ ಬೆಂಗಳೂರು ರವರದ್ದಾಗಿರುತ್ತದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಶುಲ್ಕ ಮರುಪಾವತಿ" ಅರ್ಜಿ ಅವಧಿ ವಿಸ್ತರಣೆ

ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ : ಡಿಸೆಂಬರ್ 22-: 2024-25ನೇ ಸಾಲಿನ ಮೆಟ್ರಿಕ್ ನಂತರದ ಕೋರ್ಸ್ಗಳು ಓದುತ್ತಿರುವ ವಿದ್ಯಾರ್ಥಿಗಳಿಂದ ಶುಲ್ಕ ಮರುಪಾವತಿ ಸೌಲಭ್ಯಕ್ಕೆ ಆನ್‌ಲೈನ್ ಮೂಲಕ ಅರ್ಜಿ ಅವಧಿ ವಿಸ್ತರಿಸಿದೆ ಎಂದು ಯಾದಗಿರಿ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು ಸದಾಶಿವ.ಎಂ.ನಾರಾಯಣಕರ್ ಅವರು ತಿಳಿಸಿದ್ದಾರೆ.

ಮೆಟ್ರಿಕ್ ನಂತರದ ಕೋರ್ಸ್ಗಳು ಓದುತ್ತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು, 2024-25ನೇ ಸಾಲಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೂಲಕ ನೀಡಲಾಗುತ್ತಿರುವ "ಶುಲ್ಕ ಮರುಪಾವತಿ" ಕಾರ್ಯಕ್ರಮದ ಸೌಲಭ್ಯಕ್ಕೆ ಆನ್‌ಲೈನ್ ssp. postmatric.karnataka. gov.in ನಲ್ಲಿ ಮೂಲಕ ಅರ್ಜಿ ಅವಧಿ 2025ರ ಫೆಬ್ರವರಿ 15ರ ವರೆಗೆ ವಿಸ್ತರಿಸಿದೆ. ಕಾರ್ಯಕ್ರಮಗಳ ವಿವರ, ಅರ್ಹತೆ, ಅಗತ್ಯ ದಾಖಲಾತಿಗಳೊಂದಿಗೆ ವಿದ್ಯಾರ್ಥಿವೇತನಕ್ಕೆ ಸಂಬಂಧಿಸಿದ ಸರ್ಕಾರಿ ಆದೇಶಗಳು ಬಗ್ಗೆ ಮಾಹಿತಿಗಾಗಿ ವೆಬ್‌ಸೈಟ್ bcwd. karnataka.gov.in ಗೆ ಭೇಟಿ ನೀಡಿ. ಇಲಾಖಾ ಸಹಾಯವಾಣಿ ದೂ.ಸಂ.8050770005, ಇಮೇಲ್ bcwdhelpline@gmail. com ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದ ಸಹಾವಾಣಿ ದೂ.ಸಂ.1902 ಇಮೇಲ್ post-matrichelp@karnataka. gov.in ಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅತಿಥಿ ಭೋದಕರ ನೇಮಕಾತಿಗೆ ಅರ್ಜಿ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ : ಡಿಸೆಂಬರ್ 20, (ಕ.ವಾ) : ಯಾದಗಿರಿ ಜಿಲ್ಲೆಯ ಶಹಾಪೂರ ತಾಲ್ಲೂಕಿನರುವ ಸರಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಶಹಾಪೂರ ಸಂಸ್ಥೆಯಲ್ಲಿ ಖಾಲಿ ಉಳಿದಿರುವ ಟಿ.ಆರ್.ಎ.ಸಿ (technician in refrigerator and air conditioning), ಮತ್ತು ಎಮ್.ಎಮ್.ವಿ (mechanic motor vehicle) ವೃತ್ತಿಗೆ ವಿದ್ಯಾರ್ಹತೆ ಹೊಂದಿದ ಅರ್ಹ ಅತಿಥಿ ಭೋದಕರು ಅರ್ಜಿ ಆಹ್ವಾನಿಸಲಾಗಿದೆ ಎಂದು ಶಹಾಪೂರ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಪ್ರಾಚಾರ್ಯರು ಡಾ.ರುಬಿನಾ ಪರ್ವಿನ್ ಅವರು ತಿಳಿಸಿದ್ದಾರೆ.

# ಶಾಸಕ ರಾಜಾ ವೇಣುಗೋಪಾಲ್ ನಾಯಕರಿಂದ ಸಿಟಿ ಸ್ಕ್ಯಾನ್ ಲೋಕಾರ್ಪಣೆ



ಮಲ್ಲಮ್ಮ ನುಡಿ ವಾರ್ತೆ

ಸುರಪುರ:ಡಿ.21:ನೂತನ ಸಿಟಿಸ್ಕ್ಯಾನ್, ಪ್ರಯೋಗಾಲಯ ಘಟಕ, ನೂತನ ಕಟ್ಟಡ ಹೊರ ರೋಗಿಗಳ ಸ್ಕ್ಯಾನಿಂಗ್ ಯಂತ್ರ ಮತ್ತು ಡಿಜಿಟಲ್ ಎಕ್ಸ್ ರೇ ಯಂತ್ರ, ನೂತನ ದ್ರವ ವೈದ್ಯಕೀಯ ಆಮ್ಲಜನಿಕ ಉತ್ಪಾದನೆ ಘಟಕ, ನಗರ ಆರೋಗ್ಯ ಕೇಂದ್ರದ ಆವರಣದಲ್ಲಿರುವ 6 ಜನ ಸಿಬ್ಬಂದಿಗಳ ವಸತಿ ಗೃಹಗಳನ್ನು ಉದ್ಘಾಟಿಸಿ ಮಾತನಾಡಿದರು.

ನಗರಸಭೆ ಅಧ್ಯಕ್ಷೆ ಹೀನಾ ಕೌಸರ್, ನಗರ ಯೋಜನಾ ಪ್ರಾಧಿಕಾರ ನಗರಸಭೆ ಉಪಾಧ್ಯಕ್ಷ ರಾಜಾ ಪಿಡ್ಡನಾಯಕ ತಾತಾ ನಗರಸಭೆ ಸದಸ್ಯರಾದ ಸುಜಾತ ವೇಣುಗೋಪಾಲ್ ಜೇವರ್ಗಿ, ನರಸಿಂಹಕಾಂತ ಪಂಚಮಗಿರಿ,

ಜಿಲ್ಲಾ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಮಹೇಶ ಬಿರಾದಾರ, ತಾಲೂಕು ಆರೋಗ್ಯ ಅಧಿಕಾರಿ ಡಾ.ರಾಜಾ ವೆಂಕಪ್ಪ ನಾಯಕ ಯುವತ್ ಕಾಂಗ್ರೆಸ್ ಜಿಲ್ಲಾಧ್ಯಕ್ಷ ರಾಜಾ ಕುಮಾರ ನಾಯಕ, ನಗರ ಯೋಜನಾ ಪ್ರಾಧಿಕಾರ ಮಾಜಿ ಅಧ್ಯಕ್ಷ ವಾಸುದೇವ ನಾಯಕ, ಮಲ್ಲಣ್ಣ ಮುದೋಳ, ಬಸವರಾಜಪ್ಪ ಜಮದ್ರಖಾನಿ, ಅಬ್ದುಲ್ ಗಫಾರ್ ನಗನೂರಿ, ಮಹಿಬೂಬ ಒಂಟಿ, ವೆಂಕಟೇಶ ಹೊಸಮನಿ, ಅಬ್ದುಲ್ ಅಲೀಂಗೋಗಿ, ದೊಡ್ಡದೇಸಾಯಿ, ಸುವರ್ಣ ಸಿದ್ರಾಮ ಎಲಿಗಾರ, ಭೀಮನಗೌಡ ಲಕ್ಷ್ಮೀ ಇನ್ನಿತರರು ವೇದಿಕೆಯಲ್ಲಿದ್ದರು .

ಡಾ.ಹರ್ಷವರ್ಧನ ಡಾ.ಶಫೀ ಉಜಾಮಾ, ಡಾ.ಅಭಿಷೇಕ ಕಿರಣ ಸಜ್ಜನ, ಡಾ. ಶರತ್ ಜಿ. ಯಂಕಂಚಿ ನಗರಸಭೆ ಸದಸ್ಯರಾದ

ಜುಮ್ಮಣ್ಣ ಕೆಂಗೂರಿ, ಮಹ್ಮದ್ ಗೌಸ್ ಕಿಣ್ಣಿ, ಖಮರುಲ್ ನಾರಾಯಣಪೇಟ, ನಾಸೀರ್ ಕುಂಡಾಲೆ, ವೆಂಕಟೇಶ ಬೇಟೆಗಾರ, ಶಕೀಲ್ ಅಹ್ಮದ್, ಭಂಡಾರಿ, ನಾಟೀಕರ್

ಧರ್ಮಣ್ಣ ಮಡಿವಾಳ, ಗಾಳೆಪ್ಪ ದೀವಳಗುಡ್ಡ,, ಖಾಲೀದ ಅಹ್ಮದ್ ತಾಳಿಕೋಟೆ, ಶರೀಫ್, ಮಹಿಬೂಬ, ರವಿಚಂದ್ರ ಸಾಹು ಆಲ್ದಾಳ, ವೆಂಕಟರೆಡ್ಡಿ ಬೋಯಿಗಲ್ಲಿ, ಮಾನಪ್ಪ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಸಗರನಾಡಿಗೆ ಹಿರಿದಾದ ಇತಿಹಾಸವಿದೆ : ರಾಗಂ



ಮಲ್ಲಮ್ಮ ನುಡಿ ವಾರ್ತೆ

ಶಹಾಪೂರ:ಡಿ.22-:ಸಗರನಾಡಿಗೆ ಹಿರಿದಾದ ಇತಿಹಾಸ ಭವ್ಯ ಪರಂಪರೆ, ಮಹತ್ತರವಾದ ಸಂಸ್ಕೃತಿ ಇದೆ ಎಂದು ನಾಡಿನ ಹಿರಿಯ ಸಾಹಿತಿ ರಾಜಶೇಖರ ಮಠಪತಿ (ರಾಗಂ) ಹೇಳಿದರು. ಸುರಪುರ ಪಟ್ಟಣದ ಗರುಡಾದ್ರಿ ಕಲಾ ಮಂದಿರದಲ್ಲಿ ಸಗರನಾಡು ಸೇವಾ ಪ್ರತಿಷ್ಠಾನದ ದಶಮಾನೋತ್ಸವ ಸಮಾರಂಭದ ಸಮಾರೋಪ ಭಾಷಣ ಮಾಡಿದ ಅವರು ನಾಡಿನ ಕಲೆ, ಸಂಸ್ಕೃತಿ, ಸಂಶೋಧನೆ, ಪರಂಪರೆ ಇತಿಹಾಸಕ್ಕೆ ಸಗರನಾಡಿನ ಕೊಡುಗೆ ಮಹತ್ತರವಾಗಿದೆ. ವಚನ ಸಾಹಿತ್ಯದ ಉಗಮ ಈ ನಾಡಿನದು, ಇಲ್ಲಿ ಭಕ್ತಿ ಇದೆ, ಭಾವೈಕ್ಯತೆ ಇದೆ, ಕಲೆ, ಸಂಸ್ಕೃತಿ, ಸಾಹಿತ್ಯದ ತವನಿಧಿಯಾಗಿದೆ ಎಂದು ಹೇಳಿದರು. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಹಿರಿಯ ಉಪಾಧ್ಯಕ್ಷ ಶ್ರೀ. ಅಪ್ಪಾರಾವ ಅಕ್ಕೋಣಿ 50 ಜನ ಸಾಧಕರನ್ನು ಸನ್ಮಾನಿಸಿ ಮಾತನಾಡಿದರು. ಕನ್ನಡ ಪುಸ್ತಕ ಪ್ರಾಧಿಕಾರದ ಸದಸ್ಯ ಬಿ.ಹೆಚ್ ನಿರಗುಡಿ ಸಗರನಾಡು ಸೇವಾ ಪ್ರತಿಷ್ಠಾನದ ವಿಶೇಷ ಸಂಚಿಕೆ ಬಿಡುಗಡೆ ಮಾಡಿದರು. ದಶಮಾನೋತ್ಸವ ಆಚರಣಾ ಸಮಿತಿಯ ಅಧ್ಯಕ್ಷ ಡಾ. ಸುರೇಶ ಆರ್ ಸಜ್ಜನ್ ಸಗರನಾಡ ಸಿರಿ ಸ್ಮರಣ ಗ್ರಂಥದ ಎಲ್ಲಾ ಲೇಖಕರಿಗೆ ಗೌರವ ಪ್ರತಿ ವಿತರಿಸಿದರು, ಸುರಪುರದ ನಿಷ್ಠಿ ಕಡ್ಲೆಪ್ಪನವರ ಮಠದ ಪೂಜ್ಯ. ಪ್ರಭುಲಿಂಗ ಮಹಾಸ್ವಾಮಿಗಳು ಸಾನಿಧ್ಯವಹಿಸಿದ್ದರು, ಮುಖ್ಯ ಅತಿಥಿಗಳಾಗಿ ತಾಲೂಕ ಕ.ಸಾ.ಪ ಮಾಜಿ ಅಧ್ಯಕ್ಷರುಗಳಾದ ಶ್ರೀ. ಬಸವರಾಜ ಜಮದ್ರಖಾನಿ, ಶ್ರೀ. ಬಸವರಾಜ ನಿಷ್ಠಿ ದೇಶಮುಖ, ಶ್ರೀನಿವಾಸ ಜಾಲವಾದಿ, ಲಿಂಗಣ್ಣ ಪಡಶೆಟ್ಟಿ ಸಗರ, ವಿವಿಧ ತಾಲೂಕ ಕ.ಸಾ.ಪ ಅಧ್ಯಕ್ಷರುಗಳಾದ ವೆಂಕಟಗಿರಿ ದೇಶಪಾಂಡೆ ಹುಣಸಗಿ, ರವಿಂದ್ರ ಹೊಸಮನಿ ಶಹಾಪೂರ, ಶರಣಬಸಪ್ಪ ಯಾಳವಾರ ಸುರಪುರ, ಮಲ್ಲಿಕಾರ್ಜುನ ಕರಕಳ್ಳಿ ವಡಗೇರಿ, ಬಸವರೆಡ್ಡಿ ಎಂ.ಟಿ. ಪಲ್ಲಿ ಗುರುಮಿಠಕಲ್, ವೆಂಕಟೇಶ ಕಲಕಂಬ ಯಾದಗಿರಿ ಹಾಗೂ ಪ.ಮಾನು ಸಗರ, ನಿಂಗಣ್ಣಗೌಡ ದೇಸಾಯಿ, ಕನಕಪ್ಪ ವಾಗನಗೇರಿ, ಹೆಚ್. ರಾಠೋಡ್, ಪ್ರಕಾಶ ಚಂದ್ ಜೈನ್, ಚಂದ್ರಕಾಂತ ಮಾರ್ಗಲ್, ವಸಂತ ಬಣಗಾರ ಸೇರಿದಂತೆ ಇತರರಿದ್ದರು, ಸಗರನಾಡು ಸೇವಾ ಪ್ರತಿಷ್ಠಾನ ಅಧ್ಯಕ್ಷ ಪ್ರಕಾಶ ಅಂಗಡಿ ಕನ್ನೆಳ್ಳಿ ಅಧ್ಯಕ್ಷತೆ ವಹಿಸಿದ್ದರು, ಇದೇ ಸಂದರ್ಭದಲ್ಲಿ ಕರ್ನಾಟಕ ಸುವರ್ಣ ಮಹೋತ್ಸವದ ಅಂಗವಾಗಿ ಡಾ. ಯಂಕಣ್ಣ ದೊಣ್ಣೆಗೌಡರು, ಡಾ. ವಾಸುದೇವ ಸೇಡಂ, ಡಾ. ಚಿ.ಸಿ. ನಿಂಗಣ್ಣ, ಡಾ. ಶರಣಬಸಪ್ಪ ವಡ್ಡನಕೇರಿ, ಡಾ. ಕೆ.ಗಿರಿಮಲ್ಲ, ಡಾ. ಎಸ್.ಎಸ್.ನಾಯಕ, ಡಾ. ಜಗದೀಶ ನೂಲಿನ್, ನಾಗರಾಜ ಜಮದ್ರಖಾನಿ, ನರಸಿಂಗರಾವ್ ಹೆಮನೂರ, ಗಣೇಶ ಚಿನ್ನಾಕಾರ, ಜನಾರ್ಧನಪಾಣಿಭಾತೆ, ಅಮರಪ್ರೀಯ ಹಿರೇಮಠ, ಶಿವಕುಮಾರ ಮಸ್ಕಿ, ನವೀನ ಜುಜಾರೆ ಸೇರಿದಂತೆ 50 ಜನ ವಿವಿಧ ಸಾಧಕರುಗಳಿಗೆ ಸನ್ಮಾನಿಸಲಾಯಿತು, ಕಾರ್ಯಕ್ರಮವನ್ನು ದೇವು ಹೆಬ್ಬಾಳ ನಿರೂಪಿಸಿದರು, ಹಣಮಂತ್ರಯ ದೇವತ್ಕಲ್ ಸ್ವಾಗತಿಸಿ ವಂದಿಸಿದರು.

ಗಮನ ಸೆಳೆದ ಜನಪದ ಸಂಭ್ರಮ

ಮಧ್ಯಾಹ್ನ 03:00 ಗಂಟೆಗ ಪ್ರಾರಂಭಗೊಂಡ ಜನಪದ ಸಂಭ್ರಮ ಕಾರ್ಯಕ್ರಮಕ್ಕೆ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಕಲಾವಿಧ ಶರಣಪ್ಪ ವಡಗೇರಿ ಚಾಲನೆ ನೀಡಿದರು, ಕೆಂಭಾವಿ ಹಿರೇಮಠದ ಚನ್ನಬಸವ ಶಿವಾಚಾರ್ಯರು ಸಾನಿದ್ಯದಲ್ಲಿ ವೇದಿಕೆಯ ಮೇಲೆ ಪ್ರಮುಖರಾದ ನಾಗಯ್ಯ ಸ್ವಾಮಿ ಅಲ್ಲೂರ ಸಿ.ಎಸ್ ಮಾಲಿ ಪಾಟೀಲ, ಬಸವರಾಜ ಯಾಟಗಲ್, ಅಮರೇಶ್ ಹಸಮಕಲ್, ಭಿಮರಾಯ ಬಜಂತ್ರಿ, ಬಸಣ್ಣ ಗೂಡಿಕಾರ, ಶಿವಣ್ಣಗೌಡ ಬಿರಾದರ, ಬಸಪ್ಪ ಹಣಮಸಾಗರ, ನೀಲಪ್ಪ ಚೌದ್ರಿ ಸೇರಿದಂತೆ ಇತರರಿದ್ದರು. ಈ ಸಂದರ್ಭದಲ್ಲಿ ಕಲಾ ಪ್ರದರ್ಶನ ನೀಡಿದ ಇಮಾಮಸಾಬ ವಲ್ಲೆಪ್ಪನವರ ಹುಬ್ಬಳ್ಳಿ, ಮಲ್ಲಪ್ಪ ಹಸಮಕಲ್ ಮಸ್ಕಿ, ದಾವಲಸಾಬ ಅತ್ತಾರ, ಮನೋಹರ ವಿಶ್ವಕರ್ಮ, ಶರಣು ವಠಾರ, ಶರಣಕುಮಾರ ಜಾಲಹಳ್ಳಿ, ಶಿವಶರಣಯ್ಯ ಸ್ವಾಮಿ ಬಳ್ಳುಂಡಗಿಮಠ, ಡಾ. ಪ್ರಕಾಶಯ್ಯ ನಂದಿ, ನಾರಾಯಣಪ್ಪ ಮಾಡಸಿರವಾರ, ಶಿವಪ್ಪ ಹೆಬ್ಬಾಳ ಸೇರಿದಂತೆ ಅನೇಕರು ನಡೆಸಿಕೊಟ್ಟ ಜನಪದ ಗಾಯನ ಜನಮನ ಸಂಭ್ರಮಿಸಿತು.

# 33.25 ಲಕ್ಷ ಮೌಲ್ಯದ ಗಾಂಜಾ ವಶ:ಓರ್ವನ ಬಂಧನ

ಮಲ್ಲಮ್ಮ ನುಡಿ ವಾರ್ತೆ

ಸಿಂದಗಿ,ಡಿ. 19: ತಾಲೂಕಿನ ಬಂಟನೂರು ಗ್ರಾಮದ ತೋಟದಲ್ಲಿ ಅಕ್ರಮವಾಗಿ ಬೆಳೆಯಲಾಗಿದ್ದ 33.25 ಲಕ್ಷ ರೂ ಮೌಲ್ಯದ ಗಾಂಜಾ ಬೆಳೆಯನ್ನು ಸಿಂದಗಿ ಪೊಲೀಸರು ಪತ್ತೆ ಮಾಡಿದ್ದಾರೆ. ಬಸವರಾಜ ಬಾಳಪ್ಪ ಪೂಜಾರಿ ಎಂಬ ಆರೋಪಿಯನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ. ಆರೋಪಿ ತನ್ನ ಹೊಲದಲ್ಲಿ ರಾಜಾರೋಷವಾಗಿ ಗಾಂಜಾ ಬೆಳೆದಿದ್ದ ಖಚಿತ ಮಾಹಿತಿ ಸಂಗ್ರಹಿಸಿ ದಾಳಿ ಮಾಡಿದ ಪೊಲೀಸರು ಬರೋಬ್ಬರಿ 134 ಕೆಜಿ ತೂಕದ ಗಾಂಜಾ ಪತ್ತೆ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ. ಡಿವೈಎಸ್ಪಿ ಜಗದೀಶ್ ಹೆಚ್. ಎಸ್ ಮಾರ್ಗದರ್ಶನದಲ್ಲಿ ಸಿಪಿಐ ನಾನಾಗೌಡ ಪೊಲೀಸಪಾಟೀಲ, ಪಿಎಸ್‌ಐಐ ಆರಿಫ್ ಮುಶಾಪುರಿ ನೇತೃತ್ವದ ಪೊಲೀಸ್ ತಂಡ ಈ ಕಾರ್ಯಚರಣೆ ನಡೆಸಿದ್ದು ಸಾರ್ವಜನಿಕರ ಮೆಚ್ಚುಗೆಗೆ ಕಾರಣವಾಗಿದೆ

# ಕುಸ್ತಿ ವಿಜೇತ ಪಟುಗಳಿಗೆಬೆಳ್ಳಿಕಡಗ

## ಶಹಾಪುರ ಮೋತಕಪಲ್ಲಿ ಬಲಭೀಮೇಶ್ವರ ಜಾತ್ರಾ ಮಹೋತ್ಸವ



ಮಲ್ಲಮ್ಮ ನುಡಿ ವಾರ್ತೆ

ಶಹಾಪುರ ನಗರದ ಗುತ್ತುಪೇಟೆ ವಾರ್ಡಿನಲ್ಲಿ ಮೋತಕದಲ್ಲಿ ಬಲಭಿಮೇಶ್ವರ ಜಾತ್ರಾ ಮಹೋತ್ಸವ ನಿಮಿತ್ತ ಶನಿವಾರ ಗ್ರಾಮೀಣ ಕ್ರೀಡೆಯಾದ ಕುಸ್ತಿ

ಆಯೋಜಿಸಲಾಗಿತ್ತು. ಮದಗಜಗಳಂತೆ ಸೆಣಸಾಡಿದ ಕುಸ್ತಿ ಪಟುಗಳಲ್ಲಿ ದೋರನ ಹಳ್ಳಿಯ ಆಕಾಶ ದೋರನಹಳ್ಳಿ ಮತ್ತುಸಿಂಗನಹಳ್ಳಿಯ ಚಂದ್ರು ಪಟುಗಳು 11 ತೊಲೆ ಬೆಳ್ಳಿ ಕಡಗ ವಿಜೇತರಾದರು. ಪ್ರತಿವರ್ಷದ ಕಾರ್ತಿಕ ಮಾಸದಲ್ಲಿಜರುಗುವ ಇಲ್ಲಿನಮೋತಕಪಲ್ಲಿಬಲಭೀಮೇಶ್ವರ ಜಾತ್ರಾಮಹೋತ್ಸವ

ಸರ್ವಸಮುದಾಯದಿಂದಅತ್ಯಂತ ಶ್ರದ್ಧೆ ಭಕ್ತಿಯಿಂದ ಬರಲಾಗುತ್ತದೆ. ತನ್ನಿನಿಮಿತ್ತವಾಗಿಶುಕ್ರವಾರ ಬೆಳಗ್ಗೆ ಬಲಭೀಮೇಶ್ವರನಡೆಸಿಕೊಂಡು ಉತ್ಸವ ಮೂರ್ತಿಯನ್ನು ಪಲ್ಲಕ್ಕಿಯ ಮೆರವಣಿಗೆಯೊಂದಿಗೆ ಹತ್ತಿರದಭೀಮಾನದಿ ತೀರಕ್ಕೆ ತೆಗೆದುಕೊಂಡು ಹೋಗಿ ಗಂಗಾಸ್ನಾನ ಮಾಡಿಸಲಾಗುತ್ತದೆ.

ಅಂದೇ ಸಂಜೆಯವರೆಗೆ ನಗರಕ್ಕೆಆಗಮಿಸಿ ಹನುಮಾನ ಮಂದಿರದಿಂದ ಸಮೇತಅದ್ದೂರಿ ದೇವಸ್ಥಾನ ತಲುಪಿತು. ಈ ಸಂದರ್ಭದಲ್ಲಿ ಹಲವಾರು ಗ್ರಾಮಗಳ ಭಕ್ತಾಧಿಗಳು ದಿಢ ನಮಸ್ಕಾರ,ಉಪವಾಸ ಸೇವೆ,ಕಾಯಿ ಕರ್ಪೂರ ಸೇರಿ ಇನ್ನಿತರ ಭಕ್ತಿ ಸೇವೆಯನ್ನು ಕೈಗೊಂಡರು. ಜಾತ್ರಾನಿಮಿತ್ತವಾಗಿ ಪ್ರತಿ ವರ್ಷದಂತೆಆಯೋಜಿಸಲಾಗುವ ಕುಸ್ತಿ ಸ್ಪರ್ಧೆ ಶನಿವಾರ ಅದ್ದೂರಿಯಾಗಿ ಜರುಗಿತು. ನೂರಾರು ಕುಸ್ತಿಪಟುಗಳು ತಮ್ಮ ಹಲವಾರು ಕುಸ್ತಿ ಪಟ್ಟುಗಳನ್ನು ಪದರ್ಶಿಸಿ ಸೇರಿದ್ದ ಜನಸ್ತೋಮದ ಗಮನಸೆಳೆದರು. ಬಡಾವಣೆಯ ಮುಖಂಡ ಸೋಮಶೇಖರ ಕಾಂಗ್ರೆಸ್ ಅವರಿಂದ ವಿಜೇತ ಕುಸ್ತಿ ಪಟುಗಳಿಗೆ ಸುಮಾರು 11ಗ್ರಾಂ ಬೆಳ್ಳಿ ಕಡಗ ಬಹುಮಾನವಾಗಿಟ್ಟು ಕುಸ್ತಿ ಸ್ಪರ್ಧೆಯನ್ನುಪ್ರೋತ್ಸಾಹಿಸಿದರು.ಈ ಸಂದಭದಲ್ಲಿ ಮುಖಂಡರಾದ

ಮಹಾದೇವಪ್ಪಸಾಲಿಮನಿ,ರಾಯಪ್ಪ ಸಾಲಿಮನಿ,ಯಲ್ಲಪ್ಪನಾಕ್ಕೋಡಿ, ಶರಣುನಾಯ್ಕಡಿ,ವಿಜಯಕುಮಾರ ಎದುರುಮನಿ, ಸೋಮಶೇಖರ ಕಾಂಗ್ರೆಸ್, ಮಲ್ಲಿಕಾರ್ಜುನ ಚಟ್ನಳ್ಳಿಯಲ್ಲಪ್ಪ ಮಾಸ್ತರ,ರವಿ ಎದುರುಮನಿ,ಈರಪ್ಪದೊಡ್ಡನಿ, ಮರೆಪ್ಪರತ್ನಾಳಕರ್,ಬಸವರಾಜ ಮಜಾರಿ ಸೇರಿ ಅನೇಕರಿದ್ದರು.

# ಅಮಿತ್ ಶಾ ಹೇಳಿಕೆ ಖಂಡನೀಯ: ಸಾಗರ್ ಅಲಿಪುರೆ

(ರಾಜಕುಮಾರ ಆರ್.ಹಡಪದ)

ಮಲ್ಲಮ್ಮ ನುಡಿ ವಾರ್ತೆ



ಚಿಟಗುಪ್ಪ : ರಾಜ್ಯಸಭೆಯಲ್ಲಿ ಮಾತನಾಡುವ ವೇಳೆ ಗೃಹ ಸಚಿವ ಅಮಿತ್ ಶಾ ಅವರು ಅಂಬೇಡ್ಕರ್ ಎನ್ನುವುದು ಕೆಲವರಿಗೆ ವ್ಯಸನವಾಗಿದೆ ಎಂದು ಹೇಳುವ ಮೂಲಕ ಸಂವಿಧಾನ ಶಿಲ್ಪಿ ಡಾ. ಬಿ. ಆರ್. ಅಂಬೇಡ್ಕರ್ ಅವರನ್ನು ಅವಮಾನಿಸುವುದರ ಜೊತೆಗೆ ದೇಶದ ಸಂವಿಧಾನವನ್ನೂ ಅವಮಾನಿಸಿದ್ದಾರೆ ಇದನ್ನು ನಾವು ಉಗ್ರವಾಗಿ ಖಂಡಿಸುತ್ತೇವೆ ಎಂದು ದಲಿತ ಮುಖಂಡ ಸಾಗರ್ ಅಲಿಪುರೆ ಹೇಳಿದ್ದಾರೆ. ಅಂಬೇಡ್ಕರ್ ನಮಗೆ ವ್ಯಸನ ಅಲ್ಲ ನಮ್ಮ ಪಾಲಿನ ದೇವರು, ನಿತ್ಯ ಸ್ಮರಣೆ, ನಮ್ಮ ಉಸಿರು ಇರುವವರೆಗೆ ಈ ಭೂಮಿಯಲ್ಲಿ ಸೂರ್ಯ-ಚಂದ್ರ ಇರುವವರೆಗೆ ಅಂಬೇಡ್ಕರ್ ಸ್ಮರಣೆ ಇರಲಿದೆ ಇಂಥಹ ಶ್ರೇಷ್ಠ ದಾರ್ಶನಿಕರನ್ನು ಅವಮಾನಿಸುವಂತಹ ಹೀನ ಧೈರ್ಯ ತೋರಿರುವ ಅಮಿತ್ ಶಾ ಅವರು -ದೇಶದ ಮುಂದೆ ಸಾರ್ವಜನಿಕವಾಗಿ ಕ್ಷಮೆ ಯಾಚಿಸಬೇಕು,ಇಂಥವರು - ಸಂಸತ್ತಿನಲ್ಲಿ ಇರಲು ಯೋಗ್ಯರಲ್ಲ ತಮ್ಮ ಸಚಿವ ಸ್ಥಾನಕ್ಕೆ ತಕ್ಷಣವೇ -ರಾಜೀನಾಮೆ ಕೊಟ್ಟು ಹೊರಗೆ ಬರಬೇಕೆಂದು ಆಗ್ರಹಿಸಿದ್ದಾರೆ. ಅಮಿತ್ ಶಾ ಅವರ ಹೇಳಿಕೆಯನ್ನು ಪ್ರಧಾನಿ ನರೇಂದ್ರಮೋದಿ ಹಾಗೂ ರಾಷ್ಟ್ರೀಯ-ಸ್ವಯಂಸೇವಕ ಸಂಘ ಗಂಭೀರವಾಗಿ ಪರಿಗಣಿಸಬೇಕು. ಒಂದು ವೇಳೆ ಈ ವಿಷಯವನ್ನು ಪರಿಗಣಿಸದಿದ್ದಲ್ಲಿ ಮುಂದಿನ ದಿನಗಳಲ್ಲಿ ತಕ್ಕ ಪಾಠ - ಕಲಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ. ಸಂಸತ್ತಿನಲ್ಲಿರುವ ದಲಿತ ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಸಂಸದರು ಅಮಿತ್ ಶಾ ಹೇಳಿಕೆಯನ್ನು ಉಗ್ರವಾಗಿ ಖಂಡಿಸಬೇಕು ಎಂದು ಹೇಳಿರುವ ಅವರು ಡಾ. ಅಂಬೇಡ್ಕರ್ ಅವರು ಸಂವಿಧಾನ ರಚಿಸದೇ ಇದ್ದಿದ್ದರೆ ಅಮಿತ್ ಶಾ - ಇಂದು ಗೃಹ ಸಚಿವರಾಗಲು ಸಾಧ್ಯವಿರಲಿಲ್ಲ ಎಂಬುದನ್ನು ಅರಿಯಬೇಕು ಎಂದು ತಮ್ಮ ಆಕ್ರೋಶವನ್ನು ಹೊರ ಹಾಕಿದ್ದಾರೆ.

# ಕೃತಕ ಬುದ್ದಿಮತ್ತೆ ಹಾಗೂ ಸಾಮಾಜಿಕ ಜಾಲತಾಣಗಳ ಮೇಲೆ ಬೆಳಕು ಚೆಲ್ಲಿದ ಗೋಷ್ಠಿ



(ಮಲ್ಲಿಕಾರ್ಜುನ್ ಮಳಿಕೇರಿ)

ಮಲ್ಲಮ್ಮ ನುಡಿ ವಾರ್ತೆ

ಮಂಡ್ಯದಲ್ಲಿ ಜರುಗುತ್ತಿರುವ 87 ನೇ ಅಖಿಲ ಭಾರತ ಕನ್ನಡ ಸಾಹಿತ್ಯಸಮ್ಮೇಳನದಲ್ಲಿ ಜರುಗಿದ " ಸೃಜನಶೀಲತೆ - ವಿದ್ಯುನ್ಮಾನ ಮಾಧ್ಯಮಗಳ ಸವಾಲುಗಳು " ಎಂಬ 3 ನೇ ಗೋಷ್ಠಿಯಲ್ಲಿ ಅಶಯ ನುಡಿಗಳನ್ನಾಡಿದ ಹಿರಿಯ ಮಾಧ್ಯಮ ತಜ್ಞರಾದ ಜಿ.ಎನ್. ಮೋಹನ್ ಅವರು ಆಧುನಿಕ ತಂತ್ರಜ್ಞಾನ ಪರಿಣಾಮದಿಂದ ವಿದ್ಯುನ್ಮಾನಮಾಧ್ಯಮಗಳಲ್ಲಿ ತುಂಬಾ ಪರಿವರ್ತನೆಗಳಾಗಿವೆ. ಜಗತ್ತು ಸಮೀಪದಿಂದ ನೋಡುತ್ತಿದ್ದೇವೆ. ಹಲವು ಸಮಸ್ಯೆಗಳನ್ನುಸೃಷ್ಟಿಸುತ್ತದೆ ಎಂದು ಹಲವು ನಿರ್ದೇಶನಗಳ ಮೂಲಕ ತಿಳಿಸಿದರು. ಸಂಪನ್ಮೂಲ ವ್ಯಕ್ತಿಗಳಾದ ಮಧು ವೈ.ಎನ್ ಅವರು ಕೃತಕ ಬುದ್ದಿಮತ್ತೆ ಹಾಗೂ ಚಾಟ್ ಜಿ.ಪಿ.ಟಿ ಸೃಷ್ಟಿಸಿರುವ ಸವಾಲುಗಳು ಕುರಿತು ವಿಚಾರ ವ್ಯಕ್ತಪಡಿಸಿದರು. ಕನ್ನಡ ಸಾಹಿತ್ಯ ಮತ್ತು ಸಾಮಾಜಿಕ ಜಾಲತಾಣಗಳು ಕುರಿತು ಮಾತನಾಡಿ ಸಾಮಾಜಿಕ ಜಾಲತಾಣಗಳಲ್ಲಿ ಕನ್ನಡ ಭಾಷೆ ಮತ್ತು ಸಾಹಿತ್ಯ ಹೇಗೆ ಪ್ರಸರಣವಾಗುತ್ತಿದೆ, ಬಳಕೆಯಾಗುತ್ತದೆ ಮತ್ತು ಸಮಸ್ಯೆಗಳನ್ನು ಎದುರಿಸುತ್ತಿದೆ ಎಂಬುದನ್ನು ಕುರಿತು ಓಂ ಶಿವಪ್ರಕಾಶ್ ಅವರು ವಿಶ್ಲೇಷಿಸಿದರು. ತಂತ್ರಜ್ಞಾನ ಯುಗದಲ್ಲಿ ಕನ್ನಡದ ಅನುಸಂಧಾನ ಕುರಿತು ವಿಚಾರ ವ್ಯಕ್ತಪಡಿಸಿದರು. ಶಹಾಪುರ ತಾಲ್ಲೂಕು ಕನ್ನಡಸಾಹಿತ್ಯಪರಿಷತ್ತಿನ ಅಧ್ಯಕ್ಷರಾದ ಡಾ.ರವೀಂದ್ರನಾಥ ಹೊಸ್ಮನಿ ಅವರು ಕಾರ್ಯಕ್ರಮ ನಿರ್ವಹಿಸಿದರು. ಮಡ್ಡಿಕೇರಿ ಗೋಪಾಲ ಸ್ವಾಗತಿಸಿದರು. ರುದ್ರೇಶ್ ಅವರು ನಿರೂಪಿಸಿದರು. ಬಿ.ಟಿ. ನಾಗೇಶ ವಂದಿಸಿದರು.

# ಸಾರ್ವಜನಿಕ ಹುದ್ದೆಗಳಿಂದ ಜವಾಬ್ದಾರಿ ಹೆಚ್ಚುತ್ತದೆ - ರಾಜಶೇಖರ್ ಉಪ್ಪಿನ



ಮಲ್ಲಮ್ಮ ನುಡಿ ವಾರ್ತೆ

ಬೀದರ.ಡಿ.22:-ಜನತೆಯಿಂದ ಆಯ್ಕೆಯಾಗಿ ಪಡೆದ ಹುದ್ದೆಯಿಂದ ಜವಾಬ್ದಾರಿ ಹೆಚ್ಚಾಗುತ್ತದೆ. ಅದನ್ನು ನಿರ್ವಹಿಸುವುದು ಸವಾಲಿನ ಕೆಲಸವಾಗುತ್ತದೆ ಎಂದು ಇತ್ತೀಚೆಗೆ ಚಿಟಗುಪ್ಪ ತಾಲುಕು ಸರ್ಕಾರಿ ನೌಕರರ ಸಂಘದಅಧ್ಯಕ್ಷರಾಗಿಆಯ್ಕೆಯಾದ ರಾಜಶೇಖರ ಉಪ್ಪಿನ ರವರು ಅಭಿಪ್ರಾಯಪಟ್ಟರು.

ಅವರು ಇಂದು ಹೆಣ್ಣುಮಗು ವೃತ್ತದ ಸಮೀಪದಲ್ಲಿ, ಕಲ್ಯಾಣ ಕರ್ನಾಟಕ ಮಿತ್ರಮಂಡಳಿಯಿಂದ ಕಚೇರಿಯಲ್ಲಿಆಯೋಜಿಸಿದ್ದ ಸನ್ಮಾನ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದರು. ಮುಂದುವರೆದು ಮಾತನಾಡಿದ ಅವರು ಜಿದ್ದಾ ಜಿದ್ದಿನ ಚುನಾವಣೆಯಲ್ಲಿ ನನ್ನನ್ನು ಆಯ್ಕೆಮಾಡಿದ ಶಿಕ್ಷಕ ಬಾಂಧವರಿಗೆ ಕೃತಜ್ಞನಾಗಿದ್ದೇನೆ. ಅವರ ಸಮಸ್ಯೆಗಳಿಗೆ ಪ್ರಾಮಾಣಿಕವಾಗಿ ಸ್ಪಂದಿಸುವ ಕೆಲಸ ಮಾಡುತ್ತೇನೆ ಎಂದು ನುಡಿದರು.

ಶಿಕ್ಷಕ ವೃತ್ತಿಯು ಪವಿತ್ರವಾಗಿದೆ. ಶಿಕ್ಷಕರು ನೌಕರ ಸಂಘದ ಜವಾಬ್ದಾರಿಯನ್ನು ವಹಿಸಿಕೊಂಡಿರುವುದು ಸಂತಸವಾಗಿದೆ. ಇದರಿಂದ ಶಿಕ್ಷಕರ ಸಮಸ್ಯೆಗಳು ಸುಲುಭವಾಗಿ ಬಗೆ ಹರಿಯುತ್ತವೆ ಎಂದು ಶಿಕ್ಷಕರು ಹಾಗೂ ಮಿತ್ರ ಮಂಡಳಿಯ ಅಧ್ಯಕ್ಷರಾದ ಸಂಜೀವಕುಮಾರಸ್ವಾಮಿಯವರು ಅಭಿಪ್ರಾಯಪಟ್ಟರು.

ಕಲ್ಯಾಣ ಕರ್ನಾಟಕ ಮಿತ್ರ ಮಂಡಳಿಯ ಕಾರ್ಯದರ್ಶಿಯಾದ ಅನಂತ ಕುಲಕರ್ಣಿಯವರು ಪ್ರಾಸ್ತಾವಿಕವಾಗಿ ಮಾತನಾಡಿದರು.

ಕೋಶಾಧ್ಯಕ್ಷರಾದ ಅರವಿಂದ ಕುಲಕರ್ಣಿಯವರು ನಿರೂಪಿಸಿದರು. ಸಹಕಾರ್ಯದರ್ಶಿ ಮಾರುತಿ ಬಿರಾದಾರ ರವರು ವಂದಿಸಿದರು. ವೀರಭದ್ರಪ್ಪ ಉಪ್ಪಿನ, ಬಳಿರಾಮ ಕುರ್ನಾಳೆ, ಕರಬಸಪ್ಪ, ಸಿದ್ರಾಮ ಹೂಗಾರ, ಸಮೀರ ಹುಸೇನ್ ಹಾಗು ಇತರ ಪ್ರಮುಖರು ಈ

# ವಚನಗಳ ಪಾಲನೆಯಿಂದ ಜೀವನ ಪಾವನ ಉಪಲೋಕಾಯುಕ್ತ ಎನ್.ಕೆ.ಫಣೀಂದ್ರ




(ಮಲ್ಲಪ್ಪಾ ಟಿ ಹಾಸಗೊಂಡ)

ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ: ಬಸವಾದಿ ಶರಣರ ವಚನಗಳಲ್ಲಿ ಕಾನೂನಿನ ಅಂಶ,ಸಂವಿಧಾನದ ಆಶಯಗಳು ಅಡಗಿವೆ ಎಂದು ಕರ್ನಾಟಕ ಲೋಕಾಯುಕ್ತ ಇಲಾಖೆಯ ಉಪಲೋಕಾಯುಕ್ತ ಎನ್. ಕೆ.ಫಣೀಂದ್ರ ಹೇಳಿದರು.

ಪಟ್ಟಣದ ಚನ್ನಬಸವಾಶ್ರಮ ಪರಿಸರದಲ್ಲಿ ಹಿರೇಮಠ ಸಂಸ್ಥಾನದ ವತಿಯಿಂದ ಭಾನುವಾರ ಆಯೋಜಿಸಿದ್ದ ಶತಾಯಷಿ ಡಾ.ಚನ್ನಬಸವ ಪಟ್ಟದ್ದೇವರ 135ನೆಯ ಜಯಂತ್ಯುತ್ಸವ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಬಸವಣ್ಣನವರ ಒಂದೊಂದು ವಚನಗಳಲ್ಲಿ ಬದುಕಿನ ಮೌಲ್ಯಗಳು ಅಡಗಿವೆ. ಮನುಷ್ಯನಲ್ಲಿನ ರಾಕ್ಷಸ ಗುಣಗಳನ್ನು ಹೊಗಲಾಡಿಸುವ ಅದ್ಭುತ ಶಕ್ತಿ ವಚನಗಳಲ್ಲಿವೆ ಎನ್ನುವುದನ್ನು ಎಲ್ಲೂರು ತಿಳಿದುಕೊಳ್ಳಬೇಕಿದೆ. ಬಸವಣ್ಣನವರು ಅಂದಿನ ಕಾಲದಲ್ಲೇ ಸಮಾನತೆಗಾಗಿ ಹೋರಾಟ ನಡೆಸಿದರು. ಅಂತರ್ಜಾತಿ ವಿವಾಹ ಮಾಡಿಸಿ ಜಾತಿ ವ್ಯವಸ್ಥೆಯನ್ನು ಧಿಕ್ಕರಿಸಿ ಮಾನವ ಜಾತಿ ಒಂದೇ ಎನ್ನುವುದನ್ನು ಸಾರಿದರು. ಸ್ತ್ರೀಯರಿಗೆ ಸ್ವಾತಂತ್ರ ಕಲ್ಪಿಸಿ ಸರ್ವರೂ ಸಮಾನರೆಂದು ತಿಳಿಹೇಳುವ ಪ್ರಯತ್ನ ಮಾಡಿದರು.

ಅದನ್ನೇ ರಾಷ್ಟ್ರಕವಿ ಕುವೆಂಪು ಅವರು ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ಎಂದು ಹೇಳಿದ್ದರು. ಆದರೆ, ಪ್ರಸ್ತೂತ ಪರಿಸ್ಥಿತಿಯಲ್ಲಿ ಮನುಷ್ಯನಲ್ಲಿ ಸ್ವಾರ್ಥ ಭಾವನೆ ಬೆಳೆಯುತ್ತಿದೆ. ಒಬ್ಬರು ಮೇಲೆ ಬರಲು ಮತ್ತೊಬ್ಬರನ್ನು ತುಳಿಯುವ ಸಂಸ್ಕೃತಿ ಬೆಳೆಯುತ್ತಿರುವುದು ಆತಂಕಕಾರಿ ಬೆಳವಣಿಗೆ ಎಂದು ಕಳವಳ ವ್ಯಕ್ತಪಡಿಸಿದರು. ಪ್ರತಿಯೊಬ್ಬರು ಬಸವಣ್ಣವರ ವಚನಗಳು ಅನುಸರಿಸಿದರೇ ಎಲ್ಲರ ಬೆಳವಣಿಗೆ ಆಗುತ್ತದೆ. ಭ್ರಷ್ಟಾಚಾರ ನಿಯಂತ್ರಣ ಬರಲು ಸಾಧ್ಯವಾಗುತ್ತದೆ ಎಂದರು.

ಜೀವನದಲ್ಲಿ ನಡೆ ನುಡಿ ಒಂದಾದರೇ ಬದುಕು ಉಜ್ವಲ ಆಗುತ್ತದೆ. ಶತಾಯಷಿ ಡಾ.ಚನ್ನಬಸವ ಪಟ್ಟದ್ದೇವರು ತಮ್ಮ ಬದುಕಿನುದ್ದಕ್ಕೂ ಬಸವತತ್ವಮೈಗೂಡಿಸಿಕೊಂಡು ತಮ್ಮ ನಡೆ ನುಡಿ ಒಂದಾಗಿಸಿಕೊಂಡಿದ್ದರು. ಹಾಗಾಗಿ ಅವರ ಮಹಾತ್ಮರ ಸಾಲಿನಲ್ಲಿ ನಿಲ್ಲುತ್ತಾರೆ. ಅವರ ವಿಚಾರ ಧಾರೆಗಳನ್ನು ಯುವಜನಾಂಗಕ್ಕೆ ಪರಿಚಯಿಸುವ ಉದ್ದೇಶದಿಂದ ಪ್ರತಿವರ್ಷ ಪೂಜ್ಯರ ಜಯಂತ್ಯುತ್ಸವ ಆಚರಿಸುತ್ತಿರುವುದು ಸಂತಸ ಸಂಗತಿ.

ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಕೂಡ ಧಾರ್ಮಿಕ, ಶೈಕ್ಷಣಿಕ ಕಾರ್ಯಗಳ ಜತೆಗೆ ಅನಾಥ ಮಕ್ಕಳ ಪಾಲನೆ ಪೋಷಣೆ, ಬಡ ಮಕ್ಕಳಿಗೆ ಉಚಿತ ಶಿಕ್ಷಣ ಕಲ್ಪಿಸುತ್ತಿರುವುದು ಮಾದರಿ ಎನಸಿದೆ ಎಂದು ತಿಳಿಸಿದರು.

ನೇತೃತ್ವವಹಿಸಿದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ಮಾತನಾಡಿ, ಶತಾಯಷಿ ಡಾ.ಚನ್ನಬಸವ ಪಟ್ಟದ್ದೇವರು ಜ್ಞಾನದ ಖಣಿ ಆಗಿದ್ದರು. ಅವರು ಅಂದಿನ ದಿನಗಳಲ್ಲಿ ಪ್ರಾರಂಭಿಸಿದ ಹಾನಗಲ್ ಕುಮಾರೇಶ್ವರ ಪ್ರಸಾದ ನಿಲಯದಲ್ಲಿ ಹಿರಿಯ ಸಾಹಿತಿ ದಿವಂಗತ ಶಾಂತರಸರು ಅಂತವರು ಪ್ರಸಾದ ನಿಲಯದ ವಿದ್ಯಾರ್ಥಿಗಳಾಗಿದ್ದು ವಿಶೇಷ. ಅವರು ಕಾಲಿಟ್ಟ ಕಡೆಗಳಲ್ಲಿ ಪವಾಡ ನಡೆದಿವೆ. ನೂತನ ಅನುಭವ ಮಂಟಪ ನಿರ್ಮಾಣ ಮಾಡಿದ ಪೂಜ್ಯರು ಬಸವತತ್ವ-ಕನ್ನಡಕ್ಕಾಗಿ ತಮ್ಮ ಬದುಕು ಮುಡಿಪಾಗಿಟ್ಟಿದ್ದರು ಎಂದು ತಿಳಿಸಿದರು.

ನೀಲಮ್ಮ ವಿಕೆ ಪಾಟೀಲ್ ಬಸವ ಗುರುವಿನ ಪೂಜೆ ನೆರವೇರಿಸಿದರು.

ಗದಗನ ಹಿರಿಯ ಸಾಹಿತಿ ಡಾ.ಸಿದ್ದು ಯಾಪಲಪರವಿ ಅನುಭಾವ ನೀಡಿದರು.

ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ದಿವ್ಯ ಸಾನ್ನಿಧ್ಯ ವಹಿಸಿದರು. ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಅಧ್ಯಕ್ಷತೆ ವಹಿಸಿದರು. ಈ ಸಂದರ್ಭದಲ್ಲಿ ಜಿಪಂ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಡಾ.ಗಿರೀಶ ಬದೋಲೆ, ಹಿರಿಯ ನ್ಯಾಯವಾದಿ ರಾಜಶೇಖರ ಅಷ್ಟೂರೆ, ತಾಲೂಕು ರೋಟರಿ ಅಧ್ಯಕ್ಷ ಸಂಜುಕುಮಾರ ಪಂಡರಗೇರೆ ಇದ್ದರು.&ಟಿಭಠಿ; ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶಶಿಧರ ಕೋಸಂಬೆ ಸ್ವಾಗತಿಸಿದರು. ಮಧುಕರ ಗಾಂವಕರ್ ನಿರೂಪಿಸಿದರು. ಸಿದ್ರಾಮೇಶ್ವರ ಪಾಟೀಲ್ ವಂದಿಸಿದರು.

ವಿಶೇಷ ಸನ್ಮಾನ :

ಬೆಂಗಳೂರಿನ ಏಕೀಕರಣ ಚೆಕ್ ಔಟಾ ಪ್ರದೇಶ ಉಪನಿರ್ದೇಶಕ ಡಾ.ರಾಮನಗೌಡ ನಾಡಗೌಡ, ಬೆಂಗಳೂರಿನ ನರಶಸ್ತ್ರಚಿಕಿತ್ಸೆ ತಜ್ಞಡಾ.ಪ್ರಶಾಂತ ಅಳ್ಳೆ, ಲ್ಯಾಪರೂಸ್ಕೋಪಿ ಶಸ್ತ್ರ ಚಿಕಿತ್ಸಕ ಡಾ.ವಿವೇಕ ನಿಂಬೂರೆ, ಇಎನ್‌ಟಿ ಡಾ.ವಿ.ವಿ.ನಾಗರಾಜ, ದಾವಣಗೆರೆಯ ಇನ್‌ಸೈಟ್ ಐಎಎಸ್ ಸಂಸ್ಥಾಪಕನಿರ್ದೇಶಕ ಜಿ.ಬಿ.ವಿನಯಕುಮಾರ ಮತ್ತು ಸುರುಪುರ್ ಸಗರನಾಡು ಸೇವಾ ಪ್ರತಿಷ್ಠಾನ ಅಧ್ಯಕ್ಷ ಪ್ರಕಾಶ ಎಸ್ ಅಂಗಡಿ ಅವರನ್ನು ಶ್ರೀಮಠದ ಪರವಾಗಿ ವಿಶೇಷವಾಗಿ ಸನ್ಮಾನಿಸಿ, ಅಭಿನಂದಿಸಿದರು.

ಕಾಯಕ ಪ್ರಶಸ್ತಿ ಪ್ರದಾನ

ಬೀದರ್‌ನ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಜಿಲ್ಲಾ ಮುಖ್ಯ ಆಯುಕ್ತೆ, ಹಿರಿಯ ಜೀವಿ ಡಾ.ಗುರಮ್ಮ ಸಿದ್ದಾರೆಡ್ಡಿ ಅವರನ್ನು ಡಾ.ಚನ್ನಬಸವ ಪಟ್ಟದ್ದೇವರು ಕಾಯಕ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಪ್ರಶಸ್ತಿ ದಾಸೋಹಿ ನಾರಂಜಾ ಸಹಕಾರ ಸಕ್ಕರೆ ಕಾರಖಾನೆ ಅಧ್ಯಕ್ಷ ಡಿ.ಕೆ.ಸಿದ್ರಾಮ ಅವರು ಪ್ರಶಸ್ತಿ ನೀಡಿ ಗೌರವಿಸಿದರು. ಸಂಡೂರಿನ ಪ್ರಭು ಮಹಾಸ್ವಾಮೀಜಿ ಸಾನ್ನಿಧ್ಯ ವಹಿಸಿದರು. ಹವಾ ಮಲ್ಲಿನಾಥ ಮಹಾರಾಜರು, ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು, ಗುರುಬಸವ ಪಟ್ಟದ್ದೇವರು, ಮಾಜಿ ಶಾಸಕ ಪ್ರಕಾಶ ಖಂಡ್ರೆ, ಬುಡಾದ ಮಾಜಿ ಅಧ್ಯಕ್ಷ ಬಾಬು ವಾಲಿ, ಶಕುಂತಲಾ ಬೆಲ್ದಾಳೆ ನಂದಕುಮಾರ ದಾಶಟವಾರ, ಮಲ್ಲಿಕಾರ್ಜುನ ರಗಟೆ, ಅಶೋಕ ಜುಬರೆ ಅವರಿಗೆ ಸನ್ಮಾನಿಸಲಾಯಿತು. ವಿಶೇಷ ಆಹ್ವಾನಿತರಾಗಿ ಡಾ.ಶಶಿಧರ ತೊರಕರ್, ಡಾ.ಕೆ.ರವೀಂದ್ರನಾಥ, ಪುಷ್ಪಾ ಭಾಲಚಂದ್ರ ಜಯಶೆಟ್ಟಿ, ರವಿಶಂಕರ ಕೊರಗಲ್ ಇದ್ದರು.

ಪೂಜ್ಯರ ಗದ್ದುಗೆ ದರುಶನ ಪಡೆದ ಸಚಿವ ಖಂಡ್ರೆ

ಪಟ್ಟದ್ದೇವರ ಜಯಂತ್ಯುತ್ಸವ ಹಿನ್ನೆಲೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಅವರು ಬೆಳಿಗ್ಗೆ 10ಗಂಟೆ ಸುಮಾರಿಗೆ ಪೂಜ್ಯರ ಗದ್ದುಗೆಗೆ ಭೇಟಿ ಪುಷ್ಪವೃಷ್ಟಿ ಸಲ್ಲಿಸಿ ದರುಶನ ಪಡೆದು ಕೊಂಡರು. ಈ ಸಂದರ್ಭದಲ್ಲಿ ಬುಡಾ ಅಧ್ಯಕ್ಷ ಬಸವರಾಜ ಜಾಬಶೆಟ್ಟೆ, ರವಿ ಬೋರವೆಲ್ಸ್ ಮಾಲೀಕ ರವೀಂದ್ರಚಿಡಗುಪ್ಪೆ, ಮಹಾದೇವ ಬೇಲೂರೆ, ಧನರಾಜ ಬಂಬುಳಗೆ ಇದ್ದರು.

ಐದು ಗ್ರಂಥ ಬಿಡುಗಡೆ

ಸಾಹಿತಿ ಕೋರಗಲ್ ವಿರೂಪಾಕ್ಷಪ್ಪ ಬರೆದ ಕಲ್ಯಾಣದ ಉಳಿವು, ಡಾ.ನಾಗರಾಜ ಹೀರಾ ಬರೆದ ಚಿನ್ನದ ನಾಡಿನ ಶರಣರು, ಪ್ರೊ.ಭಾಲಚಂದ್ರ ಜಯಶೆಟ್ಟಿ ಹಿಂದಿ ಭಾಷೆಯಲ್ಲಿ ಅನುವಾದಿಸಿದ ಗುರುಚನ್ನಬಸವ ಮತ್ತು ಸಂಗಮೇಶ ಎನ್ ಜವಾದಿ ಅವರು ಬರೆದ ಕಾಯಕ ಯೋಗಿಗಳು ಗ್ರಂಥ ಲೋಕಾರ್ಪಣೆಗೊಂಡವು.

# ಪಟ್ಟದ್ದೇವರ ಶೈಕ್ಷಣಿಕ ಕಾಳಜಿ ಮಾದರಿ-ಸಂಸದ ಸಾಗರ ಖಂಡ್ರೆ



(ಮಲ್ಲಪ್ಪಾ ಟಿ ಹಾಸಗೊಂಡ)

ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ, ಗಡಿಭಾಗದಲ್ಲಿ ಡಾ.ಚನ್ನಬಸವ ಪಟ್ಟದ್ದೇವರು ಸ್ವತಂತ್ರಪೂರ್ವದಲ್ಲಿ ತೋರಿದ ಶೈಕ್ಷಣಿಕ ಕಾಳಜಿ ಮೆಚ್ಚುವಂತದ್ದಾಗಿದೆ ಎಂದು ಸಂಸದ ಸಾಗರ ಖಂಡ್ರೆ ಹೇಳಿದರು. ಪಟ್ಟಣದ ಭೀಮಣ್ಣ ಖಂಡ್ರೆ ತಾಂತ್ರಿಕ ಮಹಾವಿದ್ಯಾಲಯ(ಬಿಕೆಐಟಿ) ಸಭಾಂಗಣದಲ್ಲಿ ಶಾಂತಿವರ್ಧಕ ಶಿಕ್ಷಣ ಸಂಸ್ಥೆಯ ವತಿಯಿಂದ ಭಾನುವಾರ ಆಯೋಜಿಸಿದ್ದ ಶತಾಯಷಿ ಡಾ.ಚನ್ನಬಸವ ಪಟ್ಟದ್ದೇವರ 135ನೆಯ ಜಯಂತ್ಯುತ್ಸವ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಶೈಕ್ಷಣಿಕ, ಸಾಮಾಜಿಕ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ಪೂಜ್ಯರು ಸಲ್ಲಿಸಿದ ಸೇವೆ ಅವಿಸ್ಮರಣೀಯ. ಡಾ.ಚನ್ನಬಸವ ಪಟ್ಟದ್ದೇವರು ಮತ್ತು ಡಾ.ಭೀಮಣ್ಣ ಖಂಡ್ರೆ ಅವರು ಸೇರಿ ಕಟ್ಟಿದ ಶಾಂತಿವರ್ಧಕ ಶಿಕ್ಷಣ ಸಂಸ್ಥೆ ಇಂದು ಹೆಮ್ಮರವಾಗಿ ಬೆಳೆದಿದೆ. ಜಿಲ್ಲೆಯ ವಿವಿಧ ಭಾಗಗಳಲ್ಲಿ ಶಾಂತಿವರ್ಧಕ ಶಿಕ್ಷಣ ಸಂಸ್ಥೆಯಡಿ ಶಾಲಾ-ಕಾಲೇಜು ಕಾರ್ಯನಿರ್ವಹಿಸುತ್ತಿವೆ.

ನಮ್ಮ ಸಂಸ್ಥೆಯಲ್ಲಿ ಕಲಿತ ವಿದ್ಯಾರ್ಥಿಗಳು ರಾಜ್ಯ ಅಲ್ಲದೇ ದೇಶ ವಿದೇಶಗಳಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸೇವೆಗೈಯುತ್ತ ಸದೃಡ ಸಮಾಜವನ್ನು ಕಟ್ಟುವ ಕೆಲಸ ಮಾಡುತ್ತಿದ್ದಾರೆ ಎಂದು ಹೆಮ್ಮೆ ವ್ಯಕ್ತ ಪಡಿಸಿದರು.

ಪಾಲಕರ ಭವಿಷ್ಯ ಆಗಿರುವ ವಿದ್ಯಾರ್ಥಿಗಳು ಉತ್ತಮ ಶಿಕ್ಷಣ, ಸಂಸ್ಕಾರ ಪಡೆದು ನಾಡಿಗೆ ಕೊಡುಗೆ ನೀಡಬೇಕು ಎಂದು ತಿಳಿಸಿದರು.

ಸಾನ್ನಿಧ್ಯವಹಿಸಿದ ಬಸವಕಲ್ಯಾಣ ಅನುಭವ ಮಂಟಪ ಟ್ರಸ್ಟ್ ಅಧ್ಯಕ್ಷ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಮಾತನಾಡಿ, ಶತಾಯಷಿ ಡಾ.ಚನ್ನಬಸವ ಪಟ್ಟದ್ದೇವರು ಸ್ವತಂತ್ರಪೂರ್ವದಲ್ಲಿ ಗಡಿಭಾಗದ ಅಭಿವೃದ್ಧಿ ದೃಷ್ಟಿಯಿಂದ ಶಿಕ್ಷಣ ಸಂಸ್ಥೆ ಸ್ಥಾಪಿಸಿದರು. ಈ ಸಂಸ್ಥೆಯಡಿ ಇಂದು ಸಾವಿರಾರೂ ವಿದ್ಯಾರ್ಥಿಗಳು ತಮ್ಮ ಭವಿಷ್ಯ ರೂಪಿಸಿಕೊಂಡಿರುವುದು ಸಂತಸ ತರಿಸಿದೆ ಎಂದು ತಿಳಿಸಿದರು.

ಸಿದ್ದರಾಮ ಬೆಲ್ದಾಳ ಶರಣರು ಹುಲಸೂರು ಗುರುಬಸವೇಶ್ವರ ಸಂಸ್ಥಾನ ಮಠದ ಶಿವಾನಂದ ಸ್ವಾಮೀಜಿ, ಮೇಹಕರ-ತಡೋಳ ಮಠದ ರಾಜೇಶ್ವರ ಶಿವಾಚಾರ್ಯರು, ಗೋರ್ಟಾ-ಬೇಮಳಖೇಡ ಮಠದ ಡಾ.ರಾಜಶೇಖರ ಶಿವಾಚಾರ್ಯರು, ಸಾಯಿಗಾಂವ ಮಠದ ಶಿವಾನಂದ ಸ್ವಾಮೀಜಿ, ಅಕ್ಕ ಗಂಗಾಂಬಿಕೆ ಮಾತನಾಡಿದರು. ಈ ಸಂದರ್ಭದಲ್ಲಿ ಬುಡಾದ ಅಧ್ಯಕ್ಷ ಡಾ.ಬಸವರಾಜ ಜಾಬಶೆಟ್ಟೆ, ಜಿಲ್ಲಾ ಗ್ಯಾರಂಟಿ ಕಾಡ ಅನುಷ್ಠಾನ ಸಮಿತಿ ಅಧ್ಯಕ್ಷ ಅಮೃತರಾವ ಚಿಮಕೋಡೆ, ಪುರಸಭೆ ಅಧ್ಯಕ್ಷೆ ಶಶಿಕಲಾ ಅಶೋಕ ಸಿಂಧನಕೇರೆ, ಉಪಾಧ್ಯಕ್ಷ ವಿಜಯಕುಮಾರ ರಾಜಭವನ ಸೇರಿದಂತೆ ಹಲವರು ಇದ್ದರು. ಆಡಳಿತಾಧಿಕಾರಿ ಅಂಕುಶ ಢೋಲೆ ಸ್ವಾಗತಿಸಿದರು. ಬಸವರಾಜ ಕಾವಡಿ ನಿರೂಪಿಸಿದರು. ಉದಯಕುಮಾರ ಕಲ್ಯಾಣೆ ವಂದಿಸಿದರು.

### ನಿವೃತ್ತರಿಗೆ ಸನ್ಮಾನ :

ಇದೇವೇಳೆ ಶಾಂತಿವರ್ಧಕ ಶಿಕ್ಷಣ ಸಂಸ್ಥೆಯ ವಿವಿಧ ಶಾಲಾ-ಕಾಲೇಜುಗಳಲ್ಲಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ಪ್ರಾಚಾರ್ಯರು ಮತ್ತು ಪ್ರಾಧ್ಯಾಪಕರನ್ನು ಸನ್ಮಾನಿಸಲಾಯಿತು. ಡಾ.ಎಸ್.ಸಿ.ಪಾಟೀಲ್, ವಿಜಯಲಕ್ಷ್ಮೀಪಾಟೀಲ್, ಕಲ್ಯಾಣರಾವ ಉಡಬಾಳೆ, ರಘುನಾಥ ಹಡಪದ, ಎ.ವೈ.ಶೆಡೋಳೆ, ಶಿವಶರಣಪ್ಪ ಹುಗ್ಗೆ ಪಾಟೀಲ್, ವಾಮನ ಹತ್ತಿ, ಓ.ಕೆ.ಪಾಟೀಲ್, ಶಿವರುದ್ರಯ್ಯ ಸ್ವಾಮಿ, ಕಾಶಿನಾಥ ಸ್ವಾಮಿ ಅವರನ್ನು ಸನ್ಮಾನಿಸಲಾಯಿತು

ಶತಾಯಷಿ ಡಾ.ಚನ್ನಬಸವ ಪಟ್ಟದ್ದೇವರ ಮತ್ತು ಶತಾಯಷಿ ಡಾ.ಭೀಮಣ್ಣ ಖಂಡ್ರೆ ಅವರ ಆಶೀರ್ವಾದಿಂದ ಚಿಕ್ಕವಯಸ್ಸಿನಲ್ಲಿಯೇ ಸಂಸದನಾಗಿದ್ದೇನೆ. ಜನರ ಪ್ರೀತಿ ವಿಶ್ವಾಸ ಉಳಿಸಿಕೊಂಡು ಜಿಲ್ಲೆಯ ಪ್ರಗತಿಗೆ ಪ್ರಾಮಾಣಿಕವಾಗಿ ದುಡಿಯುತ್ತೇನೆ.

**-ಸಾಗರ ಖಂಡ್ರೆ ಸಂಸದರು ಬೀದರ್**

## ಪೇಡೆರೇಷನ್ ಕಪ್ ಕರಾಟೆ ಚಾಂಪಿಯನ್‌ಶೀಪ್‌ಗೆ ಆಯ್ಕೆ

## ವಾರಣಾಸಿಯ ಬನಾರಸ್ ಹಿಂದೂ ಯುನಿರ್ವಸಿಟಿಯಲ್ಲಿ ನಡೆಯಲಿದೆ 22ನೇ ಆಲ್ ಇಂಡಿಯಾ ಇಂಟರ್ ಸ್ಕೂಲ್ ಕರಾಟೆ ಚಾಂಪಿಯನ್‌ಶೀಪ್




ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟ: ಇದೇ ತಿಂಗಳು 28 ಮತ್ತು 29 ರಂದು ಉತ್ತರ ಪ್ರದೇಶದ ವಾರಣಾಸಿಯ ಬನಾರಸ್ ಹಿಂದೂ ಯುನಿರ್ವಸಿಟಿಯಲ್ಲಿ ನಡೆಯಲಿರುವ 22ನೇ ಆಲ್ ಇಂಡಿಯಾ ಇಂಟರ್ ಸ್ಕೂಲ್ & ಸಿನಿಯರ್ ಕರಾಟೆ ಚಾಂಪಿಯನ್‌ಶೀಪ್‌ಗೆ ರಾಜ್ಯದ ಪ್ರಸಿದ್ಧ ಕರಾಟೆ ಸಂಸ್ಥೆ ರಾಠೋಡ ಮಾರ್ಷಲ್ ಆರ್ಟ್ಸ್ & ಸ್ಕಿಲ್ ಯೂನಿಯನ್‌ನ ವಿದ್ಯಾರ್ಥಿಗಳು ಆಯ್ಕೆಯಾಗಿದ್ದಾರೆ. ಸುಮಾರು 26 ವಿವಿಧ ರಾಜ್ಯಗಳಿಂದ ಸ್ಪರ್ಧಿಗಿಳಿಯುವ 3000ಕ್ಕೂ ಅಧಿಕ ಕರಾಟೆ ಪಟುಗಳ ಜೊತೆ ನಮ್ಮ ರಾಜ್ಯದ ಕರಾಟೆ ಪಟುಗಳು ಕಟಾ ಮತ್ತು ಕುಮಿಟೆ ವಿಭಾಗಗಳಲ್ಲಿ ಸೆಣಸಾಡಲಿದ್ದಾರೆ ಎಂದು ರಾಜ್ಯದ ಚೀಪ್ ಕೋಚ್ ಎಸ್.ಆರ್.ರಾಠೋಡ ತಿಳಿಸಿದ್ದಾರೆ.

ಚಾಂಪಿಯನ್‌ಶೀಪ್‌ಗೆ ಆಯ್ಕೆಯಾದ ವಿದ್ಯಾರ್ಥಿಗಳು ಪ್ರತಿನಿತ್ಯ ಬೆಳಗಿನ ಜಾವ ಮತ್ತು ಸಾಯಂಕಾಲ ಕಠಿಣ ತರಬೇತಿಯಲ್ಲಿ ತೊಡಗಿಸಿಕೊಂಡು ಪೈಟಿಂಗ್ ಮತ್ತು ಕಟಾನಲ್ಲಿ ಅತ್ಯಂತ ಕಠಿಣ ಸ್ಪರ್ಧೆ ನೀಡಲು ಸಿದ್ಧರಾಗಿದ್ದು, ಸದರಿ ಕರಾಟೆ ಪಟುಗಳಿಗೆ ಶಾಸಕ ಎಚ್.ವೈ ಮೇಟಿ, ಜಿಲ್ಲಾಧಿಕಾರಿ ಜಾನಕಿ ಕೆ.ಎಂ, ಜಿಪಂ ಸಿಇಓ ಶಶಿಧರ ಕುರೇರ, ಅಪರ ಜಿಲ್ಲಾಧಿಕಾರಿ ಪರಶುರಾಮ ಶಿನ್ನಾಳಕರ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಜಿ.ಜಿ ಡೂಗನವರ, ಮೇಲ್ವಿಚಾರಕ ರಂಗಪ್ಪ ಕ್ಯಾಲಕೊಂಡ, ಕ್ರೀಡಾ ಇಲಾಖೆಯ ಸಿಬ್ಬಂದಿ ವರ್ಗ ಹಾಗೂ ಪಾಲಕರು ಸೇರಿದಂತೆ ಇತರೆ ಕ್ರೀಡಾಪಟುಗಳು ವಾರಣಾಸಿಯಲ್ಲಿ ರಾಜ್ಯದ ಕೀರ್ತಿಪತಾಕೆಯನ್ನ ಹಾರಿಸಿ ಗೆದ್ದು ಬರುವಂತೆ ಶುಭಹಾರೈಸಿದರು.

ಆಯ್ಕೆಯಾದ ಕ್ರೀಡಾಪಟುಗಳು : ಸಾಗರಕುಮಾರ ಮರಕುಂಬಿ, ಆನಂದ ನಾಯ್ಕ, ರಾಮಕೃಷ್ಣ ದಾಸರ, ಸಾಗರ ಚವ್ಹಾಣ, ಪ್ರಜ್ವಲ್ ರಾಠೋಡ, ಪ್ರಭುಸ್ವಾಮಿ ಆರಾಧ್ಯಮಠ, ಶರಣಗೌಡ ಪಾಟೀಲ, ಅರುಣ ಧನ್ನೂರ, ಕರಣ ರಾಠೋಡ, ತನ್ಮಯ ರಾವ್, ಮಹಮ್ಮದ್ ಮಾಜ್ ಗಲಗಲಿ, ಯಶವಂತ ನಾಯಕ, ಸಾತ್ವಿಕ ಶೇಬನ್ನವರ, ಶ್ರೇಯಸ್ ನಾಗರವಳ್ಳಿ, ಅಕ್ಷಿತ್ ರಾಟೋಡ, ಸಾಯಿಪ್ರಸಾದ ಪೂಜಾರಿ, ಜಯಂತ ಗೋರಗುಂಡಗಿ, ಈಶ್ವರಯ್ಯ ಶಾಂತನವರ ಆಯ್ಕೆಯಾಗಿದ್ದು, ಕರ್ನಾಟಕದಿಂದ ರೇಫ್ರಿಯಾಗಿ ಎಸ್. ಆರ್.ರಾಠೋಡ ಹಾಗೂ ಶಾಂತು ಚವ್ಹಾಣ ಭಾಗವಹಿಸಲಿದ್ದಾರೆ.

### ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ಡಾ.ಪ್ರಭುಗೌಡ ಅಭಿಮತ

## ಶಿಸ್ತಿನ ಜೀವನದಿಂದ ಉತ್ತಮ ಆರೋಗ್ಯ




ತಾಳಿಕೋಟಿ: ಮನುಷ್ಯನ ಆರೋಗ್ಯ ಉತ್ತಮವಾಗಿ ಇರಬೇಕಾದರೆ ಆತನ ಮನಸ್ಥಿತಿಯು ಉತ್ತಮವಾಗಿರಬೇಕಾದದ್ದು ಅಗತ್ಯವಾಗಿದೆ. ಶಿಸ್ತಿನ ಜೀವನ ನಡೆಸಿದಲ್ಲಿ ಅಂಥವರ ಆರೋಗ್ಯವು ಶಿಸ್ತಿನಿಂದ ಕೂಡಿರುತ್ತದೆ, ಆರೋಗ್ಯವನ್ನು ನಾವು ಹಗುರವಾಗಿ ತೆಗೆದುಕೊಳ್ಳಬಾರದು ಆರೋಗ್ಯ ಸರ್ವ ಶ್ರೇಷ್ಠ ಸಂಪತ್ತಾಗಿದೆ ಅದರ ಕುರಿತು ಕಾಳಜಿ ವಹಿಸಬೇಕು ಎಂದು ಖ್ಯಾತ ನೇತ್ರ ತಜ್ಞಡಾ. ಪ್ರಭುಗೌಡ ಲಿಂಗದಳ್ಳಿ ಹೇಳಿದರು. ರವಿವಾರ ತುಂಬಗಿ ಗ್ರಾಮದಲ್ಲಿ ಶ್ರೀ ಗ್ರಾಮ ದೇವತೆ ಜಾತ್ರಾ ಮಹೋತ್ಸವ ಅಂಗವಾಗಿ ಅನುಗ್ರಹ ಕಣ್ಣಿನ ಆಸ್ಪತ್ರೆ ವಿಜಯಪುರ, ಅನುಗ್ರಹ ವಿಜನ್ ಫೌಂಡೇಶನ್ ಟ್ರಸ್ಟ್ ಮತ್ತು ಜಿಲ್ಲಾ ಅಂಧತ್ವ ನಿವಾರಣಾ ಸಂಸ್ಥೆ ವಿಜಯಪುರ ಹಾಗೂ ಯಶೋಧಾ ಆಸ್ಪತ್ರೆ ವಿಜಯಪುರ ಇವರ ಸಹಯೋಗದಲ್ಲಿ ಏರ್ಪಡಿಸಿದ ಉಚಿತ ಆರೋಗ್ಯ ತಪಾಸಣಾ ಶಿಬಿರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಅನುಗ್ರಹ ಆಸ್ಪತ್ರೆ ನೇತೃತ್ವದಲ್ಲಿ ಲಕ್ಷಾಂತರ ಜನರಿಗೆ ಉಚಿತವಾಗಿ ನೇತ್ರ ತಪಾಸಣೆ ಮತ್ತು ಶಸ್ತ್ರಚಿಕಿತ್ಸೆಯ ಸೇವೆಯನ್ನು ಮಾಡುತ್ತಾ ಬಂದಿದ್ದೇವೆ ಈ ಶಿಬಿರದಲ್ಲಿಯೂ ಶಸ್ತ್ರ ಚಿಕಿತ್ಸೆಗೆ ಆಯ್ಕೆಯಾದವರನ್ನು ವಿಜಯಪುರ ಅನುಗ್ರಹ ಕಣ್ಣಿನ ಆಸ್ಪತ್ರೆಗೆ ಕರೆದು–ಕೊಂಡು ಹೋಗಿ ಉಚಿತವಾಗಿ ಶಸ್ತ್ರಚಿಕಿತ್ಸೆ ಮಾಡಿಸಿ ಅವರವರ ಗ್ರಾಮಗಳಿಗೆ ತಲುಪಿಸಲಾಗುವುದು, ಈ ಶಿಬಿರದಲ್ಲಿ ನಮ್ಮ ಜೊತೆಯಲ್ಲಿ ಇದೇ ಗ್ರಾಮದವರಾದ ಖ್ಯಾತ ಎಲುಬು, ಕೀಲು ತಜ್ಞ ಡಾ.ಅತ್ರೇಶ ಬಿರಾದಾರ ಹಾಗೂ ವಿಜಯಪುರದ ಯಶೋಧಾ ಆಸ್ಪತ್ರೆಯ ತಜ್ಞ ವೈದ್ಯರೂ ಕೈಜೋಡಿಸಿದ್ದಾರೆ ಈ ಶಿಬಿರದ ಸದುಪಯೋಗವನ್ನು ತಾವು ಮಾಡಿಕೊಳ್ಳಬೇಕು ಎಂದರು. ಅನುಗ್ರಹ ಕಣ್ಣಿನ ಆಸ್ಪತ್ರೆ ಮತ್ತು ಯಶೋಧಾ ಆಸ್ಪತ್ರೆ ನೇತೃತ್ವದಲ್ಲಿ ನಡೆದ ಈ ಶಿಬಿರದಲ್ಲಿ 195 ಜನರ ಕಣ್ಣಿನ ತಪಾಸಣೆ ನಡೆಸಿ 46 ಜನರನ್ನು ಶಸ್ತ್ರಚಿಕಿತ್ಸೆಗೆ ಆಯ್ಕೆ ಮಾಡಲಾಯಿತು. ಇನ್ನುಳಿದ ವಿವಿಧ ರೋಗಗಳಿಗೆ ಸಂಬಂಧಿಸಿ ಒಟ್ಟು 215 ಜನರ ತಪಾಸಣೆ ಕೈಗೊಳ್ಳಲಾಯಿತು. ಈ ಶಿಬಿರದಲ್ಲಿ ನೇತ್ರ ತಜ್ಞರು ಎಲುಬು ಮತ್ತು ಕೀಲು ತಜ್ಞ, ಸಕ್ಕರೆ ಬಿಪಿ ಇಸಿಜಿ ಹೃದಯ ಕಾಯಿಲೆಗೆ ಸಂಬಂಧಿಸಿದ ತಜ್ಞರು ಪಾಲ್ಗೊಂಡು ವಿವಿಧ ರೋಗಗಳಿಗೆ ಸಂಬಂಧಿಸಿ ತಪಾಸಣೆ ನಡೆಸಿದರು. ಶಿಬಿರದಲ್ಲಿ ಅನುಗ್ರಹ ಆಸ್ಪತ್ರೆ ಮುಖ್ಯಸ್ಥ ಡಾ.ಪ್ರಭುಗೌಡ ಲಿಂಗದಳ್ಳಿ, ಎಲುಬು ಕೀಲು ತಜ್ಞ ಡಾ. ಅತ್ರೇಶ ಬಿರಾದಾರ( ತುಂಬಗಿ), ಯಶೋಧಾ ಆಸ್ಪತ್ರೆಯ ಡಾ. ಶ್ರೀನಿವಾಸ ಜೆಎಸ್, ಡಾ.ಪ್ರಶಾಂತ ಕೆಂಗನಾಳ ಒಳಗೊಂಡು ಅನುಗ್ರಹ ಕಣ್ಣಿನ ಆಸ್ಪತ್ರೆ ಹಾಗೂ ಯಶೋಧಾ ಆಸ್ಪತ್ರೆಯ ಸಿಬ್ಬಂದಿಗಳು ಕಾರ್ಯ ನಿರ್ವಹಿಸಿದರು. ಕಾರ್ಯಕ್ರಮದಲ್ಲಿ ಗ್ರಾಮದ ಗಣ್ಯರು ಹಿರಿಯರು ಉಪಸ್ಥಿತರಿದ್ದರು.

ಉಚಿತ ನೇತ್ರ ತಪಾಸಣೆ ಮತ್ತು ಶಸ್ತ್ರಚಿಕಿತ್ಸೆ ಮೂಲಕ ಸಾವಿರಾರು ಜನರ ಬಾಳಿಗೆ ಬೆಳಕು ನೀಡುವಂತೆ ಕೆಲಸವನ್ನು ಮಾಡುತ್ತಿರುವ ಅನುಗ್ರಹ ಕಣ್ಣಿನ ಆಸ್ಪತ್ರೆ ಮುಖ್ಯಸ್ಥರಾದ ಡಾ. ಪ್ರಭುಗೌಡರ ಸಮಾಜಮುಖಿ ಕಾರ್ಯ ಶ್ಲಾಘನೀಯವಾಗಿದೆ. ಭೀಮನಗೌಡ ಪಾಟೀಲ ಗ್ರಾಮದ ಗಣ್ಯರು ಇದ್ದರು.

## ಚೀಲ ಹೊತ್ತು ಸಾಗುವ ಸ್ಪರ್ಧೆ:ಮುತ್ತಪ್ಪ ಕಲ್ಲಗೋಳ ಪ್ರಥಮ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಡಿ.22–ತಾಲೂಕಿನ ಶಿರೂರ ಪಟ್ಟಣದಲ್ಲಿ ಶನಿವಾರ ಜರುಗಿದ ಒಂದು ಕ್ವಿಂಟಲ್ ಭಾರದ ಜೋಳದ ಚೀಲ ಹೊತ್ತು ಸಾಗುವ ಸ್ಪರ್ಧೆಯಲ್ಲಿ ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕಿನ ಗುಡ್ನಾಳ ಗ್ರಾಮದ ಮುತ್ತಪ್ಪ ಕಲ್ಲಗೋಳ ಪ್ರಥಮ ಸ್ಥಾನ ಪಡೆದು 10 ಸಾವಿರ ರೂ.ಗಳ ನಗದು ಬಹುಮಾನ ಪಡೆದುಕೊಂಡರು.

ಅತ್ಯಂತ ಚಿದ್ದಾಚಿದ್ದಿನಿಂದ ಕೂಡಿದ್ದ ಈ ಸ್ಪರ್ಧೆಯಲ್ಲಿ ಮುತ್ತಪ್ಪ ಕಲ್ಲಗೋಳ ಉಳಿದ ಸ್ಪರ್ಧಿಗಳಿಗಿಂತ ಹೆಚ್ಚು ದೂರ ಕ್ರಮಿಸಿ ಪ್ರಥಮ ಸ್ಥಾನ ಪಡೆದರೆ, ಬೀಳಗಿಯ ಬೀರಲಿಂಗೇಶ್ವರ ತಂಡದ ಯುವಕ ದ್ವಿತೀಯ ಸ್ಥಾನ, ಬೀಳಗಿ ತಾಲ್ಲೂಕಿನ ಕಾತರಕಿಯ ವಿಠ್ಠಲ ನಾಗರಾಳ ತೃತೀಯ ಸ್ಥಾನ ಮತ್ತು ಮುಧೋಳ ತಾಲ್ಲೂಕಿನ ಜಾಲಿಕಟ್ಟಿಯ ಜೈ ಹನುಮಾನ ತಂಡದ ಯುವಕ ಚತುರ್ಥ ಸ್ಥಾನ ಪಡೆದರು.

ನಂತರ ನಡೆದ ಸಂಗ್ರಾಣಿ ಕಲ್ಲು ಎತ್ತುವ ಸ್ಪರ್ಧೆಯಲ್ಲಿ ಬನಹಟ್ಟಿಯ ಮುತ್ತು ಗಡ್ಡಿ ಹೆಚ್ಚು ತೂಕದ ಕಲ್ಲನ್ನು ಎತ್ತುವ ಮೂಲಕ ಚಾಂಪಿಯನ್ ಪಟ್ಟ ಪಡೆದುಕೊಂಡರು. ಬಿಸನಾಳ ಗ್ರಾಮದ ರಿಯಾಜ ಜಮಾದಾರ ದ್ವಿತೀಯ, ಮೆಳ್ಳಿಗೇರಿಯ ಭೀಮಸಿ ಭಂಟನೂರ ತೃತೀಯ ಹಾಗೂ ಬನಹಟ್ಟಿಯ ರುದ್ರೇಶ ತಳವಾರ ಚತುರ್ಥ ಬಹುಮಾನ ಪಡೆದರು.

ಅತ್ಯಂತ ಸಾಹಸಮಯ ಸಂಗ್ರಾಣಿ ಕಲ್ಲು ಒತ್ತಿ ಎತ್ತುವ ಸ್ಪರ್ಧೆಯಲ್ಲಿ ಶಿವಾನಂದ ಜಾಡಣ್ಣವರ ಪ್ರಥಮ, ಗುಳೇದಗುಡ್ಡದ ವಿಠ್ಠಲ ಮನ್ನಿಕಟ್ಟಿ ದ್ವಿತೀಯ, ಹಳಗೇರಿಯ ಭೀಮಸೇನ ಮಲ್ನಾಡದ ತೃತೀಯ ಮತ್ತು ನಾಗೂರಿನ ಮುತ್ತಪ್ಪ ಕಡ್ಲಿಮಟ್ಟಿ ಚತುರ್ಥ ಬಹುಮಾನ ಪಡೆದು–ಕೊಂಡರು.

ಗೌಡರ ಓಣಿಯ ಬಸವೇಶ್ವರ ಗೆಳೆಯರ ಬಳಗ ಹಮ್ಮಿಕೊಂಡಿದ್ದ ಸ್ಪರ್ಧೆಯನ್ನು ಎಚ್.ಎಸ್.ಗುಲಗಂಜಿ ಹಾಗೂ ಮಾಜಿ ಸೈನಿಕ ಡಿ.ಎಸ್. ಕಂಬಳಿ ಉದ್ಘಾಟಿಸಿದರು. ಅತಿಥಿ–ಯಾಗಿದ್ದ ಬಸವರಾಜ ಬಿಲ್ಲಾರ ಮಾತನಾಡಿ, ಗ್ರಾಮೀಣ ಕ್ರೀಡೆಗಳು ನಶಿಸಿ ಹೋಗುತ್ತಿರುವ ವೇಳೆಯಲ್ಲೂ ಗೆಳೆಯರ ಬಳಗ ಇಂತಹ ಸ್ಪರ್ಧೆಗಳನ್ನು ಹಮ್ಮಿಕೊಳ್ಳುವ ಮೂಲಕ ದೇಶೀ ಕ್ರೀಡೆಗಳಿಗೆ ಜೀವ ತುಂಬಿದ್ದಾರೆ. ಯುವಕರು ದುಶ್ಚಟಗಳ ದಾಸರಾಗದೇ ಇಂತಹ ಸಾಹಸಮಯ ಕ್ರೀಡೆಗಳಲ್ಲಿ ಭಾಗವಹಿಸಬೇಕು ಎಂದರು.

ಬಹುಮಾನ ವಿತರಣಾ ಸಮಾರಂಭದಲ್ಲಿ ಹನಮಂತ ಈಟಿ, ರವಿ ಗುಲಗಂಜಿ, ಎಂ.ಆರ್.ಬಿಲ್ಲಾರ, ನೀಲಪ್ಪ ನೆರಕಿ, ಎಸ್.ಎಫ್.ಬಾರಡ್ಡಿ, ಎಚ್. ಎಸ್. ಗುಲಗಂಜಿ, ಎಸ್. ಎನ್.ನೆರಕಿ, ಎಸ್.ಎಂ.ಮಲಘಾಣ, ಎಚ್.ಬಿ.ಕೊಳ್ಳಪ್ಪನ್ನವರ, ಎಸ್. ಎನ್.ಗುಲಗಂಜಿ, ಎಸ್.ಬಿ.ಮಾಚಾ ಇದ್ದರು.

ಬೆಳಗಾವಿ, ವಿಜಯಪುರ, ಬಾಗಲಕೋಟೆ, ಚಿಕ್ಕೋಡಿ ಜಿಲ್ಲೆಗಳಿಂದ ಆಗಮಿಸಿದ್ದ ಅನೇಕ ಸಾಹಸಿಗರು ಸ್ಪರ್ಧೆಗಳಲ್ಲಿ ಭಾಗವಹಿಸಿದ್ದರು.

## ಶ್ರೀಸತ್ಯಾತ್ಮತೀರ್ಥರ ಪುರಪ್ರವೇಶ: ಐದು ದಿನ ಕೋಟೆನಗರಿಯಲ್ಲಿ ಕಾರ್ಯಕ್ರಮ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಡಿ.22– ಉತ್ತರಾದಿಮಠಾಧೀಶರಾದ ಶ್ರೀಸತ್ಯಾತ್ಮತೀರ್ಥ ಶ್ರೀಪಾದಂಗಳವರ ಪುರಪ್ರವೇಶವಾಗಿದ್ದು,

ರವಿವಾರದಿಂದ ಐದು ದಿನಗಳ ಕಾಲ ಮುದ್ರಧಾರಣೆ, ಪಾದಪೂಜೆ, ಮೂಲರಾಮದೇವರು, ದಿಗ್ವಿಜಯರಾಮದೇವರ

ಪೂಜೆ ಹಾಗೂ ಧಾರ್ಮಿಕ ಕಾರ್ಯಗಳು ಶ್ರೀಗಳಿಂದ ನೆರವೇರಲಿವೆ.

ಶನಿವಾರ ರಾತ್ರಿ ಮಳಖೇಡದಿಂದ ಆಗಮಿಸಿದ ಶ್ರೀಗಳನ್ನು ಭಕ್ತರು ನವನಗರದ ಉತ್ತರಾದಿಮಠದ ಬಳಿ

ಸ್ವಾಗತಿಸಿಕೊಂಡರು. ನಂತರ ಮಂಗಳಾರತಿ ನೆರವೇರಿಸಿ ಶ್ರೀಗಳು ಭಕ್ತರನ್ನು ಆಶೀರ್ವದಿಸಿದರು. ರವಿವಾರ ಬೆಳಗ್ಗೆ

ಕಿಲ್ಲಾ ಓಣಿಯಲ್ಲಿರುವ ಶ್ರೀ ಕೊತ್ತಲೇಶ ದೇವಸ್ಥಾನದಲ್ಲಿ ನೂರಾರು ಭಕ್ತರಿಗೆ ತಪ್ತಮುದ್ರಧಾರಣೆ ಮಾಡಿದ ಶ್ರೀಗಳು

ಮಧ್ಯಾಹ್ನ ವಿದ್ಯಾಗಿರಿಯ ಸುಧೀಂದ್ರ ಸೀಮಿಕೇರಿ ಅವರ ನಿವಾಸದಲ್ಲಿ ಮೂಲ ರಾಮದೇವರ ಪೂಜೆ ನೆರವೇರಿಸಿದರು.

ಉತ್ತರಾದಿಮಠದಲ್ಲಿ ಸಹಸ್ರಾರು ಭಕ್ತರಿಗೆ ಪ್ರಸಾದದ ವ್ಯವಸ್ಥೆ ಕಲ್ಪಿಸಲಾಗಿತ್ತು.

ರವಿವಾರ ಸಂಜೆ ನವನಗರದ ಕಿಲ್ಲಾ ವೆಂಕಟೇಶ ದೇವಸ್ಥಾನದಿಂದ ಉತ್ತರಾದಿಮಠದವರೆಗೆ ಭವ್ಯ ಶ್ರೀರಾಮದೇವರ

ಯಾತ್ರೆ ಜರುಗಿತು. ಅಲಂಕೃತ ಎತ್ತಿನಬಂಡೆಯಲ್ಲಿ ಶ್ರೀಸುಧಾ ಗ್ರಂಥವನ್ನು ಇರಿಸಲಾಗಿತ್ತು. ಹಿಂದೆ ಅಶ್ವಗಳ ಮೇಲೆ

ಶ್ರೀಜಯತೀರ್ಥರು, ಶ್ರೀರಘುವರ್ಯತೀರ್ಥರ ಭಾವಚಿತ್ರಗಳನ್ನು ಇರಿಸಿ ಮೆರವಣಿಗೆ ಮಾಡಲಾಯಿತು. ಅವುಗಳ ಜತೆಗೆ

ಶ್ರೀಸತ್ಯಾತ್ಮತೀರ್ಥರು ಹೆಜ್ಜೆ ಹಾಕುತ್ತ ಬಂದಾಗ ಪುಷ್ಪವೃಷ್ಠಿಗೈಯ್ಯಲಾಯಿತು.

ಭಜನಾ ಮಂಡಳಿಗಳ ಸದಸ್ಯರು ದಾಸರ ಪದಗಳನ್ನು ಹಾಡುತ್ತ ಹೆಜ್ಜೆ ಹಾಕಿದರು. ಸತ್ಯಾತ್ಮತೀರ್ಥರನ್ನು ಯುವಕರು

ಜಯಘೋಷಗಳ ಮೂಲಕ ಶ್ರೀಮಠಕ್ಕೆ ಕರೆ ತಂದರು. ನಂತರ ಶ್ರೀಗಳು ಆಶೀರ್ವಚನ ನೀಡಿದರು.

ಪಂ.ರಘೋತ್ತಮಾಚಾರ್ಯನಾಗಸಂಪಿಗೆ, ಪಂ.ಭೀಮಸೇನಾಚಾರ್ಯ ಪಾಂಡುರಂಗಿ, ಪಂ.ಬಿಂದುಮಾಧವಾಚಾರ್ಯ

ನಾಗಸಂಪಿಗೆ ಅವರು ಕಾರ್ಯಕ್ರಮದ ನೇತೃತ್ವ ವಹಿಸಿದ್ದರು.

## ಜನೆವರಿ 11 ಮತ್ತು 12 ರಂದು : ವಿಭಾಗ ಮಟ್ಟದ ತತ್ವಪದಕಾರರ ಸಮಾವೇಶ ಮತ್ತು ಭಜನೆ ಸ್ಪರ್ದೆ



ಮಲ್ಲಮ್ಮ ನುಡಿ ವಾರ್ತೆ

ಬೀದರ್ ಡಿ. 22ಃ ಕಲ್ಯಾಣ ಕರ್ನಾಟಕ ಕಲಾವಿದರ ಒಕ್ಕೂಟದಿಂದ ಮುಂಬರುವ 2025ರ ಜನೆವರಿ 11 ಮತ್ತು 12 ರಂದು ಬೀದರ ನಗರದ ಪೂಜ್ಯ ಶ್ರೀ ಡಾ॥ ಚನ್ನಬಸವ ಪಟ್ಟದೇವರ ಜಿಲ್ಲಾ ರಂಗಮಂದಿರದಲ್ಲಿ ನಡೆಯಲಿರುವ ವಿಭಾಗ ಮಟ್ಟದ ತತ್ವಪದಕಾರರ ಸಮಾವೇಶ ಮತ್ತು ಭಜನೆ ಸ್ಪರ್ದೆ ಕಾರ್ಯಕ್ರಮಗಳ ಸ್ವಾಗತ ಸಮಿತಿಯ ಅಧ್ಯಕ್ಷರನ್ನಾಗಿ ಖ್ಯಾತ ಉದ್ಯಮಿ, ಬಸವತತ್ವ ಚಿಂತಕರು, ಸಮಾಜ ಸೇವಕರು, ದಿ ಗ್ರೇನ್ ಐಂಡ್ ಸೀಡ್ಸ್ ಮರ್ಚಂಟ್ಸ್ ಅಸೋಶಿಯೆಶನ್ ಜಿಲ್ಲಾಧ್ಯಕ್ಷರಾದ ಬಸವರಾಜ ಧನ್ನೂರ್ ಅವರನ್ನು ನೇಮಕ ಮಾಡಲಾಗಿರುವುದು.


ಒಕ್ಕೂಟದ ಕೇಂದ್ರ ಸಮಿತಿಯ ಗೌರವ ಅಧ್ಯಕ್ಷರು ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಡಾ॥ ಮಾತಾ ಬಿ. ಮಂಜಮ್ಮ ಜೋಗುತಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಬಸವರಾಜ ಧನ್ನೂರ ಅವರನ್ನು ಸ್ವಾಗತ ಸಮಿತಿಯ ಅಧ್ಯಕ್ಷರನ್ನಾಗಿ ಮಾಡಲು ನಿರ್ಣಯಿಸಲಾಗಿತ್ತು, ಅದರಂತೆ ಇಂದು ಅವರಿಗೆ ಸ್ವಾಗತಿಸಲಾಯಿತು.

ಕಲ್ಯಾಣ ಕರ್ನಾಟಕ ಕಲಾವಿದರ ಒಕ್ಕೂಟದ ಸಂಸ್ಥಾಪಕ ಅಧ್ಯಕ್ಷರಾದ ವಿಜಯಕುಮಾರ ಸೋನಾರೆ ಅವರ ನೇತೃತ್ವದಲ್ಲಿ ಧನ್ನೂರ ಅವರ ನಿವಾಸಕ್ಕೆ ತೆರಳಿ ಅವರ ಒಪ್ಪಿಗೆ ಪಡೆದು ಸನ್ಮಾನಿಸಿ, ಗೌರವಿಸಿ ಸ್ವಾಗತಿಸಲಾಯಿತು. ನಂತರ ಮಾನತಾಡಿದ ಬಸವರಾಜ ಧನ್ನೂರ ಅವರು ನಮ್ಮ ಭವ್ಯ ಭಾತರದ ಸಂಸ್ಕೃತಿ, ಪರಂಪರೆ, ಸಂಸ್ಕಾರ, ಜಾನಪದ, ತತ್ವಪದ ಹಾಡುಗಾರಿಕೆ ಅಳಿಸಿಹೊಗುತ್ತಿರುವ ಸಂದರ್ಭದಲ್ಲಿ ಅವುಗಳಿಗೆ ಸಂರಕ್ಷಿಸಿ ಇಂದಿನ ಯುವ ಶಕ್ತಿ ಪಡೆಗೆ ಅರುಹಿ ಸುಂದರ ಸುಭದ್ರ ಸಮಾಜ ನಿರ್ಮಿಸುವಂತಾಗಲು ಒಕ್ಕೂಟದ ಈ ಕಾರ್ಯಕ್ರಮಗಳು ದೇಶಕ್ಕೆ ಮಾದರಿಯಾಗಲಿವೆ ಎಂದು ಹೇಳಿದರು.

ವಿಜಯಕುಮಾರ ಸೋನಾರೆ ಮಾತನಾಡಿ, ಏಳು ಜಿಲ್ಲೆಗಳ ಕಲಾವಿದರು ಈ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ತತ್ವಪದ, ಭಜನೆ ಮತ್ತು ಜಾನಪದ ಗೀತೆಗಳನ್ನು ಹಾಡಲಿದ್ದಾರೆ. ಭಜನೆ ಸ್ಪರ್ದೆಯಲ್ಲಿ ಕಡಕೋಳ ಮಡಿವಾಳಪ್ಪ, ಸಂತ ಶಿಶುನಾಳ ಶರೀಫರು ಕನಕದಾಸರು ಮತ್ತು ಪುರಂದರದಾಸರುಗಳು ರಚಿತ ಸಾಹಿತ್ಯದ ಹಾಡುಗಳನ್ನು ಮಾತ್ರ ಈ ಸ್ಪರ್ದೆಯಲ್ಲಿ ಕಲಾವಿದರು ಹಾಡಬೇಕು. ಸ್ಪರ್ದೆಯ ಪ್ರಥಮ ವಿಜೇತ ತಂಡಕ್ಕೆ 50 ಸಾವಿರ ರೂಪಾಯಿ, ದ್ವಿತಿಯ ತಂಡಕ್ಕೆ 25 ಸಾವಿರ ಮತ್ತು ತೃತಿಯ ಸ್ಥಾನ ಪಡೆಯುವ ತಂಡಕ್ಕೆ 15 ಸಾವಿರ ರೂಪಾಯಿ ನಗದು ಬಹುಮಾನ ನೀಡಲಾಗುವುದು ಎಂದು ತಿಳಿಸದ ಅವರು ಹಿಂದಿನಿಂದಲೂ ಭಜನೆ ಪದಗಳು ಹಿರಿಯ ಕಲಾಜೀವಿಗಳು ಹಾಡುತ್ತಲೇ ಬಂದಿದ್ದಾರೆ. ಅವರುಗಳಲ್ಲಿ ಅದೇಷ್ಟೋ ಸಂಖ್ಯೆಯಲ್ಲಿ ಮರೆಯಾಗಿದ್ದಾರೆ. ಅಳಿದುಳಿದ ಕಲಾವಿದರಿಗೆ ಪ್ರೋತ್ಸಾಹ ನೀಡಿ ಇಂದಿನ ಯುವ ಕಲಾವಿದರು ಪ್ರೇರಣೆಗೊಂಡು ಭಜನೆ ಹಾಡುಗಳನ್ನು ಹಾಡುವಂತೆ ಮಾದರಿಯನ್ನಾಗಿ ಮಾಡುವ ಈ ಕಾರ್ಯಕ್ರಮಗಳ ಉದ್ದೇಶವಾಗಿದೆ ಎಂದರು.

ಈ ಸಂದರ್ಭದಲ್ಲಿ ಪೃಥ್ವಿರಾಜ್ ಎಸ್, ಸುನೀಲಕುಮಾರ ಕುಲಕರ್ಣಿ, ನಾಗಶೆಟ್ಟಿ ಧರಮಪೂರ್, ಸುನೀಲ ಭಾವಿಕಟ್ಟಿ, ಸೇರಿದಂತೆ ಇತರರು ಇದ್ದರು.

## 2ನೇ ದಿನದ ತೋಟಗಾರಿಕೆ ಮೇಳ– ಫಲಶ್ರೇಷ್ಠ ರೈತರಿಗೆ ಸನ್ಮಾನ ರೈತರಲ್ಲಿ ಹೊಸ ಅವಿಷ್ಕಾರಗಳ ಕಲ್ಪನೆ ಅಗತ್ಯ : ಭಾಂಡಗೆ




ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಡಿ.22–ರೈತರಿಗೆ ಅನೇಕ ರೀತಿಯ ಹೊಸ ಹೊಸ ಅವಿಷ್ಕಾರಗಳ ಬಗ್ಗೆ ಕಲ್ಪನೆ ಕೊಟ್ಟು ಇಳುವರಿ ಹೆಚ್ಚಿನ ಪ್ರಮಾಣ ಪಡೆದು ಆರ್ಥಿಕವಾಗಿ ಬಲಿಷ್ಟವಾಗುವಂತೆ ಮಾಡುವ ಕೆಲಸವನ್ನು ತೋಟಗಾರಿಕೆ ವಿಶ್ವವಿದ್ಯಾಲಯ ಮಾಡಬೇಕೆಂದು ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ ಹೇಳಿದರು.

ತೋಟಗಾರಿಕೆ ವಿವಿಯ ಉದ್ಯಾನಗಿರಿಯಲ್ಲಿ ಹಮ್ಮಿಕೊಂಡ ತೋಟಗಾರಿಕೆ ಮೇಳದ ಎರಡನೇ ದಿನದ ಕಾರ್ಯಕ್ರಮದಲ್ಲಿ 8 ಜಿಲ್ಲೆಯ ಫಲಶ್ರೇಷ್ಠ ರೈತರನ್ನು ಸನ್ಮಾನಿಸಿ ಮಾತನಾಡಿದ ಅವರು, ವಿಜ್ಞಾನಿಗಳು ಅವಿಷ್ಕಾರ ಮಾಡಿ ಹೊರತಂದ ಅನೇಕ ವಿಧದ ತಳಿಗಳು, ಅವಿಷ್ಕಾರಗಳನ್ನು ನೋಡಿ ತಿಳಿದುಕೊಂಡು ಅವುಗಳ ಕಲ್ಪನೆ ಮೂಡಿದಾಗ ಮಾತ್ರ ತೋಟಗಾರಿಕೆ ಮೇಳ ಏರ್ಪಡಿಸಿದ್ದಕ್ಕೆ ಸಾರ್ಥಕ ಪಡೆದುಕೊಳ್ಳುತ್ತದೆ. ಇದರಿಂದ ರೈತನ ಸಮಗ್ರ ಬೇಸಾಯ ಪದ್ಧತಿಯಿಂದ ಆರ್ಥಿಕವಾಗಿ ಮುಂದೆ ಬರಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಕೀಟಗಳನ್ನು ನಾಶ ಮಾಡಲು ಕೀಟನಾಶಕ ಔಷಧಿಗಳ ಸಿಂಪರಣೆ ಮಾಡುತ್ತೇವೆ. ಆದರೆ ಎಲ್ಲ ಕೀಟಗಳು ಬೆಳೆಗಳನ್ನು ನಾಶ ಮಾಡುವದಿಲ್ಲ. 100ಕ್ಕೆ 99 ರಷ್ಟು ಕೀಟಗಳು ರೈತ ಮಿತ್ರವಾಗಿರುತ್ತವೆ. ಪ್ರತಿಶತ ಒಂದರಷ್ಟು ಕೀಟಗಳು ಮಾತ್ರ ಬೆಳೆಗಳನ್ನು ನಾಶ ಮಾಡುತ್ತವೆ. ರೈತ ಏನೆಲ್ಲಾ ಸಾಧಿಸಬಹುದು ಎಂಬುದರ ವಿಶ್ವಾಸ ಮೂಡಿಸುವ ಕಾರ್ಯ ತೋಟಗಾರಿಕೆ ವಿಶ್ವವಿದ್ಯಾಲಯ ಮಾಡುತ್ತಿದೆ. ತೋಟಗಾರಿಕೆ ವಿಶ್ವವಿದ್ಯಾಲಯ ಇನ್ನು ಹೆಚ್ಚಿನ ಸಂಶೋಧನೆ ನಡೆಸಲಿ ಕೇಂದ್ರ ಸರಕಾರದಿಂದ ಏನೇನು ಬೇಕು ಅವುಗಳನ್ನು ಕೊಡಿಸುವ ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಭಾಂಡಗೆ ಹೇಳಿದರು.

ವಿಧಾನ ಪರಿಷತ್ ಶಾಸಕ ಪಿ.ಎಚ್.ಪೂಜಾರ ಮಾತನಾಡಿ, ಬಯಲು ಸೀಮೆ ಎನಿಸಿರುವ ಬಾಗಲಕೋಟೆ ಜಿಲ್ಲೆ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ತೆ–ೂಟಗಾರಿಕೆ ವಿಶ್ವವಿದ್ಯಾಲಯ ಈ ಭಾಗದ ಹೆಮ್ಮೆಯ ಕೊಡುಗೆ–ಯಾಗಿದ್ದು, ಕೃಷಿ ಪ್ರಧಾನವಾಗಿರುವ ಬಾಗಲಕೋಟೆ ಹಾಗೂ ಉತ್ತರ ಕನ್ನಡ ಭಾಗದ ಅನೇಕ ಜಿಲ್ಲೆಗಳಲ್ಲಿ ಇನ್ನು ಮುಂದೆ ವಿಫುಲವಾಗಿ ತೋಟಗಾರಿಕೆ ಬೆಳೆ ಬೆಳೆಯಲು ಸಹಕಾರಿಯಾಗಲಿದೆ ಎಂದು ತಿಳಿಸಿದರು.

ಬಾಗಲಕೋಟೆ–ವಿಜಯಪುರ ಜಿಲ್ಲೆಗಳ ನೆಲದಲ್ಲಿ ಅಧಿಕ ಪ್ರಮಾಣದ ದಾಳಿಂಬೆ, ಮಾವು, ದ್ರಾಕ್ಷಿ, ಚಿಕ್ಕು ಹಣ್ಣುಗಳ ಬೆಳೆಗಳಿಗೆ ಹೇಳಿ ಮಾಡಿಸಿದ ನೆಲ ಇಲ್ಲಿದ್ದು, ಕೃಷ್ಣಾ ಮೇಲ್ದಂಡೆ ಯೋಜನೆ ಅಡಿಯ ಹಿನ್ನೀರು ರೈತರಿಗೆ ವರದಾನವಾಗಿದೆ. ಈ ಭಾಗದಲ್ಲಿ ದಾಳಿಂಬೆ ಬೆಳೆಗೆ ವಿಫುಲ ಅವಕಾಶ ದೊರಕಿಸಿಕೊಡಬೇಕಾಗಿದೆ. ಇಲ್ಲಿ ಕಾರ್ಯನಿರ್ವಹಿಸುತ್ತಿರುವ ತೋಟಗಾರಿಕೆ ವಿವಿಯಲ್ಲಿ ಜಗತ್ತಿನಲ್ಲಿ ಬೆಳೆಯಬಹುದಾದ ಎಲ್ಲ ತರಹದ ಹೂ, ಹಣ್ಣುಗಳನ್ನು ಬೆಳೆಯುವಂತಾಗಿ ಈ ಭಾಗದ ರೈತ ಆರ್ಥಿಕವಾಗಿ ಪ್ರಭಲವಾಗಿ ಬೆಳೆಯವಂತಾಗಬೇಕು ಎಂದರು.

ಈ ಸಂದರ್ಭಧಲ್ಲಿ ತೆ–ೂಟಗಾರಿಕೆ ಮೇಳದ ಮಾಹಿತಿಯನ್ನು ತ್ವರಿತವಾಗಿ ನೀಡುವ ಜಾಲತಾಣಗಳ ಕ್ಯೂಆರ್ ಕೋಡಗಳನ್ನು ಬಿಡುಗಡೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ತೋಟಗಾರಿಕೆ ವಿವಿಯ ಕುಲಪತಿ ಡಾ.ವಿಷ್ಣುವರ್ಧನ, ವಿಸ್ತರಣಾ ನಿರ್ದೇಶಕ ಡಾ.ಟಿ.ಬಿ.ಅಳ್ಳೊಳ್ಳಿ, ಡೀನ್ ಸ್ನಾತ–ಕೋತ್ತರ ಡಾ.ಲಕ್ಷ್ಮೀನಾರಾಯಣ ಹೆಗಡೆ, ಶಿವಮೊಗ್ಗ ಕೃಷಿ ಮತ್ತು ತೋಟಗಾರಿಕೆ ವಿವಿಯ ಕುಲಪತಿ ಡಾ.ಆರ್.ಸಿ.ಜಗದೀಶ, ಬೆಂಗಳೂರಿನ ಕೃವಿವಿಯ ಸಂಶೋಧನಾ ನಿರ್ದೇಶಕ ಡಾ.ಎಚ್.ಎಸ್.ಶಿವರಾಮು, ಧಾರವಾಡ ಕೃವಿವಿಯ ವಿಸ್ತರಣಾ ನಿರ್ದೇಶಕ ಡಾ.ಬಸವರಾಜಪ್ಪ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಬೇವೂರ ಗ್ಯಾನಪ್ಪಜ್ಜನ ಕ್ಷೇತ್ರ ಅಭಿವೃದ್ದಿಗೆ ಸಹಕಾರ–ಜನಾರ್ಧನರೆಡ್ಡಿ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಡಿ.22–ಬೇವೂರಿನ ಗ್ಯಾನಪ್ಪಜ್ಜನ ಮಠ ಸರ್ವೋತ್ತಮವಾಗಿ ಬೆಳೆಯಲಿ ಅದಕ್ಕೆ ಬೇಕಾದ ಸಹಾಯ ಸಹಕಾರ ನೀಡುವೆ ಎಂದು ಗಂಗಾವತಿ ಶಾಸಕ ಗಾಲಿ ಜನಾರ್ಧನರೆಡ್ಡಿ ಹೇಳಿದರು.

ತಾಲೂಕಿನ ಬೇವೂರ ಗ್ರಾಮದಲ್ಲಿ ಶ್ರೀ ಗ್ಯಾನಪ್ಪಜ್ಜನವರ ಕಾರ್ತಿಕೋತ್ಸವ ಅಂಗವಾಗಿ ಲಿಂ. ಪೂಜ್ಯ ಶ್ರೀಮುದಿಯಪ್ಪಜ್ಜನವರ ಬೆಳ್ಳಿ ಮೂರ್ತಿಯ ಪ್ರತಿಷ್ಠಾನ ಹಾಗೂ ಪೂಜ್ಯಶ್ರೀ ಗ್ಯಾನಪ್ಪಜ್ಜನವರ ಪಟ್ಟಾಧಿಕಾರದ ಸುವರ್ಣ ಮಹೋತ್ಸವದ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಈ ಭಾಗದಲ್ಲಿ ಧಾರ್ಮಿಕತೆಯ ಬೆಳವಣಿಗೆಯೊಂದಿಗೆ ಜನರ ಬೇಕು ಬೇಡಿಕೆಗಳಿಗೆ ಮಾರ್ಗದರ್ಶನ ಮಾಡುವ ಮೂಲಕ ಆಸರೆಯಾಗಿರುವ ಈ ಮಠದ ಪೂಜ್ಯರ ಕಾರ್ಯ ಶ್ಲಾಘನೀಯವಾಗಿದ್ದು, ಈ ಮಠದ ಬೆಳವಣಿಗೆಗೆ ಬೇಕಾಗುವ ಸಹಾಯ ಸಹಕಾರ ನೀಡುವೆ ಎಂದ ಅವರು ಹೇಳಿದರು.

2028ರಲ್ಲಿ ಜನರ ಆಶೀರ್ವಾದದಿಂದ ವೀರಣ್ಣ ಚರಂತಿಮಠ ಮತ್ತೆ ಶಾಸಕರಾಗುವುದು ನಿಶ್ಚಿತ. ಹಿಂದೆ ಬೇವೂರಿನಲ್ಲಿ 2ಕೋಟಿ ರೂ ವೆಚ್ಚದಲ್ಲಿ ಯಡಿಯೂರಪ್ಪ ಸಿ.ಎಂ ಆಗಿದ್ದಾಗ ಜಿ.ಜಿ.ಬೇವೂರ ಅವರ ಸ್ಮಾರಕ ಮಾಡಬೇಕೆಂದು ಎಲ್ಲವನ್ನು ರೆಡಿಮಾಡಿಕೊಂಡಿದ್ದರು, ಕೊನೆ ಹಂತದಲ್ಲಿ ನಮ್ಮ ಸರಕಾರ ಕೈತಪ್ಪಿತು. ಅದು ನಿಂತು ಹೋಯಿತು ಎಂದ ಜನಾರ್ಧನರೆಡ್ಡಿ, ಮುಂದಿನ ದಿನಗಳಲ್ಲಿ ವೀರಣ್ಣ ಚರಂತಿಮಠ ಮತ್ತು ನಾವು ಸೇರಿ 2ಕೋಟಿ ವೆಚ್ಚದಲ್ಲಿ ಜನರಲ್ ಜಿ.ಜಿ.ಬೇವೂರ ಅವರ ಸ್ಮಾರಕ ಹಾಗೂ ಕೋಟ್ಯಾಂತರ ರೂ ವೆಚ್ಚದಲ್ಲಿ ಕಲ್ಯಾಣ ಮಂಟಪ ಮತ್ತು ಭಕ್ತಾಧಿಗಳಿಗಳಿಗೆ ಎಲ್ಲ ರೀತಿಯ ಸೌಲಭ್ಯ ಮಾಡಿಕೊಡುವುದಾಗಿ ಭರವಸೆಯನ್ನು ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಸಿದ್ದ ಮಾಜಿ ಶಾಸಕ ಡಾ.ವೀರಣ್ಣ ಚರಂತಿಮಠ ಮಾತನಾಡಿ, ಕಳೆದ 50 ವರ್ಷಗಳಿಂದ ಬೇವೂರಿನ ಗ್ಯಾನಪ್ಪಜ್ಜನವರ ತಮ್ಮ ಹೇಳಿಕೆ ಮೂಲಕ ಭಕ್ತರಿಗೆ ಮಾರ್ಗದರ್ಶನ ಮಾಡುತ್ತಾ ಅವರ ಬದು–ಕಿಗೆ ದಾರಿ ದೀಪವಾಗಿದ್ದಾರೆ, ಪ್ರತಿವರ್ಷ ಕಾರ್ತಿಕೋತ್ಸವ ಹಾಗೂ ಸಾಮೂಹಿಕ ವಿವಾಹಗಳು ಮತ್ತು ಧಾರ್ಮಿಕ ಚಟುಚಟಿಕೆಗಳನ್ನು ಮಾಡುತ್ತಾ ಬಂದಿದ್ದಾರೆ, ಈ ಕ್ಷೇತ್ರದ ಅಭಿವೃದ್ಧಿಗಾಗಿ ಎಲ್ಲರೂ ಸಹಕರಿಸೋಣ ಎಂದರು.

ಸಮಾರಂಭದ ನೇತೃತ್ವವನ್ನು ಪೂಜ್ಯ ಗ್ಯಾನಪ್ಪಜ್ಜನವರು ವಹಿಸಿದ್ದರು. ಸಾನಿಧ್ಯವನ್ನು ಬಿಲ್‌ಕೆರೂರಿನ ಬಿಲ್ವಾಶ್ರಮದ ಸಿದ್ದಲಿಂಗ ಶಿವಾಚಾರ್ಯ ಶ್ರೀಗಳು ವಹಿಸಿದ್ದರು, ಮುಖ್ಯ ಅತಿಥಿಗಳಾಗಿ ನಗರಸಭೆ ಅಧ್ಯಕ್ಷ ಸವಿತಾ ಲೆಂಕೆನ್ನವರ, ಅಶೋಕ ಸಜ್ಜನ, ಮಹೇಶ ಪಾಟೀಲ, ರಾಜು ನಾಯ್ಕರ, ರಾಜು ಮುದೆನೂರ, ಸುರೇಶ ಕೊಣ್ಣುರ, ನಿಂಗಪ್ಪ ಮಾಗನೂರ, ಶಿವು ವಾಡಕರ ಸೇರಿದಂತೆ ಅನೇಕರು ಇದ್ದರು.

## ದೋಣಿ ಮುಗುಚಿ 38 ಸಾವು, 100 ಮಂದಿ ನಾಪತ್ತೆ

ಮಲ್ಲಮ್ಮ ನುಡಿ ವಾರ್ತೆ

ನವದೆಹಲಿ ,ಡಿ.22–ಕಾಂಗೋದ ಬುಸಿರಾ ನದಿಯಲ್ಲಿ ಮತ್ತೊಂದು ಭಾರೀ ದೋಣಿ ಅಪಘಾತ ಸಂಭವಿಸಿದೆ. ಕ್ರಿಸ್‌ಮಸ್ ಆಚರಣೆಗೆಂದು ಮನೆಗೆ ತೆರಳುತ್ತಿದ್ದ ಜನರಿದ್ದ ದೋಣಿಯೊಂದು ದಿಢೀರ್ ಮಗುಚಿ ಬಿದ್ದಿದೆ ಎಂದು ಹೇಳಲಾಗುತ್ತಿದೆ. ಇದರಲ್ಲಿ 38 ಮಂದಿ ಸಾವನ್ನಪ್ಪಿದ್ದಾರೆ. 100ಕ್ಕೂ ಹೆಚ್ಚು ಮಂದಿ ನಾಪತ್ತೆಯಾಗಿದ್ದಾರೆ. ದೋಣಿಯಲ್ಲಿ 400 ಕ್ಕೂ ಹೆಚ್ಚು ಪ್ರಯಾಣಿಕರು ಇದ್ದರು ಎನ್ನಲಾಗಿದೆ.

# ತೊಗರಿಗೆ 12 ಸಾವಿರ ಬೆಂಬಲ ಬೆಲೆ ಘೋಷಣೆಗೆ: ಮಲ್ಲನಗೌಡ ಆಗ್ರಹ

(ಮಲ್ಲಿಕಾರ್ಜುನ್ ಮಳಿಕೇರಿ)

ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ : ತೊಗರಿ ಬೆಳೆಗೆ 12 ಸಾವಿರ ರೂಪಾಯಿಗಳ ಬೆಂಬಲ ಬೆಲೆ ಘೋಷಣೆ ಮಾಡುವಂತೆ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಯಾದಗಿರಿ ಜಿಲ್ಲಾ ಅಧ್ಯಕ್ಷರಾದ ಮಲ್ಲನಗೌಡ ಹಗರಟಗಿ ರಾಜ್ಯ ಸರ್ಕಾರ-ಕ್ಕೆ ಆಗ್ರಹಿಸಿದ್ದಾರೆ. ಯಾದಗಿರಿ ಜಿಲ್ಲೆಯಲ್ಲಿ ರೈತರು ಅತಿ ಹೆಚ್ಚು ತೊಗರಿ ಬೇಳೆ ಬೆಳದಿದ್ದು ಅದಕ್ಕೆ ತಕ್ಕ ಬೆಲೆ ಸಿಗದೆ ರೈತರು ತೀವ್ರ ಕಂಗಾಲಾಗಿದ್ದಾರೆ ಸರ್ಕಾರ ರೈತರ ನೆರವಿಗೆ ಧಾವಿಸಬೇಕು ಈಗಾಗಲೆ ತೊಗರಿ ಬೇಳೆಗೆ ನೇಟೆ ರೋಗ ಬಿದ್ದು ಇಳುವರಿ ತುಂಬಾ ಕಡಿಮೆ ಬರುವ ನಿರೀಕ್ಷೆ ಇದೆ ಇನ್ನೂ ಕೆಲವು ತೊಗರಿ ಬೆಳೆಗಳು ಫಲ ಆಗಾದೆ



ಒಣಗಿ ನಿಂತಿವೆ ರೈತರ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದು ರಾಸಾಯನಿಕ ಗೊಬ್ಬರ ಕ್ರಿಮಿನಾಶಕಗಳ ತೈಲದ ಬೆಲೆ ಕೂಲಿ ಕಾರ್ಮಿಕರ ಕೂಲಿ ದರವು ದಿನೆ ದಿನೆ ಹೆಚ್ಚಾಗುತ್ತಿದ್ದು ಇದರಿಂದ ರೈತರು ತುಂಬಾ ಸಂಕಷ್ಟದಲ್ಲಿದ್ದಾರೆ ಆದರೆ ರೈತ ಬೆಳೆದ ಬೆಳೆಗೆ ಮಾತ್ರ ಸರಿಯಾದ ಬೆಲೆ ಸಿಗುತ್ತಿಲ್ಲ ಇದರೆ ಬಗ್ಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರ ಮಧ್ಯಪ್ರವೇಶಿಸಿ ರೈತರಿಗೆ ಬೆಂಬಲ ಬೆಲೆಯಡಿ ಪ್ರತಿ ಕ್ವಿಂಟಾಲ್ ಗೆ ಕನಿಷ್ಠ 12 ಸಾವಿರ ರೂಪಾಯಿಗಳ ನಿಗದಿ ಪಡಿಸಬೇಕು ಒಂದು ವೇಳೆ ನಿರ್ಲಕ್ಷ ವಹಿಸಿದ್ದಲ್ಲಿ ರಾಜ್ಯ ರೈತ ಸಂಘ ಹಸಿರು ಸೇನೆ ವತಿಯಿಂದ ಉಗ್ರಹೋರಾಟ ಮಾಡುವುದಾಗಿ ಜಿಲ್ಲಾಧ್ಯಕ್ಷರಾದ ಮಲ್ಲನಗೌಡ ಹಗರಟಗಿ, ಸುರಪುರ ತಾಲೂಕ ಅಧ್ಯಕ್ಷ ಮುತ್ತುಗೌಡ, ಯಾದಗಿರಿ ತಾಲೂಕ ಅಧ್ಯಕ್ಷರಾದ ಮಹಿಪಾಲ ರೆಡ್ಡಿ ಪಾಟೀಲ್ , ಶಹಾಪುರ ತಾಲೂಕ ಅಧ್ಯಕ್ಷರಾದ, ವಡಗೇರಾ ತಾಲೂಕು ಅಧ್ಯಕ್ಷ ವಿದ್ಯಾಧರ್ ಜಾಕ,ದೇವಿಂದ್ರಪ್ಪ ಕೋಲಕರ್ ,ಶಿವಶಂಕರ ರೆಡ್ಡಿ ನಗನೂರ, ಬಂದೇನವಾಜ್ ಯಾಳಗಿ,ಶರಣು ಜಡಿ ಹಾಗೂ ಇನ್ನಿತರರು ಸರಕಾರಕ್ಕೆ ಎಚ್ಚರಿಸಿದ್ದಾರೆ.

### ಭಾಲ್ಕಿ ಪುರಸಭೆ ಮುಖ್ಯಾಧಿಕಾರಿಗಳು ಕಾನೂನುಬಾಹಿರವಾಗಿ ನನ್ನ ಗೋಡೆ ಕಂಪೌಂಡ್ ಒಡೆಸಿದ್ದಾರೆ

# ನ್ಯಾಯ ಸಿಗದಿದ್ದರೆ ವಿಷ ಸೇವಿಸುವೆ: ಯಾದವರಾವ ಕನಸೆ

ಮಲ್ಲಮ್ಮ ನುಡಿ ವಾರ್ತೆ

ಬೀದರ. ಡಿ. 22 :- ಭಾಲ್ಕಿ ಪುರಸಭೆ ಮುಖ್ಯಾಧಿಕಾರಿ ಸಂಗಮೇಶ ಕಾರಬಾರಿ ಅವರು ನಮ್ಮ ಬಯಲು ನಿವೇಶನಕ್ಕೆ ಕಟ್ಟಿಸಲಾದ ಗೋಡೆ ಕಂಪೌಂಡೆ ಕಾನೂನುಬಾಹಿರವಾಗಿ ಒಡೆಸಿದ್ಧಾರೆ. ಕಾರಬಾರಿ ಅವರು ನನಗೆ ಒಂದು ಲಕ್ಷ ಹಣ ನೀಡಲು ಲಂಚದ ಬೇಡಿಕೆ ಇಟ್ಟಿದ್ದರು. ಕೊಡದೇ ಇದ್ದುದಕ್ಕೆ ಭಾಲ್ಕಿಯ ಬಾಲಾಜಿನಗರದಲ್ಲಿರುವ ನಮ್ಮ ನಿವೇಶನಕ್ಕೆ ನಿರ್ಮಿಸಲಾದ ಕಂಪೌಂಡ್ ಗೋಡೆ ಒಡೆಸಿದ್ದಾರೆ. ನಮಗೆ ನ್ಯಾಯ ಸಿಗದಿದ್ದರೆ ವಿಷ ಸೇವಿಸುವೆ ಎಂದು ನಿವೇಶನದ ಮಾಲಿಕ ಯಾದವರಾವ ಕನಸೆ ತಿಳಿಸಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಭಾನುವಾರ ಕ-ರೆದ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು ಪುರಸಭೆ ಮುಖ್ಯಾಧಿಕಾರಿ ಸಂಗಮೇಶ ಕಾರಬಾರಿ ಜನಸಾಮಾನ್ಯರಿಗೆ ಲಂಚದ ಬೇಡಿಕೆಟ್ಟು ಸಾಕಷ್ಟು ತೊಂದರೆ ಕೊಡುತ್ತಿದ್ದಾರೆ. ಇದ-ರಿಂದ ಪುರಸಭೆಯ ಗೌರವ ಘನತೆ ಕ್ಷೀಣಿಸುತ್ತಾ ಬರುತ್ತಿದೆ. ಆದ್ದರಿಂದ ಕಾರಬಾರಿ ಅವರಿಗೆ ಭಾಲ್ಕಿಯಿಂದ ವರ್ಗಾವಣೆ ಮಾಡಬೇಕು. ಇಲ್ಲ ಅವರ ಮೇಲೆ ಸರ್ಕಾರ ಕಾನೂನಿನ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. 71 ವರ್ಷ ಹಿರಿಯ ವಯಸ್ಸಿನವನಾದ ನಾನು ಈ ಘಟನೆಯಿಂದ ಘಾಸಿಗೊಂಡಿದ್ದೇನೆ ಎಂದು ನಿವೇಶನದ ಮಾಲಿಕರಾದ



ತಾದವರಾವ ಕನಸೆ ತಿಳಿಸಿದರು.

ನನ್ನ ಹೆಸರಿನ ಮೇಲೆ ಭಾಲ್ಕಿಯ ಬಾಲಾಜಿನಗರದಲ್ಲಿ 90*75 ಅಳತೆಯ ನಿವೇಶನ 2017ರಲ್ಲಿ ನೊಂದಣಿಯಾಗಿದೆ. ಅಲ್ಲಿ ಕಟ್ಟಡ ನಿರ್ಮಾಣ ಮಾಡಲು ನೀಡಿದ ಅನುಮತಿ ಪತ್ರ ಕೂಡಾ ನಮ್ಮಲ್ಲಿದೆ. ಆದರೆ ಹಿಂದೆ ಯಾರು ಅನುಮತಿ ಕೊಟ್ಟಿದ್ದಾರೋ ನಮಗೆ ಗೊತ್ತಿಲ್ಲ. ಈಗ ಗಣಕೀಕರಣ ಅನುಮತಿ ಪಡೆಯಬೇಕು. ಒಂದು ಲಕ್ಷ ಹಣ ಕೊಡಿ ಎಂದು ಬೇಡಿಕೆ ಇಟ್ಟಿದ್ದಾರೆ. ಹಣ ನೀಡದೇ ಇದ್ದುದಕ್ಕೆ ನಿವೇಶನದ ಮಾಲಿಕರಿಗೆ ಯಾವುದೇ ನೋಟೀಸ್ ನೀಡದೆ ಡಿ. 21 ರಂದು ಬೆಳಿಗ್ಗೆ 7 ಗಂಟೆಗೆ ಹೇಳದೆ ಕೇಳದೆ ಕಾರಬಾರಿಯವರು ಕಂಪೌಂಡೆ ಒಡೆಸಿದ್ದಾರೆ ಎಂದು ಯಾದವರಾವ ಕನಸೆ ಆರೋಪಿಸಿದರು.

ಕಟ್ಟಡ ನಿರ್ಮಾಣ ಮಾಡಲು ಬೇಕಾಗುವ ಎಲ್ಲಾ ದಾಖಲಾತಿಗಳು ನಮ್ಮಲ್ಲಿವೆ. ಒಂದು ವೇಳೆ ನಾವು ಕಾನೂನುಬಾಹಿರವಾಗಿ ಕಟ್ಟಿದ್ದರೆ ಮುಖ್ಯಾಧಿಕಾರಿಗಳು ದಾಖಲಾತಿ ನೀಡಲಿ. ಭಾಲ್ಕಿಯ ಜೆಎಂಎಫ್‌ಸಿ ನ್ಯಾಯಾಲಯ ನಮ್ಮ ಪರವಾಗಿ ತೀರ್ಪು ನೀಡಿದೆ. ಅವರ ನಿವೇಶನದ ಹತ್ತಿರ ಹೋಗಬೇಡಿ ಎಂದು ಮುಖ್ಯಾಧಿಕಾರಿಗಳಿಗೆ ತಿಳಿಸಿದೆ. ಆದರೂ ನ್ಯಾಯಾಲಯದ ಆದೇಶವನ್ನೂ ಉಲ್ಲಂಘನೆ ಮಾಡಿರುವ ಆರೋಪ ಕೂಡಾ ಸಂಗಮೇಶ ಕಾರಬಾರಿ ಮೇಲಿದೆ. ಅದನ್ನೂ ಮೀರಿ ನಮ್ಮ ನಿವೇಶನದ ಕಂಪೌಂಡೆ ಒಡೆಸಿದ್ದಾರೆ. ಆದ್ದ-ರಿಂದ ಸರ್ಕಾರ ಅವರ ಮೇಲೆ ನ್ಯಾಯಾಲಯದ ಆದೇಶದ ಉಲ್ಲಂಘನೆ ಪ್ರಕಾರ ಕಾನೂನಿನ ಸೂಕ್ತ ಕ್ರಮ ಕೈಗೊಳ್ಳಬೇಕು. ನಮಗೆ ನ್ಯಾಯ ಒದಗಿಸಿಕೊಡಬೇಕೆಂದು ಪ್ರಕಟಣೆಯಲ್ಲಿ ಪಾಂಡುರಂಗ ಕನಸೆ ತಿಳಿಸಿದ್ದಾರೆ.

ಜಿಲ್ಲಾ ಉಸ್ತುವಾರಿ ಸಚಿವರು ಭಾಲ್ಕಿಯವರೇ ಇರುವುದರಿಂದ ಅವರ ಮೇಲೆ ಸಾಕಷ್ಟು ನಮಗೆ ಗೌರವವಿದೆ. ಈ ವಿಷಯ ಅರ್ಥೈಸಿಕೊಂಡು ಸಚಿವರು ನಮಗೆ ನ್ಯಾಯ

ಒದಗಿಸಿಕೊಡಬೇಕೆಂದು ಕನಸೆ ಕೋರಿದ್ದಾರೆ. ಇದೇ ವೇಳೆ ಅವರ ಮಗನಾದ ಪಾಂಡುರಂಗ ಕನಸೆ ಸುದ್ದಿಗೋಷ್ಠಿಯಲ್ಲಿ ಹಾಜರಿದ್ದರು.

# ಶ್ರೀ ಗುತ್ತಿ ಬಸವೇಶ್ವರ ಜಾತ್ರಾ ಮಹೋತ್ಸವ ನಿಮಿತ್ಯ ಗ್ರಾ.ಪಂ. ವತಿಯಿಂದ ಅನ್ನ ದಾಸೋಹ



ರಾಜಕುಮಾರ ಆರ್. ಹಡಪದ

(ಮಲ್ಲಮ್ಮ ನುಡಿ ವಾರ್ತೆ)

ಚಿಟಗುಪ್ಪ:- ತಾಲೂಕಿನ ನಿರ್ಣಾ ಗ್ರಾಮದ ಹೊರವಲಯದಲ್ಲಿರುವ ಶ್ರೀ ಗುತ್ತಿ ಬಸವೇಶ್ವರ ಜಾತ್ರಾ ಮಹೋತ್ಸವದ ನಿಮಿತ್ಯ ಪ್ರತಿ ವರ್ಷದಂತೆ ಈ ವರ್ಷವೂ ಕೂಡ ನಿರ್ಣಾ ಗ್ರಾಮ ಪಂಚಾಯತ್ ವತಿಯಿಂದ ಅನ್ನ ದಾಸೋಹ ಮಾಡಲಾಯಿತ್ತು. ಈ ಸಂದರ್ಭದಲ್ಲಿ ಗ್ರಾಮ ಪಂಚಾಯತ್ ಅಧ್ಯಕ್ಷೆ ಗೀತಾ ಮಂಜುನಾಥ್ ಜೋಗಣಿ, ಉಪಾಧ್ಯಕ್ಷ ಸಂಜೀವಕುಮಾರ ಕಿರಣ, ಸದಸ್ಯರಾದ ಲಕ್ಷ್ಮಣರಾವ ಸಾತನೋರ್, ಸತೀಶ ತೆಳಮನಿ, ಮಹೇಶ ಜೋಗಣಿ, ಗೋಪಾಲ್ ಜೋಗಣಿ, ಬಾಬು ಅಳಿಗಿಡ್ಡ, ಪ್ರಮುಖರಾದ ಡಾ. ರವಿ ಸ್ವಾಮಿ ನಿರ್ಣಾ, ವಿಜಯಕುಮಾರ ವಿಜಪುರೆ, ಶಿವು ಅಂಬಾಡಿ, ಲೋಕೇಶ, ವಾಜೀದ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಬೆಳಗಾವಿ ಕಮಿಷನರ್ ವಿರುದ್ಧ ಪ್ರಹ್ಲಾದ್ ಜೋಶಿ ವಾಗ್ದಾಳಿ

ಮಲ್ಲಮ್ಮ ನುಡಿ ವಾರ್ತೆ

ಹುಬ್ಬಳ್ಳಿ,ಡಿ.22- ಬೆಳಗಾವಿ ನಗರ ಪೊಲೀಸ್ ಆಯುಕ್ತ ಯಡಾ ಮಾರ್ಟಿನ್ ಹುದ್ದೆಗೆ ಅನ್ಫಿಟ್ ಎಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ತೀವ್ರ ವಾಗ್ದಾಳಿ ನಡೆಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೆಳಗಾವಿಯ ಸುವರ್ಣಸೌಧದಲ್ಲಿ ನಡೆದ ಘಟನೆಗೆ ಪೊಲೀಸ್ ಆಯುಕ್ತ ಯಡಾ



ಮಾರ್ಟಿನ್ ನೇರ ಕಾರಣ.

ಭದ್ರತೆ ಒದಗಿಸುವಲ್ಲಿ ಅವರು ಸಂಪೂರ್ಣವಾಗಿ ವಿಫಲರಾಗಿದ್ದಾರೆ. ಇಂಥವರು ಹುದ್ದೆಯಲ್ಲಿರಲು ಅನ್ಫಿಟ್ ಎಂದು ಕೆಂಡಕಾರಿದರು. ತಾವೊಬ್ಬ ಸಾರ್ವಜನಿಕ ಸೇವೆಯಲ್ಲಿದ್ದೇನೆ ಎಂಬುದನ್ನು ಮರೆತು ವಕ್ತಾರರಂತೆ ನಡೆದುಕೊಂಡಿದ್ದಾರೆ. ಮೊದಲು ಸರ್ಕಾರ ಆಯುಕ್ತ ಯಡಾ ಮಾರ್ಟಿನ್ ಅವರನ್ನು ಸೇವೆಯಿಂದ ಅಮಾನತುಪಡಿಸಬೇಕು. ಅವರ ವಿರುದ್ಧ ಕೇಂದ್ರ ಸರ್ಕಾರಕ್ಕೂ ದೂರು ನೀಡುವ ಬಗ್ಗೆ ಚಿಂತನೆ ನಡೆಸಲಾಗಿದೆ ಎಂದರು.

# ಸರ್ಕಾರಿ ನೌಕರರ ಸಂಘದಲ್ಲಿ ಬದಲಾವಣೆ ಪರ್ವ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಡಿ. 22 :- ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಬೀದರ್ ಜಿಲ್ಲಾ ಘಟಕದಲ್ಲಿ ಬದಲಾವಣೆ ಪರ್ವ ಆರಂಭಗೊಂಡಿದೆ. ಜಿಲ್ಲಾಧ್ಯಕ್ಷ, ಖಜಾಂಚಿ ಹಾಗೂ ರಾಜ್ಯ ಪರಿಷತ್ ಸದಸ್ಯ ಸ್ಥಾನಕ್ಕೆ ಶನಿವಾರ ನಡೆದ ಚುನಾವಣೆಯಲ್ಲಿ ಸೋಮಶೇಖರ ಬಿರಾದಾರ ಚಿದ್ರಿ ಬಣ ಭರ್ಜರಿ ಗೆಲುವು ಸಾಧಿಸಿದೆ.

ಸೋಮಶೇಖರ ಬಿರಾದಾರ ಅಧ್ಯಕ್ಷರಾಗಿ, ದೇವಪ್ಪ ಅವರು ಖಜಾಂಚಿ ಹಾಗೂ ರಾಜಕುಮಾರ ಮಾಳಗೆ ಅವರು ರಾಜ್ಯ ಪರಿಷತ್ ಸದಸ್ಯರಾಗಿ ಆಯ್ಕೆಯಾದರು.

ಹಿಂದಿನ ಎರಡು ಚುನಾವಣೆಗಳಲ್ಲಿ ಜಯಭೇರಿ ಬಾರಿಸಿ ಮೂರನೇ ಬಾರಿಗೆ ಅಧ್ಯಕ್ಷ ಸ್ಥಾನದ ಮೇಲೆ ಕಣ್ಣಿಟ್ಟು ಚುನಾವಣೆಯ ಕೊನೆಯ ಗಳಿಗೆವರೆಗೆ ರಾಜೇಂದ್ರಕುಮಾರ ಗಂದಗೆ ಹಾಗೂ ಅವರ ಬಣ ತೀವ್ರ ಕಸರತ್ತು ನಡೆಸಿತ್ತು. ಚುನಾವಣೆಗೆ ಮೂರ್ನಾಲ್ಕು ದಿನಗಳಿರುವಾಗ ಸೋಮಶೇಖರ ಬಿರಾದಾರ ಬಣವನ್ನು ಬೆಂಬಲಿಸಿ ಕಣದಿಂದ ಗಂದಗೆ ಹಿಂದೆ ಸರಿದರು. ಆಗಲೇ ಸೋಮಶೇಖರ ಬಿರಾದಾರ ಬಣ ಗೆಲ್ಲುವುದು ಖಚಿತವಾಗಿತ್ತು.

ಬಹುತೇಕ ನಿರ್ದೇಶಕರು ಈ ಸಲ ಬದಲಾವಣೆ ಬಯಸಿ ಸೋಮಶೇಖರ ಬಿರಾದಾರ ಅವರ ಬೆಂಬಲಕ್ಕೆ ನಿಂತಿದ್ದರು. ಚುನಾವಣೆಯಲ್ಲಿ ಆಗಬಹುದಾದ ದೊಡ್ಡ ಮುಖಭಂಗದಿಂದ ಗಂದಗೆ ಹಿಂದೆ ಸರಿದಿದ್ದರು ಎಂದು ಮೂಲಗಳು ತಿಳಿಸಿವೆ.

ಗಂದಗೆ ಅವರ ಬೆನ್ನಿಗಿದ್ದ ರಾಜ್ಯ ಘಟಕದ ಅಧ್ಯಕ್ಷ ಷಡಕ್ಷರಿ ಕೂಡ ಗಂದಗೆ ಬಣಕ್ಕೆ ಚುನಾವಣಾ ಕಣದಿಂದ ಹಿಂದೆ ಸರಿಯುವಂತೆ ಸೂಚಿಸಿದ್ದರು ಎನ್ನಲಾಗಿದೆ. ರಾಜ್ಯ ಘಟಕದ ಅಧ್ಯಕ್ಷ ಸ್ಥಾನದ ಚುನಾವಣೆಯ ಮೇಲೆ ಕಣ್ಣಿಟ್ಟು ಷಡಕ್ಷರಿ ಸೋಮಶೇಖರ ಬಿರಾದಾರ ಅವರನ್ನು ಬೆಂಬಲಿಸಲು ಗಂದಗೆ ಅವರಿಗೆ ತಾಕೀತು ಮಾಡಲು ಮುಖ್ಯ ಕಾರಣ ಎಂದು ತಿಳಿದು ಬಂದಿದೆ.

ಇಷ್ಟೇ ಅಲ್ಲ, ಚುನಾವಣೆಯ ಆರಂಭದಿಂದಲೂ ಎಲ್ಲ ರೀತಿಯ ರಣತಂತ್ರ ಹೆಣೆದು ಸೋಮಶೇಖರ ಬಿರಾದಾರ ಬಣದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದವರು ಬೆಂಗಳೂರಿನ ಆರ್‌ಟಿ.ಒ ಕಚೇರಿಯ ಸೂಪರಿಟೆಂಡೆಂಟ್ ರಾಜಶೇಖರ ಬಿರಾದಾರ ಚಿದ್ರಿ. ಸಹೋದರನ ಬಣದ ಗೆಲುವಿಗೆ ಬೇಕಾದ ಬೆಂಬಲ ಕ್ರೋಢೀಕರಿಸಿ, ನಿರ್ಣಾಯಕ ಘಟ್ಟಕ್ಕೆ ಕೊಂಡೊಯ್ದವರು ರಾಜಶೇಖರ ಚಿದ್ರಿ. ಈ ಕಾರಣದಿಂದಲೂ ಭರ್ಜರಿ ಜಯ ಸಿಕ್ಕಿದೆ.

ಇನ್ನು, ಈ ಹಿಂದಿನ ಎರಡೂ ಚುನಾವಣೆಗಳಲ್ಲಿ ಗಂದಗೆ ಅವರ ಗೆಲುವಿಗೆ ಶ್ರಮಿಸಿದ ಅನೇಕರನ್ನು ಗಂದಗೆ ಕಡೆಗಣಿಸಿದರು. ಅವರನ್ನು ಗುರಿ ಮಾಡಿದರು. ನೌಕರರ ಸಂಘದ ಹಣದ ವಹಿವಾಟಿನಲ್ಲೂ ಅಕ್ರಮ ನಡೆದಿದೆ ಎಂಬ ಗಂಭೀರ ಸ್ವರೂಪದ ಆರೋಪಗಳು ಅವರ ವಿರುದ್ಧ ಕೇಳಿ ಬಂದಿದ್ದವು.

ಅವಕಾಶ ಇತ್ತು. ಸೋಮಶೇಖರ ಬಿರಾದಾರ ಅವರಿಗೆ 68 ದೇವಪ್ಪ ಅವರಿಗೆ 67 ಹಾಗೂ ರಾಜಕುಮಾರ ಮಾಳಗೆ ಅವರಿಗೆ 66 ಮತಗಳು ಬಿದ್ದವು. ಯಾವುದೇ ತಂಟೆ ತಕರಾರು ಇಲ್ಲದೆ ಮತದಾನ ಮತ ಎಣಿಕೆ ಪ್ರಕ್ರಿಯೆ ಶಾಂತಿಯುತವಾಗಿ ನಡೆದಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಬಸವರಾಜ ಸ್ವಾಮಿ ತಿಳಿಸಿದ್ದಾರೆ.

ಹರ್ಷೋಲ್ಲಾಸ ವಿಜಯೋತ್ಸವ ಚುನಾವಣೆಯಲ್ಲಿ ಜಯಗಳಿಸುತ್ತಿದ್ದಂತೆ ಸೋಮಶೇಖರ ಬಿರಾದಾರ ಚಿದ್ರಿ ಅವರ ಬಣದಲ್ಲಿ ಹರ್ಷೋಲ್ಲಾಸ ಮನೆ ಮಾಡಿತು. ಅವರ ಬೆಂಬಲಿಗರು

ರಾಜ್ಯ ಘಟಕದ ಅಧ್ಯಕ್ಷ ಷಡಕ್ಷರಿ ಕೂಡ ಸಾಕ್ಷಿಯಾದರು. ಬಳಿಕ ಎಲ್ಲರನ್ನೂ ತೆರೆದ ಜೀಪಿನಲ್ಲಿ ಮೆರವಣಿಗೆ ಮಾಡಲಾಯಿತು.

ಅಂಕಿ ಅಂಶ

72 ಒಟ್ಟು ನಿರ್ದೇಶಕರ ಸ್ಥಾನ

70 ಚಲಾವಣೆಯಾದ ಮತಗಳು

68 ಸೋಮಶೇಖರ ಬಿರಾದಾರ ಪಡೆದ ಮತಗಳು

67 ದೇವಪ್ಪ ಪಡೆದ ಮತಗಳು

66 ರಾಜಕುಮಾರ ಮಾಳಗೆ ಪಡೆದ ಮತಗಳು

ಸೋಮಶೇಖರ ಬಿರಾದಾರ



ನೌಕರರ ಸಂಘದ ರಾಜ್ಯ ಘಟಕದ ಅಧ್ಯಕ್ಷ ಷಡಕ್ಷರಿ ನೂತನ ಜಿಲ್ಲಾಧ್ಯಕ್ಷ ಸೋಮಶೇಖರ ಬಿರಾದಾರ ಚಿದ್ರಿ ಹಾಗೂ ಇತರರನ್ನು ಸನ್ಮಾನಿಸಲಾಯಿತು.

ಚುನಾವಣೆಯಲ್ಲಿ ಇದೇ ವಿಷಯ ಪ್ರಮುಖವಾಗಿ ಪ್ರಸ್ತಾಪವಾಗಿತ್ತು. ಅಂತಿಮವಾಗಿ ಅದು ನೌಕರರು ಗಂದಗೆ ವಿರುದ್ಧ ತಿರುಗಿ ಬೀಳಲು ಕಾರಣವಾಯಿತು. ಮೂರನೇ ಸಲ ಅಧ್ಯಕ್ಷರಾಗಬೇಕೆನ್ನುವ ಗಂದಗೆ ಕನಸು ನುಚ್ಚು ನೂರಾಯಿತು.

ದೊಡ್ಡ ಅಂತರದ ಗೆಲುವು

ಚುನಾವಣೆಯಲ್ಲಿ ಸೋಮಶೇಖರ ಬಿರಾದಾರ ಚಿದ್ರಿ ಬಣ ದೊಡ್ಡ ಅಂತರದ ಗೆಲುವು ದಾಖಲಿಸಿದೆ. ಒಟ್ಟು 72 ನಿರ್ದೇಶಕರ ಪೈಕಿ 70 ಜನ ಹಕ್ಕು ಚಲಾಯಿಸಿದರು. ಒಬ್ಬ ಮತದಾರನಿಗೆ ಮೂವರು ಅಭ್ಯರ್ಥಿಗಳಿಗೆ ಹಕ್ಕು ಚಲಾಯಿಸಲು

ಹೂಮಾಲೆ ಹಾಕಿ ಜಯಘೋಷ ಹಾಕಿದರು. ನಗರದಲ್ಲಿ ವಿಜಯೋತ್ಸವ ಆಚರಿಸಿದರು. ಚುನಾವಣಾ ಫಲಿತಾಂಶ ಹೊರಬೀಳುವುದಕ್ಕೂ ಮುನ್ನವೇ ಅವರ ಬೆಂಬಲಿಗರು ನಗರದಲ್ಲಿ ಗೆಲುವಿನ ಶುಭಾಶಯ ಕೋರುವ ಫ್ಲೆಕ್ಸ್ ಗಳನ್ನು ನಗರದ ಪ್ರಮುಖ ರಸ್ತೆ ವೃತ್ತಗಳಲ್ಲಿ ಅಳವಡಿಸಿದ್ದರು.

ಫಲಿತಾಂಶ ಹೊರ ಬರುತ್ತಿದ್ದಂತೆ ಬೆಂಬಲಿಗರು ಕುಣಿದು ಕುಪ್ಪಳಿಸಿದರು. ಅಭ್ಯರ್ಥಿಗಳಿಗೆ ಜೆಸಿಬಿ ಮೂಲಕ ಹೂಮಳೆಗರೆದರು. ಪರಸ್ಪರ ಸಿಹಿ ವಿನಿಮಯ ಮಾಡಿಕೊಂಡರು. ಈ ಸಂದರ್ಭಕ್ಕೆ ನೌಕರರ ಸಂಘದ

ಚಿದ್ರಿ, ನೂತನ ಜಿಲ್ಲಾಧ್ಯಕ್ಷ ಸರ್ಕಾರಿ ನೌಕರರ ಸಂಘ ಹೆಚ್ಚು ಮತಗಳನ್ನು ಕೊಟ್ಟು ಸರ್ಕಾರಿ ನೌಕರರು ನನ್ನ ಹಾಗೂ ನನ್ನ ಬಣದವರನ್ನು ಗೆಲ್ಲಿಸಿದ್ದಾರೆ. ಅವರ ನಿರೀಕ್ಷೆಗೆ ತಕ್ಕಂತೆ ಎಲ್ಲರನ್ನೂ ಭರವಸೆಗೆ ತೆಗೆದುಕೊಂಡು ಕೆಲಸ ಮಾಡುವೆ ರಾಜಕುಮಾರ ಮಾಳಗೆ, ನೂತನ ರಾಜ್ಯಪರಿಷತ್ ಸದಸ್ಯ ಚುನಾವಣೆಯಲ್ಲಿ ಸೋಮಶೇಖರ ಬಿರಾದಾರ ಚಿದ್ರಿ ಬಣ ಗೆಲ್ಲುವುದು ಚುನಾವಣೆಗೆ ಮೊದಲೇ ಖಚಿತವಾಗಿತ್ತು. ದೊಡ್ಡ ಅಂತರದಿಂದ ಮತದಾರರು ಗೆಲ್ಲಿಸಿರುವುದಕ್ಕೆ ಕೃತಜ್ಞನಾಗಿದ್ದೇನೆ.

# ಲಿಂಗತ್ವ ಆಧಾರಿತ ದೌರ್ಜನ್ಯ ವಿರುದ್ಧ ಜಾಗೃತಿ ಅಭಿಯಾನ



(ಮಲ್ಲಪ್ಪಾ ಟಿ ಹಾಸಗೊಂಡ)

ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ: ತಾಲೂಕಿನ ಡಾರವಗಾಂವ ಗ್ರಾಮದಲ್ಲಿ ಲಿಂಗತ್ವ ಆಧಾರಿತ ದೌರ್ಜನ್ಯ ವಿರುದ್ಧ ರಾಷ್ಟ್ರೀಯ ಅಭಿಯಾನದ ಕಾರ್ಯಕ್ರಮ ನಡೆಯಿತು. ಪಿಡಿಒ ರೇವಣಸಿದ್ದಪ್ಪ ಮಾತನಾಡಿ, 'ಮಹಿಳೆ, ಪುರುಷ ಎನ್ನುವ ತಾರತಮ್ಯ ಸಮಾಜದಿಂದ ಸಂಪೂರ್ಣವಾಗಿ ಮುಕ್ತವಾದಲ್ಲಿ ಸಮಗ್ರ ಅಭಿವೃದ್ಧಿ ಸಾಧ್ಯ.

ಈ ನಿಟ್ಟಿನಲ್ಲಿ ಎನ್‌ಆರ್‌ಎಲ್‌ಎಂ ವತಿಯಿಂದ ನಿರಂತರವಾಗಿ ನಡೆಯುತ್ತಿರುವ ಜಾಗೃತಿ ಕಾರ್ಯ ಶ್ಲಾಘನೀಯ' ಎಂದು ಹರ್ಷವ್ಯಕ್ತಪಡಿಸಿದರು.

ಮುಖಂಡ ಪುಂಡಲೀಕರಾವ ಪಾಟೀಲ ಮಾತನಾಡಿ, 'ಮಹಿಳೆಯರ ಸಬಲೀಕರಣಕ್ಕಾಗಿ ಸರ್ಕಾರ ಹಾಗೂ ಸಂಘ ಸಂಸ್ಥೆಗಳು ಹಲವಾರು ಯೋಜನೆಗಳನ್ನು ಜಾರಿಗೊಳಿಸಿವೆ. ಎಲ್ಲರೂ ಸದುಪಯೋಗ ಪಡೆದು-ಕೊಂಡು ಸ್ವಾವಲಂಬಿ ಬದುಕು ಕಟ್ಟಿಕೊಳ್ಳಬೇಕು' ಎಂದು ಸಲಹೆ ನೀಡಿದರು. ಸಂಪನ್ಮೂಲ ವ್ಯಕ್ತಿ ರೇವಣಸಿದ್ದ ಜಾಡರ ಮಾತನಾಡಿದರು. ಗ್ರಾ.ಪಂ ಅಧ್ಯಕ್ಷೆ ಅಂಬಿಕಾ ಮಾಳಗೊಂಡ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷ ವೈಜಿನಾಥ ಚನಶೆಟ್ಟಿ, ಶ್ರೀಕೃಷ್ಣ ಸಂಜೀವಿನಿ ಮಹಿಳಾ ಒಕ್ಕೂಟ ಅಧ್ಯಕ್ಷೆ ಸುರೇಖಾ, ಕಾರ್ಯದರ್ಶಿ ಶಿವಾನಂದ, ಮಾಳಗೊಂಡ, ಕೃಷಿ ಸಖಿ ಸುಧಾರಾಣಿ, ಕಾಶೀನಾಥ ಸ್ವಾಮಿ, ಅನ್ನಪೂರ್ಣ ಮೇತ್ರೆ, ರಾಣಿ ಹಾಲಹಳ್ಳೆ, ಶ್ವೇತಾ, ಆರೋಗ್ಯ ಕೇಂದ್ರ, ಅಂಗನವಾಡಿ ಕಾರ್ಯಕತೆ-ರ್ಯರು, ಆಶಾ ಕಾರ್ಯಕತೆ-ರ್ಯರು, ಸ್ವಸಹಾಯ ಸಂಘಗಳ ಮಹಿಳೆಯರು ಭಾಗವಹಿಸಿದ್ದರು.

# ಜ್ಞಾನ ವಿಜ್ಞಾನ ಮೇಳದಲ್ಲಿ ಕಮಲನಗರ ಶಾಲೆ ಮಕ್ಕಳಿಯಿಂದ 31 ವಸ್ತು ಪ್ರದರ್ಶನ



(ಪರಮೇಶ ರಾಂಪುರೆ)

ಮಲ್ಲಮ್ಮ ನುಡಿ ವಾರ್ತೆ

ಕಮಲನಗರ:ಪೂಜ್ಯ ಶ್ರೀ ಮ. ಘ.ಚ. ಡಾ. ಚನ್ನಬಸವ ಪಟ್ಟದ್ದೇವರ 135ನೇ ಜಯಂತ್ಯುತ್ಸವ ಮತ್ತು ಜ್ಞಾನ ವಿಜ್ಞಾನ ಮೇಳ ಕಾರ್ಯಕ್ರಮ ರವಿವಾರ ಭಾಲ್ಕಿಯಲ್ಲಿ ಜರುಗಿ-ತು.ಮಕ್ಕಳಿಗಾಗಿ ಜ್ಞಾನ ವಿಜ್ಞಾನ ಮೇಳ ಕಾರ್ಯಕ್ರಮ ಆಯೋಜನೆ ಮಾಡಲಾಗಿತ್ತು. ಜಿಲ್ಲೆಯ ನೂರಾರು ಮಕ್ಕಳು ವಿಜ್ಞಾನ ಮೇಳೆದಲ್ಲಿ ಪಾಲ್ಗೊಂಡಿದ್ದರು.

ತಾಲೂಕಿನ ಗುರು ಕಾರುಣ್ಯ ಪಬ್ಲಿಕ ಶಾಲೆ, ಗುರುಪ್ಪ ಟೊಣ್ಣೆ ಪ್ರಾಥಮಿಕ ಮತ್ತು ಚನ್ನ ಬಸವ ಪ್ರೌಢಶಾಲೆ ಮಕ್ಕಳು ಒಟ್ಟು 31 ವಿವಿಧ ಅಂಶಗಳ ಮೇಲೆ ವಸ್ತು ಪ್ರದರ್ಶನದಲ್ಲಿ ಶಾಲೆಯ ಆಡಳಿತ ಅಧಿಕಾರಿ ಚನ್ನಬಸವ ಘಾಳೆ ಅವರ ನೇತೃತ್ವದಲ್ಲಿ ಭಾಗವಹಿಸಿ ಗಮನ ಸೆಳೆದರು.

ಚನ್ನಬಸವ ಘಾಳೆ ಅವರು ಈ ಸಂದರ್ಭದಲ್ಲಿ ಮಾತನಾಡಿ, ಇಂತಹ ವಿಜ್ಞಾನ ಮೇಳದಲ್ಲಿ ಭಾವಹಿಸಿದ ನೂರಾರು ಮಕ್ಕಳಿಗೆ ತಮ್ಮ ವಿಷಯವನ್ನು ಅರ್ಥ ಮಾಡಿಸುವದರಿಂದ ಅವರಿಗೆ ಆ ವಿಷಯ ಸಂಪೂರ್ಣ ಕರಗತ ವಾಗುತ್ತದೆ. ಮತ್ತು ಮಾತನಾಡವ ಧೈರ್ಯ ಬರುತ್ತದೆ ಎಂದು ಹೇಳಿದರು. ಮೇಘರಾಜ ಪವಾರ, ರಾಜಕುಮಾರ ಕಲಶೆಟ್ಟಿ ಸೇರಿದಂತೆ ಶಿಕ್ಷಕರು ಮಕ್ಕಳಿಗೆ ವಸ್ತು ಪ್ರದರ್ಶನ ಬಗ್ಗೆ ಮಾರ್ಗದರ್ಶನ ಮಾಡಿದರು. ವಿದ್ಯಾರ್ಥಿಗಳಾದ ರೂಪರಾಣಿ ನವನಥ, ಮಹೇಶ್ವರಿ ಅವಿನಾಶ, ಸಂಜನಾ ರಾಜಕುಮಾರ,ಪ್ರಜ್ಞಾ ಲಕ್ಷ್ಮಣ,ಭಕ್ತಿ ಶಿವಕುಮಾರ,ಸೃಷ್ಟಿ ಗುರನಾಥ,ನಂದಿನಿ ಸಂತೋಷ,ಸೃಷ್ಟಿ ಅನುಪ,ಪುಷ್ಪಾ ಸೋಮಶೇಖರ, ಯಲ್ಲಾಲಿಂಗ, ಚನ್ನಬಸವ, ರತನ, ಪ್ರೇಮಸಾಗರ, ಲಿಂಗರಾಜು, ಆಕಾಶ, ವಿರೇಶ, ಮಹೇಶ, ನಾಗರಾಜ, ಸಾಯಿ ಸೇರಿದಂತೆ ಅನೇಕರು ಇದ್ದರು.

# ಡಿಸೆಂಬರ್ 29ರಂದು ಶ್ರೀಶ್ರೀಶ್ರೀ ದತ್ತ ದಿಗಂಬರ ಮಾಣಿಕೇಶ್ವರ ರಥಾಲಯ ನಿರ್ಮಾಣ ಭೂಮಿ ಪೂಜೆ

(ರಾಜಕುಮಾರ ಆರ್.ಹಡಪದ)

ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ:- ಕಮಲಾಪುರ್ ತಾಲೂಕಿನ ಸೊಂತ ಗ್ರಾಮದ ಹೊರವಲಯದಲ್ಲಿರುವ ಶರಣ ಶಂಕರಲಿಂಗ ಮಹಾರಾಜರ ಆಶ್ರಮದಲ್ಲಿ ಇದೇ ಡಿಸೆಂಬರ್ 29 ರವಿವಾರ ದಿನದಂದು



ಕಲ್ಯಾಣ ಕರ್ನಾಟಕದಲೇ ಅತ್ಯಂತ ಬೃಹತ ಮಟ್ಟದ 51 ಅಡಿ ಎತ್ತರದ ಶ್ರೀಶ್ರೀಶ್ರೀ ದತ್ತ ದಿಗಂಬರ ಮಾಣಿಕೇಶ್ವರರ ರಥದ ರಥಾಲಯ ನಿರ್ಮಾಣ ಭೂಮಿ ಪೂಜೆ ಹಾಗೂ ಶಂಕುಸ್ಥಾಪನೆ ಕಾರ್ಯಕ್ರಮದ ದಿವ್ಯ ಸಾನಿಧ್ಯ ಶ್ರೀಶ್ರೀಶ್ರೀ ಬಾಲಯೋಗಿ ದತ್ತ ದಿಗಂಬರ ಶರಣ ಶಂಕರಲಿಂಗ ಮಹಾರಾಜರ ವಹಿಸಲಿದ್ದಾರೆ. ಗ್ರಾಮೀಣ ಮತ ಕ್ಷೇತ್ರದ ಶಾಸಕ ಬಸವರಾಜ ಬಿ. ಮತ್ತಿಮುಡ ಅವರ ಧರ್ಮಪತ್ನಿ ಜಯಶ್ರೀ ಬಿ. ಮತ್ತಿಮುಡ ಹಾಗೂ ಅವರ ಕುಟುಂಬದವರ ಘನ ಅಧ್ಯಕ್ಷತೆಯಲ್ಲಿ ಅದ್ಧು-ರಿಯಾಗಿ ಜರುಗಲಿದೆ. ಆದ ಕಾರಣ ಸಮಸ್ತ ಭಕ್ತಾಧಿಗಳು ಹೆಚ್ಚಿನ ಸಂಖ್ಯೆಯಲ್ಲಿ ಅಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Printed, Published and Owned by : Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad - 585330.
Editor: Ramesh Reddy. Office Ph. No: +91 9449732000.